1

# ರಾಜಕಾರಣ

ನಾಲ್ಕನೇ ಆವೃತ್ತಿ

**ಆಂಡ್ರ್ಯೂ ಹೇವುಡ್**

**ಪಾಲ್‌ಗ್ರೇವ್ ಮ್ಯಾಕ್‌ಮಿಲನ್**

### ಪಠಣ 1

### ಅಧ್ಯಾಯ –1

# ರಾಜಕಾರಣ ಎಂದರೇನು?

**'ಮನುಷ್ಯ ಸ್ವಭಾವತಃ ಒಂದು ರಾಜಕೀಯ ಜೀವಿ'**
**– ಅರಿಸ್ಟಾಟಲ್, ರಾಜಕಾರಣ, 1**

## ಮುನ್ನೋಟ

ರಾಜಕಾರಣ ಎನ್ನುವುದು ಒಂದು ಕೌತುಕಮಯ ಸಂಗತಿಯಾಗಿದೆ. ಏಕೆಂದರೆ ಜನ ಎಂದಿಗೂ ಭಿನ್ನಾಭಿಪ್ರಾಯ ಹೊಂದಿರುತ್ತಾರೆ. ಹೇಗೆ ಬದುಕಬೇಕು, ಯಾರಿಗೆ ಏನು ದೊರಕಬೇಕು, ಅಧಿಕಾರ ಮತ್ತು ಇತರ ಸಂಪನ್ಮೂಲಗಳನ್ನು ಹೇಗೆ ಹಂಚಬೇಕು, ಸಮಾಜ ಸಂಘರ್ಷವನ್ನಾಧರಿಸಬೇಕೇ ಅಥವಾ ಸಹಕಾರವನ್ನಾಶ್ರಯಿಸಬೇಕೇ? ಇವೇ ಮುಂತಾದ ವಿಷಯಗಳಲ್ಲಿ ಅವರ ನಡುವೆ ಎಂದಿಗೂ ಒಮ್ಮತ ಇರುವುದಿಲ್ಲ. ಇಂತಹ ಪ್ರಶ್ನೆಗಳನ್ನು ಹೇಗೆ ಬಗೆಹರಿಸಬೇಕು ಎಂಬ ವಿಷಯದಲ್ಲೂ ಅವರ ನಡುವೆ ಭಿನ್ನಾಭಿಪ್ರಾಯಗಳಿರುತ್ತವೆ. ಅಂದ ಮೇಲೆ ಒಮ್ಮತದ ನಿರ್ಧಾರ ತೆಗೆದುಕೊಳ್ಳುವುದು ಹೇಗೆ? ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕು ಅಥವಾ ಅಧಿಕಾರ ಯಾರಿಗಿರಬೇಕು? ಪ್ರತಿಯೊಬ್ಬ ವ್ಯಕ್ತಿಯೂ ಎಷ್ಟರ ಮಟ್ಟಿಗೆ ಪ್ರಭಾವಿಸಬಹುದು? ಇವೇ ಮುಂತಾದ ಪ್ರಶ್ನೆಗಳೂ ಉದ್ಭವಿಸುತ್ತವೆ. ಈ ಕಾರಣದಿಂದಾಗಿಯೆ ಅರಿಸ್ಟಾಟಲ್ ಪ್ರಕಾರ ರಾಜಕಾರಣವೆಂಬುದು 'ಅತಿಶ್ರೇಷ್ಠ ವಿಜ್ಞಾನ' (master science) ಆಗಿದೆ. ಅಂದರೆ ಜನ ತಮ್ಮ ಜೀವನವನ್ನು ಸುಧಾರಿಸಿಕೊಳ್ಳುವ ಮತ್ತು ಉತ್ತಮ ಸಮಾಜ ನಿರ್ಮಿಸುವ ಪ್ರಯತ್ನದಲ್ಲಿ ಕೈಗೊಳ್ಳುವ ಚಟುವಟಿಕೆಗಿಂತಲೂ ಮಿಗಿಲಿನ ಚಟುವಟಿಕೆ ಇಲ್ಲ. ಎಲ್ಲಕ್ಕಿಂತ ಮಿಗಿಲಾಗಿ ರಾಜಕಾರಣವೆಂಬುದು ಒಂದು ಸಾಮಾಜಿಕ ಚಟುವಟಿಕೆಯಾಗಿದೆ. ಇದು ಎಂದಿಗೂ ಸಂವಾದರೂಪಿಯಾಗಿರುತ್ತದೆ, ಸ್ವಗತವಾಗಿರುವುದಿಲ್ಲ. ರಾಬಿನ್ಸನ್ ಕ್ರೂಸೋರಂತಹ ಏಕಾಂಗಿ ವ್ಯಕ್ತಿಗಳು ಸರಳವಾದ ಆರ್ಥಿಕತೆ ಅಭಿವೃದ್ಧಿಪಡಿಸಬಹುದು, ಕಲಾನಿರ್ಮಿತಿ ಮಾಡಬಹುದು. ಆದರೆ ಅಂತಹವರು ರಾಜಕೀಯದಲ್ಲಿ ತೊಡಗಲಾರರು. ಮ್ಯಾನ್(ವುಮನ್) ಫ್ರೈಡೆಯ ಪ್ರವೇಶದೊಂದಿಗೆ ರಾಜಕಾರಣದ ಪ್ರವೇಶವೂ ಆಗುತ್ತದೆ. ಅಲ್ಲದೇ ರಾಜಕಾರಣದ ಪ್ರಮುಖ ಅಂಶವಾಗಿರುವ ಭಿನ್ನಾಭಿಪ್ರಾಯವು ಈ ರಾಜಕಾರಣವೆಂಬ ವಿಷಯದ ಸ್ವರೂಪದ ನಿರ್ವಚನದವರೆಗೂ ವಿಸ್ತರಿಸುತ್ತದೆ. ಅಂದರೆ ಈ ವಿಷಯವನ್ನು ಹೇಗೆ ಅಧ್ಯಯಿಸಬೇಕು ಎಂಬ ವಿಷಯದಲ್ಲೂ ಭಿನ್ನಾಭಿಪ್ರಾಯಗಳಿರುತ್ತವೆ. ಸಾಮಾಜಿಕ ವ್ಯವಹಾರಗಳು 'ರಾಜಕೀಯ' ಸ್ವರೂಪ ಪಡೆದುಕೊಳ್ಳಲು ಕಾರಣವಾಗುವ ಅಂಶಗಳಾವುವು ಎಂಬ ವಿಷಯದಲ್ಲೂ ಜನರಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. ಸಾಮಾಜಿಕ ವ್ಯವಹಾರ ಸಂಭವಿಸುವ ಸ್ಥಳ (ಸರ್ಕಾರದೊಳಗೆ, ಸಾಮಾನ್ಯವಾಗಿ ಪ್ರಭುತ್ವ ಅಥವಾ

**Commented [MJS1]:** ತಾವು ಹೇಗೆ ಬದುಕಬೇಕು ಎನ್ನುವುದರ ಬಗ್ಗೆ

**Commented [C2]:** as a reference to Man Friday in Robinson Crusoe. Hence kept it as thus.

ಸಾರ್ವಜನಿಕ ಕ್ಷೇತ್ರ) ಅದಕ್ಕೆ ಕಾರಣವೋ ಅಥವಾ ಆ ವ್ಯವಹಾರ ಒಳಗೊಳ್ಳುವ ಚಟುವಟಿಕೆ ಕಾರಣವೋ (ಸಂಘರ್ಷವನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವುದೋ ಅಥವಾ ಕಡಮೆ ಶಕ್ತಿಯುಳ್ಳ ಗುಂಪುಗಳ ಮೇಲೆ ನಿಯಂತ್ರಣ ಹೊಂದುವ ಮೂಲಕ ಬಗೆಹರಿಸಿಕೊಳ್ಳುವುದೋ) ಎಂಬ ವಿಷಯದಲ್ಲೂ ಭಿನ್ನಾಭಿಪ್ರಾಯಗಳಿರುತ್ತವೆ. ರಾಜಕಾರಣದ ಸ್ವರೂಪವನ್ನು ಒಂದು ಶೈಕ್ಷಣಿಕ ಅಧ್ಯಯನವಾಗಿ ಪರಿಭಾವಿಸುವಲ್ಲಿ ಭಿನ್ನಮತವಿದೆ ಎಂದಾದಲ್ಲಿ ಅದರರ್ಥ ಆ ಅಧ್ಯಯನ ಹಲವು ಬಗೆಯ ಸೈದ್ಧಾಂತಿಕ ವಿಧಾನ ಮತ್ತು ಅನೇಕ ಭಿನ್ನ ದೃಷ್ಟಿಕೋನಗಳನ್ನು ಹೊಂದಿರುವ ಗುಂಪುಗಳ ವಿಶ್ಲೇಷಣೆಯನ್ನೂ (schools of analysis) ಒಳಗೊಂಡಿರುತ್ತವೆ ಎಂದಾಗುತ್ತದೆ. ಅಂತಿಮವಾಗಿ ಜಾಗತೀಕರಣದ ಪ್ರವೃತ್ತಿಯಿಂದಾಗಿ ಕೆಲವರು ರಾಜಕಾರಣ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳ ನಡುವಿನ ಶೈಕ್ಷಣಿಕ ವಿಭಜನೆ ಸದ್ಯಕ್ಕೆ ಅನಗತ್ಯ ವಿಭಜನೆಯಾಗಿದೆ ಎಂದು ಆಲೋಚಿಸತೊಡಗಿದ್ದಾರೆ.

**ಪ್ರಮುಖ ಅಂಶಗಳು**

- ರಾಜಕಾರಣವನ್ನು ಒಂದು ಚಟುವಟಿಕೆಯಂತೆ ವ್ಯಾಖ್ಯಾನಿಸಬಹುದಾದ ಅದರ ವಿಶಿಷ್ಟತೆಗಳಾವುವು?
- ವಿವಿಧ ಚಿಂತಕರು ಹಾಗೂ ಪರಂಪರೆಗಳು 'ರಾಜಕಾರಣ'ವನ್ನು ಹೇಗೆ ಅರ್ಥ ಮಾಡಿಕೊಂಡಿವೆ?
- ರಾಜಕಾರಣವನ್ನು ಒಂದು ಶೈಕ್ಷಣಿಕ ವಿಷಯವಾಗಿ ಅಧ್ಯಯನ ಮಾಡಬಹುದಾದ ಪ್ರಮುಖ ವಿಧಾನಗಳಾವುವು?
- ರಾಜಕಾರಣದ ಅಧ್ಯಯನ 'ವೈಜ್ಞಾನಿಕ' ಎನಿಸಿಕೊಳ್ಳಬಲ್ಲುದೇ?
- ರಾಜಕಾರಣದ ವಿಶ್ಲೇಷಣೆಯಲ್ಲಿ ಪರಿಕಲ್ಪನೆಗಳು, ಮಾದರಿಗಳು ಮತ್ತು ಸಿದ್ಧಾಂತಗಳು ವಹಿಸುವ ಪಾತ್ರವೇನು?
- ಜಾಗತೀಕರಣ ' ಪ್ರಕ್ರಿಯೆಗಳು ರಾಜಕಾರಣ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳ ನಡುವಿನ ಸಂಬಂಧವನ್ನು ಹೇಗೆ ಪ್ರಭಾವಿಸಿವೆ?

## ರಾಜಕಾರಣವನ್ನು ವ್ಯಾಖ್ಯಾನಿಸುವುದು

ಲೋಕದ ಜನ ಯಾವ ಚಟುವಟಿಕೆಯ ಮೂಲಕ ತಾವು ಬದುಕುವ ಪರಿಸರದಲ್ಲಿ ಸಾಮಾನ್ಯ ನಿಯಮಗಳನ್ನು ರೂಪಿಸುತ್ತಾರೋ, ಸಂರಕ್ಷಿಸುತ್ತಾರೋ, ತಿದ್ದುಪಡಿ ಮಾಡುತ್ತಾರೋ ಆ

ಚಟುವಟಿಕೆಯನ್ನು ವಿಶಾಲಾರ್ಥದಲ್ಲಿ 'ರಾಜಕಾರಣ' ಎನ್ನಬಹುದು. ರಾಜಕಾರಣ ಒಂದು ಶೈಕ್ಷಣಿಕ ವಿಷಯವಾಗಿದೆಯಾದರೂ (ಕೆಲವೊಮ್ಮೆ ಅದರ ಮಹತ್ವವನ್ನು ಒತ್ತಿಹೇಳಲು, ರಾಜಕಾರಣವನ್ನು (ಇಂಗ್ಲಿಷ್ ದೊಡ್ಡಕ್ಷರ) P ಬಳಕೆಯ ಮೂಲಕ ಸೂಚಿಸಲಾಗುತ್ತದೆ) ಸ್ಪಷ್ಟವಾಗಿ ಇದು 'ರಾಜಕಾರಣ' ಎಂಬ ಚಟುವಟಿಕೆಯ ಅಧ್ಯಯನವಾಗಿದೆ. ಹಾಗಾಗಿ ರಾಜಕಾರಣವು **ಸಂಘರ್ಷ** ಹಾಗೂ **ಸಹಕಾರ** ಎಂಬ ವಿದ್ಯಮಾನಗಳೊಂದಿಗೆ ಅವಿನಾವಭಾವ ಸಂಬಂಧ ಹೊಂದಿದೆ. ಒಂದೆಡೆ ಪರಸ್ಪರ ವಿರುದ್ಧ ಅಭಿಪ್ರಾಯಗಳು, ವೈವಿಧ್ಯಮಯ ಬೇಡಿಕೆಗಳು, ಪರಸ್ಪರ ವಿರೋಧಾತ್ಮಕ ಅಗತ್ಯಗಳು, ಭಿನ್ನ ಹಿತಾಸಕ್ತಿಗಳು ಜನ ಬದುಕುತ್ತಿರುವ ವ್ಯವಸ್ಥೆಗೆ ಆಧಾರವಾದ ನಿಯಮಗಳ ವಿಷಯದಲ್ಲಿ ಭಿನ್ನಾಭಿಪ್ರಾಯ ಮೂಡಿಸಿದರೆ ಮತ್ತೊಂದೆಡೆ, ಈ ನಿಯಮಗಳ ಮೇಲೆ ಪ್ರಭಾವ ಬೀರಲು ಅಥವಾ ಈ ನಿಯಮಗಳನ್ನು ಎತ್ತಿಹಿಡಿಯಲಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ತಾವು ಇತರರೊಂದಿಗೆ ಕೈಜೋಡಿಸಲೇ ಬೇಕಾಗುತ್ತದೆ ಎಂಬುದನ್ನು ಜನ ಕಂಡುಕೊಂಡಿದ್ದಾರೆ. ಆದ್ದರಿಂದಲೇ ಹಾನಾ ಆರೆಂಟ್ (Hannah Arendt) ಅವರು ರಾಜಕಾರಣವನ್ನು 'ಸಾಂಗತ್ಯಪೂರ್ಣ ಚಟುವಟಿಕೆ' ಎಂದು ವ್ಯಾಖ್ಯಾನಿಸುತ್ತಾರೆ (ನೋಡಿ ಪುಟ. ೭). ಆದ್ದರಿಂದಲೇ ಎಷ್ಟೋ ಸಲ ರಾಜಕಾರಣವನ್ನು ಘರ್ಷಣೆಯ ಪರಿಹಾರದ ಒಂದು ಪ್ರಕ್ರಿಯೆ ಎಂದು ನಿರ್ವಚಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವೈರುಧ್ಯಕರ ಅಭಿಪ್ರಾಯಗಳ ಅಥವಾ ಪರಸ್ಪರ ವಿರೋಧಾತ್ಮಕ ಹಿತಾಸಕ್ತಿಗಳ ನಡುವೆ ಸಮನ್ವಯ ಸಾಧಿಸಲಾಗುತ್ತದೆ. ಆದಾಗ್ಯೂ ವಿಶಾಲಾರ್ಥದಲ್ಲಿ ರಾಜಕಾರಣವನ್ನು ಘರ್ಷಣೆಯ ಪರಿಹಾರಕ್ಕೆಂದು ಒಂದು *ಹುಡುಕಾಟವಾಗಿದೆ* ಎನ್ನಬಹುದೇ ವಿನಾ ಘರ್ಷಣಾ ಪರಿಹಾರದ ಗುರಿಯನ್ನು ಸಾಧಿಸುವ ಒಂದು ಸಾಧಕವೆಂದು ಪರಿಭಾವಿಸಲಾಗದು. ಏಕೆಂದರೆ ಎಲ್ಲಾ ಘರ್ಷಣೆಗಳನ್ನು ಪರಿಹರಿಸಬಹುದೆಂದಾಗಲಿ ಅಥವಾ ಅವುಗಳಿಗೆ ಪರಿಹಾರಗಳಿವೆ ಎಂದಾಗಲಿ ಭಾವಿಸಲಾಗುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಲೋಕದಲ್ಲಿನ ವೈವಿಧ್ಯ (ನಾವೆಲ್ಲರೂ ಒಂದೇ ತರಹದವರಲ್ಲ) ಮತ್ತು ಕೊರತೆಗಳು (ಲೋಕದಲ್ಲಿ ಯಾವುದೂ ಪರ್ಯಾಪ್ತವಲ್ಲ) ರಾಜಕಾರಣವನ್ನು ಮನುಷ್ಯ ಬದುಕಿನ ಒಂದು ಅನಿವಾರ್ಯ ಲಕ್ಷಣವನ್ನಾಗಿ ಮಾಡಿವೆ.

'ರಾಜಕಾರಣ'ದ ಅರ್ಥವನ್ನು ಸ್ಪಷ್ಟಪಡಿಸಲು ಹೊರಡುವ ಯಾವುದೇ ಪ್ರಯತ್ನ ಎರಡು ಪ್ರಮುಖ ಸಮಸ್ಯೆಗಳನ್ನು ಗಮನದಲ್ಲಿ ಇರಿಸಿಕೊಂಡಿರತಕ್ಕದ್ದು. ಮೊದಲನೆಯದಾಗಿ, ನಮ್ಮ ದೈನಂದಿನ ಭಾಷಾ ಬಳಕೆಯಲ್ಲಿ ಆ ಪದ ಹೊಂದಿರುವ ಅರ್ಥವೈವಿಧ್ಯ, ಸರಳವಾಗಿ ಹೇಳುವುದಾದರೆ ರಾಜಕಾರಣ ಎಂಬುದು 'ಹಲವಾರು ಅಧಿಕಾರ್ಥ' ಗಳನ್ನು ಪಡೆದುಕೊಂಡಿರುವ ಒಂದು ಪದವಾಗಿದೆ. ಅರ್ಥಶಾಸ್ತ್ರ, ಭೂಗೋಳ, ಇತಿಹಾಸ, ಜೀವಶಾಸ್ತ್ರ ಮುಂತಾದ ಪದಗಳನ್ನು ಬಹುತೇಕ ಜನ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ಎಂದು ಸರಳವಾಗಿ ಭಾವಿಸುತ್ತಾರೆ. ಆದರೆ ರಾಜಕಾರಣದ ಬಗ್ಗೆ ಯಾವುದೇ ಪೂರ್ವಸಿದ್ಧ ಪರಿಕಲ್ಪನೆಗಳನ್ನು ಹೊಂದಿರದೆ ಇರುವವರು ಬಹಳ ಕಡಿಮೆ. ಉದಾಹರಣೆಗೆ, ರಾಜಕಾರಣದ ವಿದ್ಯಾರ್ಥಿಗಳು ಹಾಗೂ ಬೋಧಕರು ಒಂದಲ್ಲ ಒಂದು ರೀತಿಯಲ್ಲಿ

ಪಕ್ಷಪಾತ ಬುದ್ಧಿಯವರಾಗಿರಲೇ ಬೇಕು ಎಂದೇ ಬಹುತೇಕರು ಭಾವಿಸುತ್ತಾರೆ. ಅಂತಹವರಿಗೆ ಈ ತರಹದ ವಿಷಯಗಳನ್ನು ನಿಷ್ಪಕ್ಷಪಾತವಾಗಿ ನಿರ್ಲಿಪ್ತವಾಗಿ ಅಧ್ಯಯಿಸಬಹುದು ಎಂದು ನಂಬಲು ಕಷ್ಟವಾಗುತ್ತದೆ (ನೋಡಿ ಪುಟ. 19). ರಾಜಕಾರಣವನ್ನು ಒಂದು 'ಕಲುಷಿತ' ಪದ ಎಂದು ಭಾವಿಸಲಾಗುವುದರಿಂದ ಈ ವಿಷಯವು ಇನ್ನಷ್ಟು ಹದಗೆಡುತ್ತದೆ. ಏಕೆಂದರೆ ಇದು ಉಪದ್ರವ, ಅಡಚಣೆ, ಹಿಂಸಾಚಾರಗಳನ್ನು ಸೃಷ್ಟಿಸುತ್ತದೆ ಜೊತೆಗೆ ಮೋಸ, ಕೈವಾಡ, ವಂಚನೆಗಳನ್ನೂ ಒಳಗೊಂಡಿರುತ್ತದೆ ಎನ್ನುವ ಚಿತ್ರವನ್ನು ಸೃಷ್ಟಿಸುತ್ತದೆ. ಈ ಬಗೆಯ ಸಹ ಸಂಬಂಧಿಸುವಿಕೆಗಳು ಹೊಸತೇನಲ್ಲ. 1775ರಷ್ಟು ಹಿಂದೆಯೇ ಸ್ಯಾಮ್ಯುಲ್ ಜಾನ್ಸನ್ (Samuel Johnson) ರಾಜಕಾರಣವನ್ನು ನಿರಾಕರಿಸುತ್ತಾ 'ಅದು ಪ್ರಪಂಚದಲ್ಲಿ ಮೇಲೇರಲು ಇರುವ ಒಂದು ಮಾರ್ಗೋಪಾಯ' ಎಂದಿದ್ದ. 19ನೇ ಶತಮಾನದ ಅಮೆರಿಕಾದ ಇತಿಹಾಸಜ್ಞ ಹೆನ್ರಿ ಆಡಮ್ಸ್ (Henry Adams) ರಾಜಕಾರಣವನ್ನು 'ದ್ವೇಷದ ಒಂದು ವ್ಯವಸ್ಥಿತ ಸಂಘಟನೆ' ಎಂದು ವ್ಯಾಖ್ಯಾನಿಸಿದ್ದ.

ವ್ಯಾಖ್ಯಾನಿಸುವಲ್ಲಿ ಎದುರಾಗುವ ಮತ್ತೊಂದು ಪರಿಹರಿಸಲಾಗದ ಕಷ್ಟವೆಂದರೆ ಬಹಳ ಗೌರವಾನ್ವಿತ ವಿದ್ವಾಂಸ ತಜ್ಞರಲ್ಲೂ ಸಹ ಈ ಅಧ್ಯಯನ ವಿಷಯ ಯಾವುದನ್ನು ಕುರಿತದ್ದಾಗಿದೆ ಎಂಬ ವಿಷಯದಲ್ಲಿ ಒಮ್ಮತವಿಲ್ಲ. ಅಧಿಕಾರ ಚಲಾಯಿಸುವುದು, ಸರ್ಕಾರವನ್ನು ನಡೆಸುವ ವಿಜ್ಞಾನ, ಸಾಮೂಹಿಕ ನಿರ್ಧಾರ ತೆಗೆದುಕೊಳ್ಳುವುದು, ಕೊರತೆಯುಳ್ಳ ಸಂಪನ್ಮೂಲಗಳ ಹಂಚಿಕೆ, ವಂಚನೆ ಮಾಡುವುದು ಮತ್ತು ಕೈವಾಡಗಳನ್ನು ಹೂಡುವುದು – ಹೀಗೆ ರಾಜಕಾರಣವನ್ನು ವಿವಿಧ ರೂಪಗಳಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಪಠ್ಯದಲ್ಲಿ ನೀಡಲಾಗಿರುವ ವ್ಯಾಖ್ಯಾನಗಳ ವಿಶೇಷತೆ ಏನಂದರೆ – ಸಾಮಾನ್ಯ ಸಾಮಾಜಿಕ ನಿಯಮಗಳ ರಚನೆ, ಸಂರಕ್ಷಣೆ ಮತ್ತು ತಿದ್ದುಪಡಿ – ಎಲ್ಲವನ್ನೂ ಅಲ್ಲದಿದ್ದರೂ, ಬಹುತೇಕ ಪರಸ್ಪರ ವಿರೋಧಾತ್ಮಕ ವ್ಯಾಖ್ಯಾನಗಳನ್ನು ವ್ಯಾಪಕವಾಗಿ ಒಳಗೊಳ್ಳುತ್ತದೆ. ಆದಾಗ್ಯೂ ವ್ಯಾಖ್ಯಾನವನ್ನು ಬಿಡಿಸಿ ನೋಡಿದಾಗ  ಅಥವಾ ಅರ್ಥ ಪರಿಷ್ಕೃತಗೊಂಡಿದ್ದಾಗ ಸಮಸ್ಯೆ ಉದ್ಭವಿಸುವುದುಂಟು. ಉದಾಹರಣೆಗೆ, ನಿಯಮಗಳನ್ನು ರಚಿಸುವ, ಸಂರಕ್ಷಿಸುವ, ತಿದ್ದುಪಡಿ ಮಾಡುವ ಒಂದು ನಿರ್ದಿಷ್ಟ ವಿಧಾನವನ್ನು (ಅಂದರೆ ಶಾಂತಿಯುತವಾಗಿ, ಚರ್ಚೆಯ ಮೂಲಕ) 'ರಾಜಕಾರಣ' ಎಂದು ಕರೆಯಬೇಕೋ ಅಥವಾ ಅಂತಹ ಪ್ರಕ್ರಿಯೆಯನ್ನು ಒಳಗೊಂಡ ಎಲ್ಲಾ ವಿಧಾನಗಳನ್ನೂ ರಾಜಕಾರಣವೆಂದು ಕರೆಯಬೇಕೋ? ಅದೇ ರೀತಿ ಎಲ್ಲಾ ಸಾಮಾಜಿಕ ಸಂದರ್ಭದಲ್ಲೂ, ಸಂಸ್ಥೆಗಳಲ್ಲೂ ರಾಜಕಾರಣವನ್ನು ಅನುಸರಿಸಲಾಗುತ್ತದೆಯೇ ಅಥವಾ ಕೆಲವೆಡೆ ಮಾತ್ರ (ಅಂದರೆ ಸರ್ಕಾರ, ಆಡಳಿತ ಮತ್ತು ಸಾರ್ವಜನಿಕ ಜೀವನದಲ್ಲಿ ಮಾತ್ರ) ಅನುಸರಿಸಲಾಗುತ್ತದೆಯೇ?

ಈ ದೃಷ್ಟಿಕೋನದಿಂದ ರಾಜಕಾರಣವನ್ನು 'ಮೂಲಭೂತವಾಗಿ ಚರ್ಚಾಸ್ಪದ' ಪರಿಕಲ್ಪನೆ ಎಂದು ಪರಿಗಣಿಸಬಹುದು. ಅಂದರೆ ಈ ಪರಿಕಲ್ಪನೆಗೆ ಹಲವು ಸ್ವೀಕಾರಾರ್ಹವಾದ ಅಥವಾ

ನ್ಯಾಯಯುತವಾದ ಅರ್ಥಗಳಿವೆ (ಪರಿಕಲ್ಪನೆಗಳನ್ನು ನಂತರ ಅಧ್ಯಾಯದಲ್ಲಿ ಹೆಚ್ಚು ವಿವರವಾಗಿ ಚರ್ಚಿಸಲಾಗಿದೆ). ಇನ್ನೊಂದು ವಿಧದಲ್ಲಿ, ಈ ವಿವಿಧ ದೃಷ್ಟಿಕೋನಗಳು ಒಂದೇ ಅಸ್ಪಷ್ಟ ಪರಿಕಲ್ಪನೆಯ ವ್ಯತಿರಿಕ್ತ ನಿಲುವುಗಳನ್ನು ಒಳಗೊಂಡಿರಬಹುದು. ನಾವು ಪರಸ್ಪರ ವೈರುಧ್ಯಕರ ಪರಿಕಲ್ಪನೆಗಳನ್ನು ಚರ್ಚಿಸುತ್ತಿರಲಿ ಅಥವಾ ಪರ್ಯಾಯ ಪರಿಕಲ್ಪನೆಗಳನ್ನು ವಿವೇಚಿಸುತ್ತಿರಲಿ, ರಾಜಕಾರಣವನ್ನು ನಿರ್ವಚಿಸುವ ಎರಡು ವ್ಯಾಪಕ ವಿಧಾನಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಸಹಾಯಕರವಾಗಿರಬಹುದು (Hay (ಹೇ), ೨೦೦೨; Leftwich (ಲೆಫ್ಟ್‌ವಿಚ್), ೨೦೦೪). ಮೊದಲಿಗೆ, ರಾಜಕಾರಣವು ಒಂದು ನಿರ್ದಿಷ್ಟ *ಕಣ* ಅಥವಾ ಸ್ಥಳದೊಂದಿಗೆ ಸಂಬಂಧ ಹೊಂದಿರುತ್ತದೆ. ಹಾಗಿದ್ದಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಸಂಭವಿಸುವ ವರ್ತನೆಯು 'ರಾಜಕಾರಣ' ಎನಿಸಿಕೊಳ್ಳುತ್ತದೆ. ಎರಡನೆಯದಾಗಿ, ರಾಜಕಾರಣವನ್ನು ಒಂದು *ಪ್ರಕ್ರಿಯೆ* ಅಥವಾ ಕಾರ್ಯವಿಧಾನದಂತೆ ನೋಡಲಾಗುತ್ತದೆ. ಇಂತಹ ಸನ್ನಿವೇಶದಲ್ಲಿ 'ರಾಜಕೀಯ' ವರ್ತನೆಯು ತನ್ನದೇ ಆದ ವಿಶಿಷ್ಟ ಗುಣ ಅಥವಾ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಆದ್ದರಿಂದ ರಾಜಕಾರಣವು ಯಾವುದೇ ಸ್ಥಳದಲ್ಲಿ ಮತ್ತು ಬಹುಶಃ ಎಲ್ಲಾ ಸಾಮಾಜಿಕ ಸಂದರ್ಭಗಳಲ್ಲೂ ಸಂಭವಿಸಬಹುದು. ಇಂತಹ ಪ್ರತಿಯೊಂದು ವ್ಯಾಪಕ ವಿಧಾನವೂ ರಾಜಕಾರಣಕ್ಕೆ ಪರ್ಯಾಯ ವ್ಯಾಖ್ಯಾನಗಳನ್ನೂ ನೀಡಿದೆ ಮತ್ತು ನಂತರ ಈ ಅಧ್ಯಾಯದಲ್ಲಿ ಚರ್ಚಿಸಿದಂತೆ, ಈ ವಿಧಾನಗಳು ರಾಜಕೀಯ ವಿಶ್ಲೇಷಣೆಯ ವಿವಿಧ ದೃಷ್ಟಿಕೋನಗಳನ್ನು ಹೊಂದಿರುವ ಗುಂಪುಗಳನ್ನು ರೂಪಿಸಿವೆ (ನೋಡಿ ಚಿತ್ರ ೧.೧). ವಾಸ್ತವವಾಗಿ, 'ರಾಜಕಾರಣ ಎಂದರೇನು?' ಎಂಬ ಚರ್ಚೆಯನ್ನು ಪರಿಶೀಲಿಸುವುದು ಸೂಕ್ತ. ಏಕೆಂದರೆ ಅದು ಈ ವಿಷಯದ ಶೈಕ್ಷಣಿಕ ಅಧ್ಯಯನದಲ್ಲಿ ಕೆಲವು ಗಹನವಾದ ಬೌದ್ಧಿಕ, ಸೈದ್ಧಾಂತಿಕ ಭಿನ್ನಭಿಪ್ರಾಯಗಳು ಇರುವುದನ್ನು ಬಹಿರಂಗಪಡಿಸುತ್ತವೆ.

| | **ರಾಜಕಾರಣ ಒಂದು ಕಣವಾಗಿ** | **ರಾಜಕಾರಣ ಒಂದು ಪ್ರಕ್ರಿಯೆಯಾಗಿ** |
|---|---|---|
| ರಾಜಕಾರಣದ ವ್ಯಾಖ್ಯಾನಗಳು | ಸರ್ಕಾರವನ್ನು ನಡೆಸುವ ಕಲೆ<br>ಸಾರ್ವಜನಿಕ ವ್ಯವಹಾರ | ರಾಜಿ, ಒಮ್ಮತ<br>ಅಧಿಕಾರ ಮತ್ತು ಸಂಪನ್ಮೂಲಗಳ ಹಂಚಿಕೆ |
| ರಾಜಕಾರಣದ ಅಧ್ಯಯನದ ವಿಧಾನಗಳು | ವರ್ತನಾವಾದ<br>ವೈಚಾರಿಕ ಆಯ್ಕೆ ಸಿದ್ಧಾಂತ<br>ಸಾಂಸ್ಥಿಕ ವ್ಯವಸ್ಥೆಯ | ಸ್ತ್ರೀವಾದ<br>ಮಾರ್ಕ್ಸ್‌ವಾದ<br>ಪ್ರತ್ಯಕ್ಷೈಕ ಪ್ರಮಾಣೋತ್ತರವಾದ |

| | | |
|---|---|---|
| | ಅಧ್ಯಯನ | (post-positivist) ವಿಧಾನಗಳು |

ಚಿತ್ರ 1.1 ರಾಜಕಾರಣವನ್ನು ನಿರ್ವಚಿಸುವ ವಿಧಾನಗಳು

**ಸರ್ಕಾರವನ್ನು ನಡೆಸುವ ಕಲೆಯಾಗಿ ರಾಜಕಾರಣ**

'ರಾಜಕಾರಣ ಒಂದು ವಿಜ್ಞಾನವಲ್ಲ... ಅದೊಂದು ಕಲೆ', ಈ ಮಾತುಗಳನ್ನು ಚ್ಯಾನ್ಸೆಲರ್ ಬಿಸ್ಮಾರ್ಕ್ (Chancellor Bismarck) ಜರ್ಮನ್ ಸಂಸತ್ತಿನಲ್ಲಿ (Reichstag) ನುಡಿದಿದ್ದ ಎಂಬುದು ಪ್ರತೀತಿ. ಅದನ್ನು ಕಲೆ ಎಂದು ಕರೆಯುವಾಗ ಬಿಸ್ಮಾರ್ಕ್ ಮನಸ್ಸಿನಲ್ಲಿ ಸರ್ಕಾರವನ್ನು ನಡೆಸುವ ಕಲೆ, ಸಾಮೂಹಿಕ ನಿರ್ಧಾರಗಳನ್ನು ರೂಪಿಸಿ ಜಾರಿಗೆ ತರುವ ಮೂಲಕ ಸಮಾಜದೊಳಗೆ ನಿಯಂತ್ರಣ ಸಾಧಿಸುವುದು ಎಂಬ ಅರ್ಥ ಇದ್ದಿರಬೇಕು. ಇದು ಪ್ರಾಯಶಃ ಪ್ರಾಚೀನ ಗ್ರೀಸ್‌ನಲ್ಲಿ ಬಳಸಲಾದ ಪರಿಭಾಷೆಯ ಮೂಲಾರ್ಥದಿಂದ ವಿಕಾಸಗೊಂಡ ರಾಜಕಾರಣದ ಆದರ್ಶಪ್ರಾಯವಾದ ವ್ಯಾಖ್ಯಾನವಿರಬಹುದು.

ರಾಜಕಾರಣ ಅರ್ಥಾತ್ 'ಪಾಲಿಟಿಕ್ಸ್' ಎಂಬ ಪದವು *'ಪೋಲಿಸ್'* ಅಕ್ಷರಶಃ 'ನಗರ–ರಾಜ್ಯ' ಎಂಬ ಪದದಿಂದ ನಿಷ್ಪನ್ನವಾಗಿದೆ. ಪ್ರಾಚೀನ ಗ್ರೀಕ್ ಸಮಾಜವು ಸ್ವತಂತ್ರ ನಗರ–ರಾಜ್ಯಗಳ ಸಮೂಹದ ವಿಂಗಡಣೆಯಾಗಿತ್ತು. ಅಂತಹ ಪ್ರತಿಯೊಂದು ನಗರ–ರಾಜ್ಯವೂ ತನ್ನದೇ ಆಡಳಿತ ವ್ಯವಸ್ಥೆ ಹೊಂದಿತ್ತು. ಅವುಗಳ ಪೈಕಿ ಅಥೆನ್ಸ್ ಅತಿ ದೊಡ್ಡದಾದ ಅತ್ಯಂತ ಪ್ರಭಾವಿಯಾದ ನಗರ–ರಾಜ್ಯವಾಗಿತ್ತು. ಇದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ ತೊಟ್ಟಿಲು ಎಂದೂ ಕರೆಯುವುದುಂಟು. ಈ ಹಿನ್ನೆಲೆಯಲ್ಲಿ ರಾಜಕಾರಣವನ್ನು *ನಗರ–ರಾಜ್ಯ (ಪೋಲಿಸ್)* ವ್ಯವಹಾರಗಳು, '*ಪೋಲಿಸ್‌ಗೆ* ಸಂಬಂಧ ಪಟ್ಟಿದ್ದು' ಎಂದು ಅರ್ಥ ಮಾಡಿಕೊಳ್ಳಬಹುದಾಗಿದೆ. 'ದೇಶಕ್ಕೆ ಸಂಬಂಧಪಟ್ಟಿದ್ದು' ಎಂದು ಈ ವ್ಯಾಖ್ಯಾನಕ್ಕೆ ಆಧುನಿಕ ರೂಪ ನೀಡಬಹುದಾಗಿದೆ (ನೋಡಿ ಪುಟ. 57). ರಾಜಕಾರಣದ ಈ ಪರಿಭಾಷೆಯನ್ನು ನಾವು ನಮ್ಮ ದೈನಂದಿನ ವ್ಯವಹಾರದಲ್ಲೂ ಬಳಸುತ್ತೇವೆ: ಸಾರ್ವಜನಿಕ ಅಧಿಕಾರ ಹೊಂದಿರುವವರ ಬಗ್ಗೆ ನಾವು 'ಅವರು ರಾಜಕೀಯದಲ್ಲಿದ್ದಾರೆ' ಎನ್ನುತ್ತೇವೆ. ಒಂದು ವೇಳೆ ಸಾರ್ವಜನಿಕ ಅಧಿಕಾರ ಹೊಂದುವ ಪ್ರಯತ್ನ ನಡೆಸುತ್ತಿದ್ದರೆ ಆಗ ನಾವು 'ಅವರು ರಾಜಕೀಯ ಪ್ರವೇಶಿಸುತ್ತಿದ್ದಾರೆ' ಎನ್ನುತ್ತೇವೆ. ಶೈಕ್ಷಣಿಕ ರಾಜಕೀಯ ವಿಜ್ಞಾನವೂ ಸಹ ಈ ವ್ಯಾಖ್ಯಾನವನ್ನು ಮುಂದುವರಿಸಲು ಸಹಾಯ ಮಾಡಿದೆ.

ರಾಜಕಾರಣವೆಂಬುದು 'ದೇಶಕ್ಕೆ ಸಂಬಂಧಪಟ್ಟುದು' ಎಂಬ ಸಾಂಪ್ರದಾಯಿಕ ದೃಷ್ಟಿಯು ಶೈಕ್ಷಣಿಕ ಅಧ್ಯಯನವು ಸಿಬ್ಬಂದಿ ವರ್ಗ ಹಾಗೂ ಆಡಳಿತ ವ್ಯವಸ್ಥೆಯ ಮೇಲೆ

ಕೇಂದ್ರೀಕರಿಸುವುದನ್ನು ಹಲವು ವಿಧಗಳಲ್ಲಿ ಪ್ರತಿಬಿಂಬಿಸಿತು. ರಾಜಕೀಯ ಅಧ್ಯಯನವೆಂಬುದು ಮುಖ್ಯವಾಗಿ ಸರ್ಕಾರವನ್ನು ನಡೆಸುವುದರ ಅಧ್ಯಯನವಾಗಿದೆ, ಅಥವಾ ವಿಶಾಲಾರ್ಥದಲ್ಲಿ ಹೇಳುವುದಾದರೆ ಅಧಿಕಾರ ಚಾಲನೆಯ ಅಧ್ಯಯನವಾಗಿದೆ. ಅಮೆರಿಕಾದ ಪ್ರಭಾವೀ ರಾಜಕೀಯ ವಿಜ್ಞಾನಿ ಡೇವಿಡ್ ಈಸ್ಟನ್ (David Easton) (೧೯೭೯, ೧೯೮೧) ತನ್ನ ಬರವಣಿಗೆಗಳಲ್ಲಿ ಈ ಅಭಿಪ್ರಾಯವನ್ನು ವಿವರಿಸುತ್ತಾನೆ. ಆತ ರಾಜಕಾರಣವನ್ನು 'ಮೌಲ್ಯಗಳ ಅಧಿಕಾರಯುತ ನಿರ್ಧಾರ' ಎಂದು ಕರೆದಿದ್ದ. ಇದರರ್ಥ, ರಾಜಕಾರಣವು ಸಮಾಜದಿಂದ ಉಂಟಾಗುವ ಒತ್ತಡಗಳಿಗೆ, ನಿರ್ದಿಷ್ಟವಾಗಿ ಲಾಭ, ಪರಿಹಾರ ಅಥವಾ ದಂಡವನ್ನು ನಿರ್ಧರಿಸುವ ಮೂಲಕ, ಸರ್ಕಾರವು ಸ್ಪಂದಿಸಬಹುದಾದ ವಿವಿಧ ಪ್ರಕ್ರಿಯೆಗಳನ್ನು ಒಳಗೊಳ್ಳುತ್ತದೆ. ಆದ್ದರಿಂದ 'ಅಧಿಕಾರಯುತ ಮೌಲ್ಯಗಳು' ಸಮಾಜದಲ್ಲಿ ವ್ಯಾಪಕವಾಗಿ ಸ್ವೀಕೃತವಾದುದಾಗಿದೆ ಮತ್ತು ನಾಗರಿಕ ಸಮುದಾಯ ಇದಕ್ಕೆ ಬದ್ಧವಾಗಿರಬೇಕಾಗುತ್ತದೆ ಎಂದು ಭಾವಿಸಲಾಗಿದೆ. ಈ ದೃಷ್ಟಿಯಲ್ಲಿ ರಾಜಕಾರಣವು 'ನೀತಿ ನಿಯಮ' ಗಳಿಗೆ ಸಂಬಂಧಿಸಿದ್ದಾಗಿದೆ (ನೋಡಿ ಪುಟ. ೩೫೨): ಅಂದರೆ ಒಂದು ಸಮುದಾಯಕ್ಕೆ ಕಾರ್ಯ ಯೋಜನೆಯನ್ನು ರೂಪಿಸುವ ಒಂದು ಅಧಿಕೃತವಾದ ಅಥವಾ ಅಧಿಕಾರಯುತವಾದ ನಿರ್ಧಾರಗಳಾಗಿವೆ.

ಈ ವ್ಯಾಖ್ಯಾನದ ಗಮನಾರ್ಹವಾದ ಅಂಶವೆಂದರೆ ಇದು ರಾಜಕಾರಣವನ್ನು ಬಹಳ ಸೀಮಿತವಾದ ದೃಷ್ಟಿಯಲ್ಲಿ ಪರಿಭಾವಿಸುತ್ತದೆ. **ರಾಜಕೀಯ ವ್ಯವಸ್ಥೆ (polity)ಯೊಳಗೆ** ಏನು ನಡೆಯುತ್ತದೆಯೊ ಅದು ರಾಜಕೀಯ. ಇದೊಂದು ಸರ್ಕಾರಿ ಯಂತ್ರದ ಮೇಲೆ ಕೇಂದ್ರೀಕೃತವಾಗಿರುವ ಸಾಮಾಜಿಕ ಸಂಘಟನೆಯಾಗಿದೆ. ಆದ್ದರಿಂದ ರಾಜಕಾರಣವನ್ನು ಕ್ಯಾಬಿನೆಟ್ ರೂಮ್‌ಗಳಲ್ಲಿ, ಶಾಸನಾ ಸಭೆಗಳಲ್ಲಿ, ಸರ್ಕಾರಿ ಇಲಾಖೆ ಮುಂತಾದವುಗಳಲ್ಲಿ ಮಾಡಲಾಗುತ್ತದೆ, ಮತ್ತು ಇಂತಹ ರಾಜಕಾರಣದಲ್ಲಿ ಸೀಮಿತವಾದ ಹಾಗೂ ನಿರ್ದಿಷ್ಟವಾದ ಗುಂಪಿನ ಜನಗಳು ಮಾತ್ರ, ಅಂದರೆ ರಾಜಕಾರಿಣಿಗಳು, ನಾಗರಿಕ ಸೇವಕರು, ಪ್ರಭಾವಿಸುವ ಸಾಮರ್ಥ್ಯ ಹೊಂದಿರುವವರು (lobbyists) ಮಾತ್ರ, ತೊಡಗಿರುತ್ತಾರೆ. ಅಂದರೆ ಇದರರ್ಥ ಬಹುತೇಕ ಜನರು, ಬಹುತೇಕ ಸಂಸ್ಥೆಗಳು ಹಾಗೂ ಬಹುತೇಕ ಸಾಮಾಜಿಕ ಚಟುವಟಿಕೆಗಳನ್ನು ರಾಜಕಾರಣದಿಂದ 'ಹೊರಗೆ' ಇರುವುದಾಗಿ ನೋಡಲಾಗುತ್ತದೆ. ವ್ಯಾಪಾರ ವಹಿವಾಟು, ಶಾಲೆ ಮತ್ತು ಇತರ ಶಿಕ್ಷಣ ಸಂಸ್ಥೆಗಳು, ಸಮುದಾಯಿಕ ಗುಂಪುಗಳು, ಕುಟುಂಬ ಇತ್ಯಾದಿಗಳು ಈ ಅರ್ಥದಲ್ಲಿ 'ರಾಜಕೀಯೇತರ' ದವುಗಳಾಗಿರುತ್ತವೆ. ಏಕೆಂದರೆ ಅವು 'ದೇಶವನ್ನು ಮುನ್ನಡೆಸುವ' ಕೆಲಸದಲ್ಲಿ ತೊಡಗಿರುವುದಿಲ್ಲ. ಅದೇ ರೀತಿಯಲ್ಲಿ ರಾಜಕಾರಣವನ್ನು ಮೂಲಭೂತವಾಗಿ ಪ್ರಭುತ್ವಕ್ಕೆ ಸೀಮಿತವಾದ ಚಟುವಟಿಕೆ ಎಂದು ಬಿಂಬಿಸುವುದೂ ಸಹ ತಪ್ಪಾಗುತ್ತದೆ. ಏಕೆಂದರೆ ಆಗ ಆಧುನಿಕ ಬದುಕಿನ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತಿರುವ ಅಂತಾರಾಷ್ಟ್ರೀಯ ಅಥವಾ ಜಾಗತಿಕ ವಿದ್ಯಮಾನಗಳನ್ನು ನಿರ್ಲಕ್ಷಿಸಿದಂತಾಗುತ್ತದೆ. ಇದನ್ನು ಮುಂದಿನ ಮುಖ್ಯ ಭಾಗದಲ್ಲಿ ಚರ್ಚಿಸಲಾಗಿದೆ.

ಆದಾಗ್ಯೂ, ಈ ವ್ಯಾಖ್ಯಾನವನ್ನು ಇನ್ನಷ್ಟು ಸಂಕುಚಿತಗೊಳಿಸಬಹುದು. ರಾಜಕಾರಣವನ್ನು ರಾಜಕೀಯ ಪಕ್ಷಗಳ ಚಟುವಟಿಕೆ ಎಂಬಂತೆ ನೋಡುವುದು ಸಹಜ. ಅಂದರೆ, ಪ್ರಜ್ಞಾಪೂರ್ವಕವಾದ ಸೈದ್ಧಾಂತಿಕ ನಂಬಿಕೆಗಳಿಂದ ಪ್ರೇರಿತರಾಗಿ ಮತ್ತು ಅವುಗಳನ್ನು ತಾವು ಸದಸ್ಯರಾಗಿರುವ ರಾಜಕೀಯ ಪಕ್ಷದಂತಹ ಔಪಚಾರಿಕ ಸಂಘಟನೆಗಳ ಮೂಲಕ ಮುಂದುವರೆಸಿಕೊಂಡು ಹೋಗುವುದಕ್ಕೆ 'ರಾಜಕೀಯ' ವಲಯವನ್ನು ಸೀಮಿತಗೊಳಿಸಲಾಗುತ್ತದೆ. ಈ ಅರ್ಥದಲ್ಲಿ ರಾಜಕಾರಿಣಿಗಳನ್ನು 'ರಾಜಕೀಯದವರು' ಎಂದೂ, ನಾಗರಿಕ ಸೇವಕರನ್ನು 'ರಾಜಕೀಯೇತರರು' ಎಂದೂ ನಾವು ಕಾಣುತ್ತೇವೆ. ನಾಗರಿಕ ಸೇವಕರು ಎಲ್ಲಿಯವರೆಗೂ ತಟಸ್ಥವಾಗಿ, ವೃತ್ತಿಪರವಾಗಿ ವರ್ತಿಸುವರೋ ಅಲ್ಲಿಯವರೆಗೂ ಅವರು 'ರಾಜಕೀಯೇತರ'ರಾಗಿ ಇರುತ್ತಾರೆ. ಇದೇ ರೀತಿ ನ್ಯಾಯಾಧೀಶರುಗಳನ್ನು, ಅವರು ಎಲ್ಲಿಯವರೆಗೆ ವೈಯಕ್ತಿಕ ಆದ್ಯತೆಗಳಿಂದಲೋ ಅಥವಾ ಯಾವುದೋ ಪೂರ್ವಗ್ರಹದಿಂದಲೋ ಪ್ರಭಾವಿತರಾಗದೇ ನಿಷ್ಪಕ್ಷಪಾತವಾಗಿ, ಲಭ್ಯವಿರುವ ಪುರಾವೆಗಳ ಅನುಸಾರವಾಗಿ ತೀರ್ಪು ನೀಡುತ್ತಾರೋ ಅಲ್ಲಿಯವರೆಗೆ ಅವರನ್ನು, 'ರಾಜಕೀಯೇತರ'ರು ಎಂದೇ ಭಾವಿಸಲಾಗುತ್ತದೆ.

ರಾಜಕೀಯ ಅದೇಕೆ ಅನೇಕ ಸಂದರ್ಭಗಳಲ್ಲಿ ನಕಾರಾತ್ಮಕವಾದ ಅಥವಾ ನಿಕೃಷ್ಟವಾದ ಅರ್ಥ ಪಡೆದಿದೆ ಎಂಬುದನ್ನು ಅರಿಯಲು ರಾಜಕಾರಣ ಮತ್ತು ಒಂದು ಪ್ರಭುತ್ವದ ವ್ಯವಹಾರಗಳ ನಡುವಿನ ಸಂಬಂಧವೂ ನೆರವಾಗುತ್ತದೆ. ಸಾಮಾನ್ಯ ಜನ ರಾಜಕೀಯವನ್ನು ರಾಜಕಾರಿಣಿಗಳ ಕಾರ್ಯಚಟುವಟಿಕೆಗಳು ಎಂದೇ ಭಾವಿಸಿರುತ್ತಾರೆ. ಇನ್ನೂ ಕಟುವಾಗಿ ಹೇಳಬೇಕೆಂದರೆ, ರಾಜಕಾರಿಣಿಗಳನ್ನು ಅಧಿಕಾರ ದಾಹಿಗಳಾದ ವೇಷಢಂಬಕರು, ಜನಸೇವೆಯ ಹೆಸರಿನಲ್ಲಿ, ಸೈದ್ಧಾಂತಿಕ ಬದ್ಧತೆಯ ನೆವದಲ್ಲಿ ತಮ್ಮ ಸ್ವಾರ್ಥವನ್ನು ನೆರವೇರಿಸಿಕೊಳ್ಳುವವರು ಎಂದೇ ಪರಿಗಣಿಸಲ್ಪಡುತ್ತಾರೆ. ಆಧುನಿಕ ಕಾಲದಲ್ಲಂತೂ ಮಾಧ್ಯಮಗಳ ಬಯಲುಮಾಡುವಿಕೆಯು ತೀವ್ರಗೊಂಡಿರುವುದರಿಂದಾಗಿ ಭ್ರಷ್ಟಾಚಾರ, ಅಪ್ರಾಮಾಣಿಕತೆಗಳು ಸುಲಭವಾಗಿ ಬೆಳಕಿಗೆ ಬರುತ್ತಿರುವ ಸನ್ನಿವೇಶದಲ್ಲಿ ಈ ಭಾವನೆ ಇನ್ನೂ ಹೆಚ್ಚಾಗಿ ಕಂಡುಬರುತ್ತಿದೆ, **ರಾಜಕೀಯ ವಿರೋಧಿ (anti-politics)** ನಿಲುವು (ಇದನ್ನು ಅಧ್ಯಾಯ ೨೦ರಲ್ಲಿ ಪರಿಶೀಲಿಸಲಾಗಿದೆ) ತಲೆಯೆತ್ತಲಾರಂಭಿಸಿದೆ. ರಾಜಕಾರಣವೆಂಬುದು ಸ್ವಹಿತಾಸಕ್ತಿಯುಳ್ಳ, ಎರಡು ಮುಖವುಳ್ಳ, ಯಾವುದೇ ನೈತಿಕ ಬದ್ಧತೆ ಇಲ್ಲದ ಚಟುವಟಿಕೆಯಾಗಿದೆ ಎಂಬ ಅಭಿಪ್ರಾಯವೇ ಸಾಂಪ್ರದಾಯಿಕ ರಾಜಕೀಯ ಬದುಕಿನ ಸಿಬ್ಬಂದಿವರ್ಗ ಮತ್ತು ಆಡಳಿತ ವ್ಯವಸ್ಥೆಯನ್ನು ತಿರಸ್ಕರಿಸುವುದಕ್ಕೆ ಕಾರಣವಾಗಿದೆ. ಈ ಅಭಿಪ್ರಾಯದಿಂದಾಗಿ ರಾಜಕೀಯವೆಂಬುದು 'ಕುತಂತ್ರ', 'ಹುನ್ನಾರ' ಮುಂತಾದ ಅವಹೇಳನಕಾರಿಯಾದ ಬಿರುದುಗಳನ್ನು ಪಡೆದಿರುವುದು. ನಿಕೊಲೊ ಮಾಕ್ಯವೆಲ್ಲಿ (Niccolo Machiavelli)ಯ ಬರವಣಿಗೆಗಳಲ್ಲಿಯೂ ರಾಜಕೀಯದ ಕುರಿತ ಈ ತರಹದ ಅಭಿಪ್ರಾಯಗಳನ್ನು ಗುರುತಿಸಬಹುದು. ಮಾಕ್ಯವೆಲ್ಲಿ *'The Prince (ದಿ ಪ್ರಿನ್ಸ್)'* ((೧೫೩೨) ೧೯೬೧) ಎಂಬ ಕೃತಿಯನ್ನು ಬರೆದಿದ್ದಾನೆ. ಇದರಲ್ಲಿ

ಅವನು ರಾಜಕೀಯದ ಬಗ್ಗೆ ಒಂದು ನಿಖರವಾದ ವಾಸ್ತವಿಕ ಆಖ್ಯಾನವನ್ನು ಬೆಳೆಸಿ ರಾಜಕೀಯ ನಾಯಕರುಗಳು ಬಳಸುವ ಕುತಂತ್ರ, ಕ್ರೌರ್ಯ, ಕೈವಾಡಗಳತ್ತ ಓದುಗರ ಗಮನ ಸೆಳೆಯುತ್ತಾನೆ.

ರಾಜಕಾರಣದ ಕುರಿತಾದ ಈ ನಕಾರಾತ್ಮಕ ನಿಲುವು ಮೂಲಭೂತವಾಗಿ ಉದಾರವಾದಿ ಧೋರಣೆಯನ್ನು ಪ್ರತಿಫಲಿಸುತ್ತದೆ. ಅದರ ಪ್ರಕಾರ ಮನುಷ್ಯನಾದವನು ಸ್ವಹಿತಾಸಕ್ತಿ ಉಳ್ಳವನಾಗಿದ್ದು ರಾಜಕಾರಣ ಅವನನ್ನು ಭ್ರಷ್ಟಗೊಳಿಸುತ್ತದೆ ಏಕೆಂದರೆ ಸ್ವಹಿತಾಸಕ್ತಿಗಾಗಿ ತಮ್ಮ ಸ್ಥಾನದ ದುರ್ಬಳಕೆ ಮಾಡಿಕೊಳ್ಳುವಂತೆ, ಅನ್ಯರಿಗೆ ಹಾನಿಯಾಗುವಂತೆ, ಆ ಅಧಿಕಾರ ಸ್ಥಾನವು 'ಅಧಿಕಾರದಲ್ಲಿರುವವರನ್ನು' ಪ್ರೇರೇಪಿಸುತ್ತದೆ. ಲಾರ್ಡ್ ಆಕ್ಟನ್ (Lord Acton) ನ (೧೮೩೪–೧೯೦೨) ಪ್ರಸಿದ್ಧ ನಾಣ್ಣುಡಿಯೂ ಇದನ್ನೇ ವ್ಯಕ್ತಪಡಿಸುವುದು 'ಅಧಿಕಾರ ಭ್ರಷ್ಟಗೊಳಿಸುತ್ತದೆ, ನಿರುಪಾಧಿಕ ಅಧಿಕಾರ ವ್ಯಕ್ತಿಯನ್ನು ಸಂಪೂರ್ಣ ಭ್ರಷ್ಟನನ್ನಾಗಿ ಮಾಡುತ್ತದೆ'. ಅದೇನೇ ಇದ್ದರೂ, ರಾಜಕೀಯದ ಬಗ್ಗೆ ಈ ರೀತಿ ಯೋಚಿಸುವವರು ರಾಜಕೀಯ ಚಟುವಟಿಕೆಯು ಸಾಮಾಜಿಕ ಬದುಕಿನ ಅನಿವಾರ್ಯವಾದ, ಶಾಶ್ವತವಾದ ಲಕ್ಷಣವಾಗಿದೆ ಎಂದು ನಂಬುವುದಿಲ್ಲ. ರಾಜಕಾರಿಣಿಗಳು ಎಷ್ಟೇ ಭ್ರಷ್ಟರಿರಲಿ ಅವರು ಯಾವಾಗಲೂ ನಮ್ಮೊಂದಿಗೆ ಇದ್ದೇ ಇರುತ್ತಾರೆ ಎಂಬುದು, ಕಷ್ಟಕರವಾದರೂ ಒಪ್ಪಿತವಾಗಿರುವ, ಒಂದು ಸಾಮಾನ್ಯ ನಂಬಿಕೆಯಾಗಿದೆ. ಮೌಲ್ಯಗಳನ್ನು ಅಧಿಕಾರಯುತವಾಗಿ ನಿರ್ಧರಿಸಲು ಒಂದಲ್ಲ ಒಂದು ಬಗೆಯ ವ್ಯವಸ್ಥೆ ಇಲ್ಲದೇ ಹೋದಲ್ಲಿ ಸಮಾಜ ವಿಘಟನೆಗೊಳ್ಳುತ್ತದೆ, ಪ್ರತಿಯೊಬ್ಬನೂ ಉಳಿದವರೆಲ್ಲರ ಮೇಲೆ ಯುದ್ಧ ಸಾರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಆರಂಭಿಕ ಸಾಮಾಜಿಕ ಒಪ್ಪಂದ ಸಿದ್ಧಾಂತವಾದಿಗಳು ಪ್ರತಿಪಾದಿಸಿದ್ದರು (ನೋಡಿ ಪುಟ. ೬೨). ಆದ್ದರಿಂದ ರಾಜಕಾರಿಣಿಗಳನ್ನು ತೆಗೆದುಹಾಕಿ ರಾಜಕೀಯಕ್ಕೆ ಅಂತ್ಯ ಹಾಡುವುದು ಪರಿಹಾರವಲ್ಲ. ಬದಲಾಗಿ ರಾಜಕೀಯ ಚಟುವಟಿಕೆಯು ಸರ್ಕಾರಿ ಅಧಿಕಾರದ ದುರ್ಬಳಕೆ ಆಗದಿರುವುದನ್ನು ಖಾತರಿಪಡಿಸುವ ನಿರ್ಬಂಧಗಳ ಮತ್ತು ಅಧಿಕಾರ ಹಂಚುವಿಕೆಯ ಮೂಲಕ ಸಮತೋಲನವನ್ನು ಕಾಪಾಡುವ ಚೌಕಟ್ಟಿನ ಒಳಗಡೆ ನಡೆಯುತ್ತಿದೆ ಎನ್ನುವುದನ್ನು ಖಚಿತಪಡಿಸುವುದು ನಮ್ಮ ಮುಂದಿರುವ ಹೊಣೆಗಾರಿಕೆಯಾಗಿದೆ.

**ಸಾರ್ವಜನಿಕ ವ್ಯವಹಾರವಾಗಿ ರಾಜಕಾರಣ**

ರಾಜಕಾರಣದ ಎರಡನೆಯ ಮತ್ತು ಇನ್ನೂ ವಿಶಾಲವಾದ ಪರಿಕಲ್ಪನೆಯು ಸರ್ಕಾರಿ ಆಡಳಿತವೆಂಬ ಸೀಮಿತವಾದ ಚಟುವಟಿಕೆಯನ್ನೂ ಅತಿಕ್ರಮಿಸಿ ಬೆಳೆಯುತ್ತದೆ. ಅಲ್ಲಿ ರಾಜಕಾರಣವೆಂಬುದು 'ಸಾರ್ವಜನಿಕ ಬದುಕು' ಅಥವಾ 'ಸಾರ್ವಜನಿಕ ವ್ಯವಹಾರ' ಆಗುತ್ತದೆ. ಬೇರೊಂದು ರೀತಿಯಲ್ಲಿ ಹೇಳುವುದಾದರೆ 'ರಾಜಕೀಯ' ಮತ್ತು 'ರಾಜಕೀಯೇತರ' ನಡುವಿನ ವ್ಯತ್ಯಾಸವು ಮೂಲಭೂತವಾಗಿ ಸಾರ್ವಜನಿಕ ಜೀವನದ ಕ್ಷೇತ್ರ ಮತ್ತು ಖಾಸಗಿ ಎಂದು ಭಾವಿಸಬಹುದಾದ ವಲಯದ ನಡುವಿನ ವಿಭಜನೆಯೊಂದಿಗೆ ಹೊಂದಿಕೆಯಾಗುತ್ತದೆ. ರಾಜಕಾರಣದ ಬಗ್ಗೆ ಅಂತಹದೊಂದು ದೃಷ್ಟಿಯು ಪ್ರಸಿದ್ಧ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲನ ಕೃತಿಗಳಲ್ಲಿ

ಗುರುತಿಸಬಹುದಾಗಿದೆ. ಅರಿಸ್ಟಾಟಲ್ ತನ್ನ '*Politics (ಪಾಲಿಟಿಕ್ಸ್)*' ಕೃತಿಯಲ್ಲಿ 'ಮನುಷ್ಯ ಸ್ವಭಾವತಃ ಒಂದು ರಾಜಕೀಯ ಪ್ರಾಣಿ' ಎಂದು ಘೋಷಿಸಿದ. ಅಂದರೆ ಒಂದು ರಾಜಕೀಯ ಸಮುದಾಯದಲ್ಲಿ ಮಾತ್ರ ಮನುಷ್ಯರು 'ಒಳ್ಳೆಯ ಬದುಕು' ನಡೆಸಬಹುದು. ಈ ದೃಷ್ಟಿಯಿಂದ ನೋಡುವುದಾದರೆ ರಾಜಕೀಯವೆಂಬುದು ಒಂದು 'ನ್ಯಾಯಯುತ ಸಮಾಜ' ನಿರ್ಮಿಸುವ ಆಶಯವಿರುವ ಒಂದು ನೈತಿಕ ಚಟುವಟಿಕೆಯಾಗಿದೆ. ಆದ್ದರಿಂದಲೇ ಅರಿಸ್ಟಾಟಲ್ ರಾಜಕಾರಣವನ್ನು 'ಅತಿಶ್ರೇಷ್ಠ ವಿಜ್ಞಾನ' ಎಂದು ಕರೆದದ್ದು.

ಆದಾಗ್ಯೂ, 'ಸಾರ್ವಜನಿಕ' ಮತ್ತು 'ಖಾಸಗಿ' ಬದುಕುಗಳ ನಡುವೆ ಎಲ್ಲಿ ಗೆರೆ ಎಳೆಯಬೇಕು? ಸಾರ್ವಜನಿಕ ಮತ್ತು ಖಾಸಗಿ ವಲಯಗಳ ನಡುವಿನ ಸಾಂಪ್ರದಾಯಿಕ ವ್ಯತ್ಯಾಸವು ಪ್ರಭುತ್ವ ಮತ್ತು ನಾಗರಿಕ ಸಮಾಜದ ನಡುವಿನ ವಿಭಜನೆಯನ್ನು ಹೋಲುತ್ತದೆ. ಪ್ರಭುತ್ವದ ಸಂಸ್ಥೆಗಳನ್ನು (ಆಡಳಿತ ಸಂಸ್ಥೆಗಳು, ನ್ಯಾಯಾಲಯ, ಪೋಲೀಸ್, ಸೈನ್ಯ, ಸಾಮಾಜಿಕ ಭದ್ರತಾ ವ್ಯವಸ್ಥೆ ಮುಂತಾದವು) 'ಸಾರ್ವಜನಿಕ' ಎನ್ನಬಹುದು. ಅಂದರೆ ಸಾಮುದಾಯಿಕ ಬದುಕಿನ ಸಮಗ್ರ ಸಂಘಟನೆಗೆ ಇವೇ ಜವಾಬ್ದಾರರಾಗಿರುತ್ತವೆ. ಅಲ್ಲದೇ ತೆರಿಗೆಯ ಮೂಲಕ ಸಾರ್ವಜನಿಕರ ಹಣದಿಂದ ಇವನ್ನು ಬೆಂಬಲಿಸಲಾಗುತ್ತದೆ. ಇದಕ್ಕೆ ವಿರುದ್ಧವಾಗಿ ನಾಗರಿಕ ಸಮಾಜವು, ಎಡ್ಮೆಂಡ್ ಬರ್ಕ್ (Edmund Burke) (ನೋಡಿ ಪುಟ. ೩೬) ಮಾತುಗಳಲ್ಲಿ ಹೇಳುವುದಾದರೆ, 'ಸಣ್ಣ ಸಣ್ಣ ಗುಂಪುಗಳನ್ನು' ಒಳಗೊಂಡಿರುತ್ತದೆ. ಕುಟುಂಬ, ನಂಟಸ್ತಿಕೆಯ ಗುಂಪುಗಳು, ಖಾಸಗಿ ವ್ಯವಹಾರಗಳು, ಟ್ರೇಡ್ ಯೂನಿಯನ್‌ಗಳು, ಕ್ಲಬ್‌ಗಳು, ಸಾಮುದಾಯಿಕ ಗುಂಪುಗಳು ಇವೇ ಮುಂತಾದವು 'ಖಾಸಗಿ' ವಲಯವಾಗಿದೆ. ಅಂದರೆ ನಾಗರಿಕರು ಒಟ್ಟಾರೆ ಸಮಾಜದ ಹಿತಕ್ಕಿಂತಲೂ ಮಿಗಿಲಾಗಿ ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಅವುಗಳನ್ನು ಹುಟ್ಟು ಹಾಕುತ್ತಾರೆ, ಬೆಂಬಲಿಸುತ್ತಾರೆ. ಈ 'ಸಾರ್ವಜನಿಕ/ಖಾಸಗಿ' ವಿಭಜನೆಯ ಆಧಾರದ ಮೇಲೆ ರಾಜಕಾರಣವನ್ನು ಪ್ರಭುತ್ವದ ಚಟುವಟಿಕೆಗಳಿಗೆ, ಸಾರ್ವಜನಿಕ ಸಂಸ್ಥೆಗಳು ಸೂಕ್ತ ರೀತಿಯಲ್ಲಿ ಕೈಗೆತ್ತಿಕೊಳ್ಳುವ ಹೊಣೆಗಾರಿಕೆಗಳಿಗೆ ಸೀಮಿತಗೊಳಿಸಲಾಗಿದೆ. ವ್ಯಕ್ತಿಗಳು ತಾವೇ ಖುದ್ದಾಗಿ ಕೈಗೆತ್ತಿಕೊಳ್ಳಬಲ್ಲ, ಕೈಗೆತ್ತಿಕೊಳ್ಳುವ ಹೊಣೆಗಾರಿಕೆಗಳನ್ನು (ಆರ್ಥಿಕ, ಸಾಮಾಜಿಕ, ಗೃಹಸಂಬಂಧಿಯಾದ, ವೈಯಕ್ತಿಕವಾದ, ಸಾಂಸ್ಕೃತಿಕ, ಕಲಾತ್ಮಕ ಇತ್ಯಾದಿ) ಸ್ಪಷ್ಟವಾಗಿ 'ರಾಜಕೀಯೇತರ' ಎನ್ನಬಹುದಾಗಿದೆ.

'ಸಾರ್ವಜನಿಕ/ಖಾಸಗಿ' ವಿಭಜನೆಯ ಪರ್ಯಾಯ ವ್ಯಾಖ್ಯಾನವು, ಅವುಗಳ ನಡುವಿನ ಸೂಕ್ಷ್ಮ ವ್ಯತ್ಯಾಸವನ್ನು ಗುರುತಿಸಲು 'ರಾಜಕೀಯ' ಮತ್ತು 'ವೈಯಕ್ತಿಕ' ಎಂಬ ಪದಗಳನ್ನು ಬಳಸುವುದುಂಟು (ನೋಡಿ ಚಿತ್ರ ೧.೨). ನಾಗರಿಕ ಸಮಾಜ ಪ್ರಭುತ್ವಕ್ಕಿಂತಲೂ ಭಿನ್ನವಾದುದಾದರೂ ಒಂದು ವಿಶಾಲಾರ್ಥದಲ್ಲಿ 'ಸಾರ್ವಜನಿಕ' ಎನ್ನಬಹುದಾದ ಹಲವಾರು ಬಗೆಯ ಸಂಸ್ಥೆಗಳನ್ನು ಇವು ಒಳಗೊಳ್ಳುತ್ತವೆ. ಇವು ಮುಕ್ತ ಸಂಸ್ಥೆಗಳಾಗಿರುತ್ತವೆ, ಸಾರ್ವಜನಿಕವಾಗಿ ಕ್ರಿಯಾಶೀಲವಾಗಿರುತ್ತವೆ,

ಸಾರ್ವಜನಿಕರಿಗೆ ಪ್ರವೇಶಾವಕಾಶವಿರುತ್ತದೆ. ಇದರ ನಿರ್ಣಾಯಕ ಸೂಚ್ಯಪರಿಣಾಮವೆಂದರೆ, ಇದು ರಾಜಕೀಯದ ಬಗ್ಗೆಯಿರುವ ನಮ್ಮ ಕಲ್ಪನೆಯನ್ನು ವಿಸ್ತರಿಸುತ್ತದೆ, ನಿರ್ದಿಷ್ಟವಾಗಿ ಆರ್ಥಿಕತೆಯನ್ನು ಖಾಸಗಿಯವರಿಂದ ಸಾರ್ವಜನಿಕ ವಲಯಕ್ಕೆ ವರ್ಗಾಯಿಸುತ್ತದೆ. ಕೆಲಸದ ಸ್ಥಳದಲ್ಲಿ ಒಂದು ಬಗೆಯ ರಾಜಕಾರಣವನ್ನು ಕಾಣಬಹುದಾಗಿದೆ. ಅದೇನೇ ಇದ್ದರೂ, ವ್ಯಾಪಾರ ವಹಿವಾಟುಗಳು, ಸಾಮುದಾಯಿಕ ಗುಂಪುಗಳು, ಕ್ಲಬ್‌ಗಳು, ಟ್ರೇಡ್ ಯೂನಿಯನ್‌ಗಳು ಮುಂತಾದ ಸಂಸ್ಥೆಗಳನ್ನು 'ಸಾರ್ವಜನಿಕ' ಎಂದು ಪರಿಗಣಿಸಿದರೂ ಇಲ್ಲಿ ರಾಜಕಾರಣದ ದೃಷ್ಟಿಕೋನವು ಸೀಮಿತದ್ದಾಗಿಯೇ ಇರುತ್ತದೆ. ಈ ದೃಷ್ಟಿಕೋನದ ಪ್ರಕಾರ ರಾಜಕಾರಣವು 'ಖಾಸಗಿ' ವ್ಯವಹಾರಗಳು ಹಾಗೂ ಸಂಸ್ಥೆಗಳೊಳಗೆ ಹಸ್ತಕ್ಷೇಪ ಮಾಡುವುದಿಲ್ಲ ಮತ್ತು ಮಾಡಲೂ ಬಾರದು. ಪರಿಣಾಮಕಾರಿಯಾಗಿ ರಾಜಕಾರಣವೆಂಬುದು ಮನೆಯ ಹೊರಗೇ ನಿಂತುಬಿಡುತ್ತದೆ: ರಾಜಕಾರಣವೆಂಬುದು ಕುಟುಂಬದೊಳಗೆ, ಗೃಹಸಂಬಂಧೀ ಜೀವನದಲ್ಲಿ ವೈಯಕ್ತಿಕ ಸಂಬಂಧಗಳಲ್ಲಿ ಸಂಭವಿಸುವುದೇ ಇಲ್ಲ ಎನ್ನುವುದು ಇದರ ಸೂಚ್ಯಾರ್ಥ ಎಂದು ಕೆಲವು ಚಿಂತಕರು ನಿರ್ದಿಷ್ಟವಾಗಿ ಸ್ತ್ರೀವಾದಿ ಚಿಂತಕರು ಅದರ ಕಡೆ ನಮ್ಮ ಗಮನ ಸೆಳೆಯುತ್ತಾರೆ (ನೋಡಿ ಪುಟ. 11). ರಾಜಕಾರಿಣಿಗಳು ತಮ್ಮ ವೃತ್ತಿಪರ ನಡತೆ ಹಾಗೂ ವೈಯಕ್ತಿಕ ಅಥವಾ ಕೌಟುಂಬಿಕ ನಡತೆಗಳ ನಡುವೆ ಸ್ಪಷ್ಟವಾದ ಗೆರೆ ಎಳೆಯುವುದನ್ನು ನಾವು ಗಮನಿಸಬಹುದು. ಈ ತರಹದ ಉದಾಹರಣೆಗಳಿಂದ ನಾವು ಸ್ತ್ರೀವಾದಿಗಳ ಈ ನಿಲುವನ್ನು ಸಮರ್ಥಿಸಿಕೊಳ್ಳಬಹುದಾಗಿದೆ. ತಮ್ಮ ಸಂಗಾತಿಗೆ ದ್ರೋಹವೆಸಗಿದಾಗ ಅಥವಾ ಮಕ್ಕಳನ್ನು ಕೆಟ್ಟದಾಗಿ ನಡೆಸಿಕೊಂಡಾಗ ಅವೆಲ್ಲ 'ವೈಯಕ್ತಿಕ' ವಿಚಾರಗಳು ಎಂದು ಭಾವಿಸುತ್ತಾರೆ. ಇಂತಹ ನಡತೆಗಳು ಅವರ ಸಾರ್ವಜನಿಕ ವ್ಯವಹಾರಗಳಿಗೆ ಸಂಬಂಧಿಸಿದ್ದಲ್ಲ ಎನ್ನುವ ಕಾರಣ ನೀಡಿ ಅಂತಹ ನಡವಳಿಕೆಗಳ ರಾಜಕೀಯ ಮಹತ್ವವನ್ನೇ ಅಲ್ಲಗಳೆಯಲು ಸಮರ್ಥರಾಗುತ್ತಾರೆ.

| **ಸಾರ್ವಜನಿಕ** | **ಖಾಸಗಿ** |
|---|---|
| ಪ್ರಭುತ್ವ: ಸರ್ಕಾರದ ಅಂಗಸಂಸ್ಥೆ | ನಾಗರಿಕ ಸಮಾಜ:<br><br>ಸ್ವಾಯತ್ತ ಸಂಸ್ಥೆಗಳು –ವ್ಯಾಪಾರ ವಹಿವಾಟು, ಟ್ರೇಡ್ ಯೂನಿಯನ್, ಕ್ಲಬ್, ಕುಟುಂಬ ಇತ್ಯಾದಿ |
| **ಸಾರ್ವಜನಿಕ** | **ಖಾಸಗಿ** |
| ಸಾರ್ವಜನಿಕ ವಲಯ:<br><br>ರಾಜಕಾರಣ, ವಾಣಿಜ್ಯ, ದುಡಿಮೆ, ಕಲೆ, ಸಂಸ್ಕೃತಿ ಮುಂತಾದವು | ವೈಯಕ್ತಿಕ ವಲಯ:<br><br>ಕುಟುಂಬ, ಗೃಹಸಂಬಂಧೀ ಬದುಕು |

ಚಿತ್ರ 1.2 ಸಾರ್ವಜನಿಕ/ಖಾಸಗಿ ವಿಭಜನೆಯ ಎರಡು ದೃಷ್ಟಿಕೋನಗಳು

ರಾಜಕಾರಣವೆಂಬುದು ಮೂಲಭೂತವಾಗಿ ಒಂದು 'ಸಾರ್ವಜನಿಕ' ಚಟುವಟಿಕೆ ಎಂಬ ದೃಷ್ಟಿಯು ಸಕಾರಾತ್ಮಕ ಹಾಗೂ ನಕಾರಾತ್ಮಕ ಎರಡೂ ಬಗೆಯ ಚಿತ್ರಗಳನ್ನು ಸೃಷ್ಟಿಸಿದೆ. ಪ್ರಾಚೀನಕಾಲದಲ್ಲಿ ಅಂದರೆ ಅರಿಸ್ಟಾಟಲನ ಕಾಲಾವಧಿಯಲ್ಲಿ ರಾಜಕಾರಣವು ಅದು ನಿಖರವಾಗಿ ಒಂದು 'ಸಾರ್ವಜನಿಕ' ಗುಣಲಕ್ಷಣವನ್ನು ಹೊಂದಿದ್ದರಿಂದ ಅದನ್ನು ಉದಾತ್ತವಾದ ಮತ್ತು ಸುಸಂಸ್ಕೃತವಾದ ಚಟುವಟಿಕೆ ಎಂದು ಪರಿಗಣಿಸಲಾಗಿತ್ತು. ಇದನ್ನು ಹಾನಾ ಆರೆಂಟ್ (Hannah Arendt) ದೃಢವಾಗಿ ನಂಬಿದ್ದು ತನ್ನ *'The Human Condition (ದಿ* ಹ್ಯೂಮನ್ ಕಂಡೀಷನ್)' (೧೯೫೮) ಕೃತಿಯಲ್ಲಿ ಸ್ಪಷ್ಟವಾಗಿ ನಿರೂಪಿಸುತ್ತಾಳೆ. ರಾಜಕೀಯವು ಮನುಷ್ಯ ಚಟುವಟಿಕೆಗಳಲ್ಲೇ ಬಹಳ ಮುಖ್ಯವಾದ ಚಟುವಟಿಕೆಯಾಗಿದೆ. ಏಕೆಂದರೆ ಇದು ಸಮಾನರಾದ ಸ್ವತಂತ್ರರಾದ ಪ್ರಜೆಗಳ ನಡುವೆ ನಡೆಯುವ ಒಂದು ಪರಸ್ಪರಕ್ರಿಯೆಯಾಗಿದೆ. ಆದ್ದರಿಂದ ಇದು ಬದುಕಿಗೆ ಅರ್ಥ ನೀಡುತ್ತದೆ, ಪ್ರತಿಯೊಬ್ಬ ವ್ಯಕ್ತಿಯ ವಿಶಿಷ್ಟತೆಯನ್ನು ಎತ್ತಿ ಹಿಡಿಯುತ್ತದೆ ಎನ್ನುತ್ತಾಳೆ. ಜ್ಞಾನ್ ಜ್ಞಾಕ್ ರೂಸೋ (Jean-Jacques Rousseau) (ನೋಡಿ ಪುಟ. ೯೭), ಜಾನ್ ಸ್ಟುವರ್ಟ್ ಮಿಲ್ (John Stuart Mill) (ನೋಡಿ ಪುಟ. ೧೯೮) ಮುಂತಾದ ಸಿದ್ಧಾಂತಿಗಳು ರಾಜಕೀಯದಲ್ಲಿ ತೊಡಗುವುದು ಸ್ವತಃ ಒಂದು ಒಳ್ಳೆಯ ಕೆಲಸವೆಂದು ವಿವರಿಸಿರುವವರೂ ಸಹ ಅದೇ ತೀರ್ಮಾನಕ್ಕೆ ಬಂದಿರುತ್ತಾರೆ. ರಾಜಕೀಯ ಜೀವನದಲ್ಲಿ ಎಲ್ಲ ಪ್ರಜೆಗಳೂ ನೇರವಾಗಿ, ನಿರಂತರವಾಗಿ ತೊಡಗಿಕೊಂಡಾಗಲಷ್ಟೇ ಪ್ರಭುತ್ವವನ್ನು ಎಲ್ಲರ ಒಳಿತಿಗಾಗಿ ಅಥವಾ ಜನಸಾಮಾನ್ಯರ ಇಚ್ಛೆಗೆ ಬದ್ಧವಾಗಿಸಬಹುದು ಎಂದು ರೂಸೋ ಪ್ರತಿಪಾದಿಸಿದರು. ಮಿಲ್ ಪ್ರಕಾರ 'ಸಾರ್ವಜನಿಕ' ವ್ಯವಹಾರಗಳಲ್ಲಿ ತೊಡಗಿಕೊಳ್ಳುವುದು ಒಂದು ಬಗೆಯ ಶಿಕ್ಷಣವಾಗಿದೆ. ಏಕೆಂದರೆ ಈ ತೊಡಗುವಿಕೆಯಿಂದ ವ್ಯಕ್ತಿಯಲ್ಲಿ ವೈಯಕ್ತಿಕ, ನೈತಿಕ, ಬೌದ್ಧಿಕ ಬೆಳವಣಿಗೆ ಆಗುತ್ತದೆ ಎಂದವರು ನಂಬಿದ್ದರು.

ಆದಾಗ್ಯೂ, ಇದಕ್ಕೆ ವ್ಯತಿರಿಕ್ತವಾಗಿ ರಾಜಕಾರಣವನ್ನು ಒಂದು ಸಾರ್ವಜನಿಕ ಚಟುವಟಿಕೆಯಂತೆ ಭಾವಿಸುವುದು ಒಂದು ಬಗೆಯ ಅನಗತ್ಯ ಹಸ್ತಕ್ಷೇಪ ಎಂಬ ತರಹದ ನಿಲುವುಗಳೂ ಉಂಟು. ನಿರ್ದಿಷ್ಟವಾಗಿ, ಉದಾರವಾದಿ ಸಿದ್ಧಾಂತಿಗಳು 'ಖಾಸಗಿ' ಬದುಕಿನಲ್ಲಿ ಆಯ್ಕೆ, ವ್ಯಕ್ತಿಸ್ವಾತಂತ್ರ್ಯ, ವ್ಯಕ್ತಿಗತ ಹೊಣೆಗಾರಿಕೆಗಳಿರುತ್ತವೆ ಎನ್ನುವ ಆಧಾರದ ಮೇಲೆ ಅವರು ಪ್ರಭುತ್ವಕ್ಕಿಂತಲೂ ನಾಗರಿಕ ಸಮಾಜಕ್ಕೆ ಹೆಚ್ಚು ಆದ್ಯತೆ ನೀಡಿರುತ್ತಾರೆ. ಇದು 'ರಾಜಕೀಯ' ಆಯಾಮವನ್ನು ಸಂಕುಚಿತಗೊಳಿಸುವ ವ್ಯವಸ್ಥಿತ ಪ್ರಯತ್ನಗಳಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ ಮತ್ತು ನಮ್ಮ ವ್ಯಾಪಾರ ವಹಿವಾಟು, ಕ್ರೀಡೆಗಳು, ಕೌಟುಂಬಿಕ ಬದುಕು ಮುಂತಾದ ಖಾಸಗಿ ಚಟುವಟಿಕೆಗಳಿಂದ 'ರಾಜಕೀಯವನ್ನು ದೂರವಿಡಿ' ಎನ್ನುವ ಆಶಯದಲ್ಲಿ ಸಾಮಾನ್ಯವಾಗಿ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ, ವ್ಯಕ್ತಿಯನ್ನು ಅವನ ಆಯ್ಕೆಗೆ ಅನುಸಾರವಾಗಿ ನಡೆಯಲು ಬಿಡುವುದಿಲ್ಲ ಎನ್ನುವ ಕಾರಣದಿಂದಾಗಿ ರಾಜಕಾರಣವು ಹಾನಿಕರ ಎನ್ನಬಹುದು. ಉದಾಹರಣೆಗೆ

ಅದು ಕಂಪನಿಗಳು ವ್ಯಾಪಾರದಲ್ಲಿ ಹೇಗೆ ನಡೆದುಕೊಳ್ಳಬೇಕು, ಯಾರೊಂದಿಗೆ ಹೇಗೆ ಕ್ರೀಡೆಗಳಲ್ಲಿ ತೊಡಗಬೇಕು, ನಮ್ಮ ಮಕ್ಕಳನ್ನು ಹೇಗೆ ಬೆಳೆಸಬೇಕು ಮುಂತಾದ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಹುದು.

**ರಾಜಿ ಮತ್ತು ಒಮ್ಮತವಾಗಿ ರಾಜಕಾರಣ**

ರಾಜಕಾರಣದ ಮೂರನೆಯ ಪರಿಕಲ್ಪನೆಯು ರಾಜಕೀಯ ನಡೆಯುವ ಕಣಕ್ಕೆ ಸಂಬಂಧಿಸಿದ್ದಲ್ಲ, ಬದಲಾಗಿ, ನಿರ್ಧಾರಗಳನ್ನು ತೆಗೆದುಕೊಳ್ಳುವ ರೀತಿಯ ಕುರಿತದ್ದಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಘರ್ಷಣೆಯನ್ನು ಪರಿಹರಿಸುವ ಒಂದು ವಿಧಾನವಾಗಿ ರಾಜಕಾರಣವನ್ನು ನೋಡಲಾಗುತ್ತದೆ: ಅಂದರೆ ಬಲವಂತ, ಅಧಿಕಾರ ಚಾಲನೆಯ ಬದಲಾಗಿ ರಾಜಿ, ಸಂಧಾನ, ಮಾತುಕತೆಯ ಮೂಲಕ ಪರಿಹರಿಸುವ ಮಾರ್ಗದ ವಿವೇಚನೆಯಾಗಿದೆ. ಈ ವಿಧಾನವನ್ನೇ ರಾಜಕಾರಣವನ್ನು 'ಸಾಧ್ಯವಾಗಿಸಬಹುದಾದ ಕಲೆ' ಎಂದು ಕರೆಯುವುದು. ಇಂತಹ ವ್ಯಾಖ್ಯಾನವನ್ನು ಆ ಪದದ ನಮ್ಮ ದೈನಂದಿನ ಬಳಕೆಯಲ್ಲಿಯೂ ನಾವು ಕಾಣಬಹುದಾಗಿದೆ. ಉದಾಹರಣೆಗೆ, ಒಂದು ಸಮಸ್ಯೆಯ 'ರಾಜಕೀಯ' ಪರಿಹಾರ ಎಂದರೆ 'ಮಿಲಿಟರಿ' ಪರಿಹಾರಕ್ಕೆ ಬದಲಾಗಿ ನಾವು ಕೈಗೊಳ್ಳುವ ಶಾಂತಿಯುತ ಮಾತುಕತೆ, ಚರ್ಚೆಯಾಗಿರುತ್ತದೆ. ರಾಜಕಾರಣದ ಕುರಿತಾದ ಈ ಬಗೆಯ ಅಭಿಪ್ರಾಯವನ್ನು ನಾವು ಅರಿಸ್ಟಾಟಲನ ಬರವಣಿಗೆಯಲ್ಲಿ ಗುರುತಿಸಬಹುದು. 'ರಾಜ್ಯ ಪದ್ಧತಿ(polity)' ಆದರ್ಶಮಯವಾದ ಆಡಳಿತ ವ್ಯವಸ್ಥೆಯಾಗಿದೆ ಎಂದು ಅವನು ಅಭಿಪ್ರಾಯ ಪಟ್ಟಿದ್ದ. ಏಕೆಂದರೆ ಇದು ಒಂದು 'ಮಿಶ್ರ' ವ್ಯವಸ್ಥೆಯಾಗಿದೆ. ಅಂದರೆ ಶ್ರೀಮಂತವರ್ಗ ಮತ್ತು ಪ್ರಜಾಪ್ರಭುತ್ವದ ಎರಡೂ ಲಕ್ಷಣಗಳನ್ನು ಇದು ಒಳಗೊಂಡಿರುತ್ತದೆ. ಬರ್ನಾರ್ಡ್ ಕ್ರಿಕ್ (Bernard Crick) ಈ ಅಭಿಪ್ರಾಯದ ಆಧುನಿಕ ಪ್ರತಿಪಾದಕರಲ್ಲಿ ಒಬ್ಬನಾಗಿದ್ದಾನೆ. ತನ್ನ '*In Defence of Politics (ಇನ್ ಡಿಫೆನ್ಸ್ ಆಫ್ ಪಾಲಿಟಿಕ್ಸ್)'* ಎಂಬ ಪ್ರಸಿದ್ಧ ಕೃತಿಯಲ್ಲಿ ಕ್ರಿಕ್ ಇದಕ್ಕೆ ಈ ಕೆಳಗಿನ ವ್ಯಾಖ್ಯಾನ ನೀಡುತ್ತಾನೆ:

> ರಾಜಕಾರಣವೆಂಬುದು ಆಡಳಿತದ ಒಂದು ನಿರ್ದಿಷ್ಟ ಘಟಕದೊಳಗೆ ಇರಬಹುದಾದ ವಿಭಿನ್ನ ಹಿತಾಸಕ್ತಿಗಳಿಗೆ, ಇಡೀ ಸಮುದಾಯದ ಉಳಿವು ಹಾಗೂ ಯೋಗಕ್ಷೇಮಕ್ಕೆ ಬೇಕಾಗುವ ಅವುಗಳ ಅಗತ್ಯತೆಗೆ ಅನುಗುಣವಾಗಿ ಅವುಗಳಿಗೆ ಅಧಿಕಾರದಲ್ಲಿ ಪಾಲು ನೀಡುವ ಮೂಲಕ ಅವುಗಳ ನಡುವೆ ಸಂಧಾನ ಉಂಟು ಮಾಡುವ ಒಂದು ಚಟುವಟಿಕೆಯಾಗಿದೆ. (Crick (ಕ್ರಿಕ್) (೧೯೬೨) ೨೦೦೦)

ಈ ದೃಷ್ಟಿಯಿಂದ ಅಧಿಕಾರದ ವ್ಯಾಪಕ ಹಂಚಿಕೆಯು ರಾಜಕಾರಣದ ಪ್ರಮುಖ ಅಂಶವಾಗಿದೆ. ಘರ್ಷಣೆ ಅನಿವಾರ್ಯ ಎಂದು ಒಪ್ಪುತ್ತಲೇ ಸಾಮಾಜಿಕ ಗುಂಪುಗಳು ಹಾಗೂ ಆಸಕ್ತಿಗಳು ಪ್ರಭಾವಿಸುವ ಶಕ್ತಿ ಹೊಂದಿದಾಗ ಅವು ರಾಜಿ ಮಾಡಿಕೊಳ್ಳಲೇ ಬೇಕಾಗುತ್ತದೆ, ಅವನ್ನು ಸುಮ್ಮನೆ

ನಿಗ್ರಹಿಸಲಾಗದು ಎಂದು ಕ್ರಿಕ್ ವಾದಿಸುತ್ತಾನೆ. ಆದ್ದರಿಂದಲೇ ಅವನು ರಾಜಕಾರಣವನ್ನು 'ವ್ಯವಸ್ಥೆಯ ಆ ಸಮಸ್ಯೆಗೆ ಹಿಂಸೆ, ಒತ್ತಾಯಗಳಿಗೆ ಬದಲಾಗಿ ರಾಜಿ ಸಂಧಾನವನ್ನು ಆಯ್ಕೆ ಮಾಡಿಕೊಳ್ಳುವ ಪರಿಹಾರ' ಎಂದು ನಿರ್ವಚಿಸಿದ್ದು. ಇಂತಹ ರಾಜಕಾರಣವು ಉದಾರವಾದಿ ವೈಚಾರಿಕ ತತ್ವಗಳೊಂದಿಗೆ ಗಾಢವಾದ ಬದ್ಧತೆ ಹೊಂದಿರುವುದನ್ನು ಬಿಂಬಿಸುತ್ತದೆ. ಇದು ಚರ್ಚೆ, ಸಂವಾದಗಳ ಪರಿಣಾಮಕಾರಿತ್ವದಲ್ಲಿ ದೃಢ ನಂಬಿಕೆಯ ಮೇಲೆ ಆಧಾರಿತವಾಗಿರುತ್ತದೆ. ಹಾಗೆಯೇ ಸಮಾಜ ಸರಿಪಡಿಸಲಾರದ ಘರ್ಷಣೆಯ ಮೇಲಲ್ಲ, ಬದಲಾಗಿ ಒಮ್ಮತದ ಗುಣಲಕ್ಷಣವನ್ನು ಹೊಂದಿರುವ ಆಧಾರದ ಮೇಲೆ ನಿಂತಿದೆ ಎಂದು ನಂಬಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಹಿಂಸೆ, ಬೆದರಿಕೆಗಳಿಗೆ ಮೊರೆ ಹೋಗದೆಯೂ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಆದಾಗ್ಯೂ, ರಾಜಕಾರಣದ ಕುರಿತಾದ ಕ್ರಿಕ್‌ನ ಪರಿಕಲ್ಪನೆಯು ಪಾಶ್ಚಾತ್ಯ ಬಹುತ್ವವಾದೀ ಪ್ರಜಾಪ್ರಭುತ್ವಗಳಲ್ಲಿ ಸಂಭವಿಸುವ ರಾಜಕೀಯ ರಚನೆಯ ಪೂರ್ವಗ್ರಹಿಕೆಯಿಂದ ಕೂಡಿದೆ ಎಂದು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ: ಪರಿಣಾಮವಾಗಿ ಅವನು ರಾಜಕಾರಣವನ್ನು ಚುನಾವಣಾ ಆಯ್ಕೆ ಮತ್ತು ಪಕ್ಷಗಳ ನಡುವಿನ ಪೈಪೋಟಿಯೊಂದಿಗೆ ಸಮೀಕರಿಸುತ್ತಾರೆ. ಅಂದ ಮೇಲೆ ಇವನ ಪರಿಕಲ್ಪನೆಯ ರಾಜಕಾರಣವು ನಮಗೆ ಏಕಪಕ್ಷೀಯ ರಾಜ್ಯ ಅಥವಾ ಮಿಲಿಟರಿ ಆಳ್ವಿಕೆಗಳ ಬಗ್ಗೆ ಹೆಚ್ಚಿನ ಒಳನೋಟ ನೀಡುವುದಿಲ್ಲ.

ರಾಜಕೀಯದ ಈ ದೃಷ್ಟಿಕೋನವು ನಿಸ್ಸಂಶಯವಾಗಿ ಸಕಾರಾತ್ಮಕ ಗುಣವುಳ್ಳದ್ದಾಗಿದೆ. ರಾಜಕಾರಣ ಖಂಡಿತವಾಗಿಯೂ ಒಂದು ಆದರ್ಶಮಯ ಪರಿಹಾರವಲ್ಲ (ರಾಜಿ ಮಾಡಿಕೊಳ್ಳುವುದು ಅಂದರೆ ಎಲ್ಲ ಕಡೆಯಿಂದಲೂ ಕೊಡುಕೊಳ್ಳುವುದು ಆಗುತ್ತದೆ ಎಂದರ್ಥ; ಅಂದರೆ ಇಲ್ಲಿ ಯಾರೊಬ್ಬರೂ ಪರಿಪೂರ್ಣವಾಗಿ ಸಂತೃಪ್ತರಾಗುವುದಿಲ್ಲ). ಆದರೆ ರಕ್ತಪಾತ, ಕ್ರೌರ್ಯಗಳಿಗಿಂತಲೂ ಇದು ಉತ್ತಮ ಪರಿಹಾರವಾಗಿದೆ. ಈ ಅರ್ಥದಲ್ಲಿ ರಾಜಕಾರಣವು ನಾಗರಿಕವಾದುದೆಂದು, ನಾಗರಿಕಗೊಳಿಸುವ ಶಕ್ತಿ ಎಂದು ನೋಡಬಹುದಾಗಿದೆ. ರಾಜಕಾರಣವನ್ನು ಒಂದು ಚಟುವಟಿಕೆಯಾಗಿ ಗೌರವಿಸುವಂತೆ, ತಮ್ಮ ಸಮುದಾಯದ ರಾಜಕೀಯ ಬದುಕಿನಲ್ಲಿ ತೊಡಗುವಂತೆ ಜನರನ್ನು ಪ್ರೋತ್ಸಾಹಿಸಬೇಕಾಗಿದೆ. ಅದೇನೇ ಇದ್ದರೂ, ರಾಜಿ ಸಂಧಾನದ ಒಂದು ಪ್ರಕ್ರಿಯೆಯಾಗಿ ರಾಜಕೀಯವು ಅಗತ್ಯವಾಗಿ ನಿರಾಶದಾಯಕ ಮತ್ತು ಕಷ್ಟಕರ (ಏಕೆಂದರೆ ಇಲ್ಲಿ ಮತ್ತೊಬ್ಬರ ಅಭಿಪ್ರಾಯಗಳನ್ನು ಎಚ್ಚರದಿಂದ ಕಿವಿಗೊಟ್ಟು ಕೇಳಬೇಕಾಗುತ್ತದೆ) ಎಂದು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾದದ್ದು ಅಭಿವೃದ್ಧಿ ಹೊಂದಿರುವ ಬಹುತೇಕ ರಾಷ್ಟ್ರಗಳ ಪ್ರಜಾಪ್ರಭುತ್ವ ರಾಜಕಾರಣದೊಂದಿಗೆ ಹೆಚ್ಚುತ್ತಿರುವ ಜನಸಾಮಾನ್ಯರ ಭ್ರಮನಿರಸನಕ್ಕೆ ಕಾರಣವಿರಬಹುದು. 'ರಾಜಕಾರಣವನ್ನು ನಿರಾಶೆಗೊಳಿಸಲೆಂದೇ ವಿನ್ಯಾಸಗೊಳಿಸಲಾಗಿದೆ' ಎಂದು ಸ್ಟೋಕರ್ (Stoker) (೨೦೦೬) ಹೇಳುತ್ತಾನೆ. ಎಷ್ಟೋ ಸಲ ಇದರ ಫಲಶ್ರುತಿ 'ಗೋಜಲು, ಅಸ್ಪಷ್ಟ ಮತ್ತು ಎಂದಿಗೂ ಅಂತಿಮವಲ್ಲದ' ಫಲಶ್ರುತಿ ಆಗಿರುತ್ತದೆ. ಈ ಬಗ್ಗೆ ಈ ಕೃತಿಯ ಕೊನೆಯ ಅಧ್ಯಾಯದಲ್ಲಿ ನಾವು ಮತ್ತೊಮ್ಮೆ ಪರಿಶೀಲಿಸಲಿದ್ದೇವೆ.

**ಶಕ್ತಿಯಾಗಿ ರಾಜಕಾರಣ**

ರಾಜಕಾರಣದ ನಾಲ್ಕನೆಯ ವ್ಯಾಖ್ಯಾನವು ಅತ್ಯಂತ ವ್ಯಾಪಕವಾದುದು, ಮೂಲಭೂತವಾದುದು. ಇದು ರಾಜಕಾರಣವನ್ನು ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸೀಮಿತಗೊಳಿಸದೇ (ಸರ್ಕಾರ, ಪ್ರಭುತ್ವ ಅಥವಾ 'ಸಾರ್ವಜನಿಕ' ವಲಯ) ರಾಜಕಾರಣ ಎಲ್ಲಾ ಸಾಮಾಜಿಕ ಚಟುವಟಿಕೆಗಳಲ್ಲೂ, ಮನುಷ್ಯ ಬದುಕಿನ ಎಲ್ಲ ಮಗ್ಗುಲುಗಳಲ್ಲೂ ವ್ಯಾಪಿಸಿರುವುದನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಏಡ್ರಿಯನ್ ಲೆಫ್ಟ್‌ವಿಚ್ (Adrian Leftwich) ತನ್ನ '*What is Politics? The Activity and Its Study* (*ವಾಟ್ ಈಸ್ ಪಾಲಿಟಿಕ್ಸ್? ದಿ ಆಕ್ಟಿವಿಟಿ ಅಂಡ್ ಇಟ್ಸ್ ಸ್ಟಡಿ*)' (2004) ಕೃತಿಯಲ್ಲಿ 'ರಾಜಕಾರಣವು ಔಪಚಾರಿಕ ಮತ್ತು ಅನೌಪಚಾರಿಕ, ಸಾರ್ವಜನಿಕ ಮತ್ತು ಖಾಸಗಿ ಹೀಗೆ ಎಲ್ಲಾ ಸಾಮೂಹಿಕ ಸಾಮಾಜಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿರುತ್ತದೆ ಮತ್ತು ಎಲ್ಲಾ ಮಾನವ ಗುಂಪು, ಸಂಸ್ಥೆ, ಸಮಾಜಗಳ ಕ್ಷೇತ್ರದಲ್ಲೂ ಇರುತ್ತದೆ' ಎಂದು ಪ್ರತಿಪಾದಿಸುತ್ತಾನೆ. ಈ ಅರ್ಥದಲ್ಲಿ ಎಲ್ಲ ಹಂತದ ಸಾಮಾಜಿಕ ವ್ಯವಹಾರದಲ್ಲೂ ರಾಜಕೀಯ ಸಂಭವಿಸುತ್ತದೆ. ರಾಷ್ಟ್ರಗಳ ನಡುವೆ ಜಾಗತಿಕ ಮಟ್ಟದಲ್ಲಿ ಸಂಭವಿಸುವ ಹಾಗೆಯೇ ಕುಟುಂಬಗಳೊಳಗೂ, ಸ್ನೇಹಿತರ ಸಣ್ಣ ವಲಯದೊಳಗೂ ಇದು ಸಂಭವಿಸುತ್ತದೆ. ಆದಾಗ್ಯೂ, ರಾಜಕೀಯ ಚಟುವಟಿಕೆಯ ವಿಶಿಷ್ಟತೆಯೇನು? ಇತರ ಸಾಮಾಜಿಕ ವರ್ತನೆಗಳಿಗಿಂತಲೂ ರಾಜಕಾರಣ ಹೇಗೆ ಭಿನ್ನವಾಗಿದೆ?

**ಗಮನಹರಿಸಿ_. . .**

**ಅಧಿಕಾರದ 'ಮುಖಗಳು'**

ಬಿ ಎಂಬ ವ್ಯಕ್ತಿ ಮಾಡಲೊಲ್ಲದ ಒಂದು ಕೆಲಸವನ್ನು ಎ ಎಂಬ ವ್ಯಕ್ತಿ ಅವನಿಂದ ಮಾಡಿಸಿದಾಗ ಅದನ್ನು ಅಧಿಕಾರ ಚಲಾಯಿಸಿದಂತಾಯಿತು ಎನ್ನುತ್ತೇವೆ. ಆದಾಗ್ಯೂ, ಎ ವಿವಿಧ ರೀತಿಯಲ್ಲಿ ಬಿ ಯನ್ನು ಪ್ರಭಾವಿಸಬಹುದು. ಈ ವೈವಿಧ್ಯವೇ ಅಧಿಕಾರದ ವಿವಿಧ ಆಯಾಮಗಳು ಅಥವಾ 'ಮುಖ'ಗಳನ್ನು ಪ್ರತ್ಯೇಕಿಸಲು ನಮಗೆ ಅನುವು ಮಾಡಿಕೊಡುತ್ತದೆ.

**ನಿರ್ಧಾರ ಕೈಗೊಳ್ಳುವ ಕ್ರಿಯೆಯಾಗಿ ಅಧಿಕಾರ:**

ಅಧಿಕಾರದ ಈ ಮುಖವು ಕೈಗೊಳ್ಳಲಾಗುವ ನಿರ್ಧಾರವನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಿಸುವ ಪ್ರಜ್ಞಾಪೂರ್ವಕ ಕ್ರಿಯೆಯಾಗಿದೆ. ಬಳಕೆಯಲ್ಲಿರುವ ಈ ರೀತಿಯ ಅಧಿಕಾರವನ್ನು ರಾಬರ್ಟ್ ಡಾಲ್ (Robert Dahl)ನ '*Who Governs? Democracy and Power in an American City* (*ಹೂ ಗವರ್ನ್ಸ್? ಡೆಮಾಕ್ರಸಿ ಅಂಡ್ ಪವರ್ ಇನ್ ಅಮೆರಿಕನ್ ಸಿಟಿ*)' (1961) ನಲ್ಲಿ

ಕಾಣಬಹುದಾಗಿದೆ. ಒಂದು ಕ್ರಿಯೆಯಲ್ಲಿ ತೊಡಗಿರುವ ವ್ಯಕ್ತಿಗಳ ಆದ್ಯತೆಯ ಹಿನ್ನೆಲೆಯಲ್ಲಿ ನಿರ್ಧಾರಗಳನ್ನು ವಿಶ್ಲೇಷಿಸಿ ಯಾರು ಅಧಿಕಾರ ಹೊಂದಿದ್ದರು ಎಂಬುದನ್ನು ತೀರ್ಮಾನಿಸುತ್ತದೆ. ಅಂತಹ ನಿರ್ಧಾರಗಳನ್ನು ವಿವಿಧ ರೀತಿಯಲ್ಲಿ ಪ್ರಭಾವಿಸಬಹುದಾಗಿದೆ. ಕೀತ್ ಬೋಲ್ಡಿಂಗ್ (Keith Boulding) ತನ್ನ '*Three Faces of Power (ತ್ರೀ ಫೇಸಸ್ ಆಫ್ ಪವರ್)*' (೧೯೮೯) ಕೃತಿಯಲ್ಲಿ ಬಲಪ್ರಯೋಗ ಅಥವಾ ಬೆದರಿಕೆ (ದಂಡ), ಪರಸ್ಪರ ಲಾಭದಾಯಕವಾದ ಉತ್ಪಾದನಾತ್ಮಕ ವಿನಿಯಮ (ಒಪ್ಪಂದ) ಮತ್ತು ಋಣ, ನಿಯತ್ತು ಮತ್ತು ಬದ್ಧತೆಗಳ ನಿರ್ಮಾಣಗಳ (ಚುಂಬನ) ನಡುವಿನ ವ್ಯತ್ಯಾಸವನ್ನು ವಿಶ್ಲೇಷಿಸಿದ್ದಾರೆ.

**ಸ್ವಹಿತಾಸಕ್ತಿ ಉದ್ದೇಶಕ್ಕೆಂದು ಅಧಿಕಾರ ಅಭಿನಿಯೋಜನೆ:**

ಬಾಕ್ರಾಕ್ ಮತ್ತು ಬೇರಿಟ್ಜ್ (Bachrach and Baratz) (೧೯೬೨) ಅಧಿಕಾರದ ಎರಡನೇ ಮುಖವನ್ನು ವಿವರಿಸುತ್ತಾರೆ. ಇದು ಕೈಗೊಳ್ಳಲಾದ ನಿರ್ಧಾರಗಳನ್ನು ನಿರ್ಬಂಧಿಸುವ ಸಾಮರ್ಥ್ಯವನ್ನು ವಿವರಿಸುತ್ತದೆ: ಅಂದರೆ ಇದು 'ನಿರ್ಧಾರ ಕೈಗೊಳ್ಳದಿರುವುದು' ಆಗಿದೆ. ಸ್ವಹಿತಾಸಕ್ತಿಯ ರಾಜಕೀಯ ಉದ್ದೇಶವನ್ನು ಮುಂದಿಡುವುದರ ಮೂಲಕ ಅಥವಾ ನಿಯಂತ್ರಿಸುವುದರ ಮೂಲಕ ವಿಷಯಗಳು ಅಥವಾ ಪ್ರಸ್ತಾವನೆಗಳು ಕಾರ್ಯಗತವಾಗುವ ಮುನ್ನವೇ ಅವನ್ನು ನಿರ್ಬಂಧಿಸುವ ಸಾಮರ್ಥ್ಯವಾಗಿದೆ. ಉದಾಹರಣೆಗೆ, ಖಾಸಗಿ ವ್ಯಾಪಾರ ಸಂಸ್ಥೆಗಳು ಪ್ರಸ್ತಾವಿತ ಗ್ರಾಹಕ ರಕ್ಷಣಾ ಕಾನೂನನ್ನು ಸೋಲಿಸುವ ಸಲುವಾಗಿ ಪ್ರಚಾರ ಮಾಡುವ ಮೂಲಕ (ಮೊದಲ ಮುಖ) ಹಾಗೆಯೇ ಪಕ್ಷಗಳು ಹಾಗೂ ರಾಜಕಾರಿಣಿಗಳೊಂದಿಗೆ ಲಾಬಿ ಮಾಡುವ ಮೂಲಕ (ಎರಡನೆಯ ಮುಖ) ಗ್ರಾಹಕರ ಹಕ್ಕುಗಳ ಪ್ರಶ್ನೆಗಳು ಸಾರ್ವಜನಿಕವಾಗಿ ಚರ್ಚೆಗೆ ಒಳಗಾಗದಂತೆ ತಡೆಯಬಹುದು.

**ಆಲೋಚನೆಯ ನಿಯಂತ್ರಣವಾಗಿ ಅಧಿಕಾರ:**

ಅಧಿಕಾರದ ಮೂರನೆಯ ಮುಖ ಯಾವುದೆಂದರೆ, ವ್ಯಕ್ತಿಗಳು, ಆತ ಅಥವಾ ಆಕೆ, ಏನನ್ನು ಯೋಚಿಸುತ್ತಾರೆ, ಬಯಸುತ್ತಾರೆ ಅಥವಾ ಅವರಿಗೆ ಯಾವುದರ ಅಗತ್ಯವಿದೆ ಎಂಬುದನ್ನು ರೂಪಿಸುವ ಮತ್ತು ಪ್ರಭಾವಿಸುವ ಸಾಮರ್ಥ್ಯವಾಗಿದೆ. ಸೈದ್ಧಾಂತಿಕ ಬೋಧನೆಯ ಮೂಲಕವೋ ಅಥವಾ ಮನೋವೈಜ್ಞಾನಿಕ ನಿಯಂತ್ರಣದ ಮೂಲಕವೋ ಈ ಅಧಿಕಾರ ವ್ಯಕ್ತವಾಗುತ್ತದೆ. ಇದನ್ನು ಲೂಕ್ಸ್ (Lukes) (೨೦೦೪) ಅಧಿಕಾರದ 'ಮೂಲಭೂತ' ದೃಷ್ಟಿಕೋನವೆಂದು ಕರೆದಿದ್ದಾರೆ, ಮತ್ತು ಇದು 'ಮೃದು' ಅಧಿಕಾರದ ಕಲ್ಪನೆಗೆ (ನೋಡಿ ಪುಟ. ೪೨೮) ಸಮೀಪವಾದುದು. ಗ್ರಾಹಕರ ಅಭಿರುಚಿಯನ್ನು ರೂಪಿಸಲು ಜಾಹಿರಾತು ನೀಡುವ ಸಾಮರ್ಥ್ಯವನ್ನು ಇದಕ್ಕೆ ಒಂದು

ಉದಾಹರಣೆಯಾಗಿ ನೀಡಬಹುದಾಗಿದೆ. ಅನೇಕ ವೇಳೆ ಒಂದು ನಿರ್ದಿಷ್ಟ 'ಬ್ರಾಂಡ್'ನೊಂದಿಗೆ ಗುರುತಿಸಿಕೊಳ್ಳುವಂತೆ ಪ್ರೋತ್ಸಾಹ ಮಾಡುವುದಾಗಿದೆ. ರಾಜಕೀಯ ಬದುಕಿನಲ್ಲಿ ಪ್ರಚಾರದ ಬಳಕೆಯಲ್ಲಿ, ಹೆಚ್ಚು ಸಾಮಾನ್ಯವಾಗಿ ಸಿದ್ಧಾಂತದ ಪ್ರಭಾವದಲ್ಲಿ, ಈ ರೂಪದ ಅಧಿಕಾರದ ಚಲಾವಣೆಯನ್ನು ನಾವು ಕಾಣಬಹುದು(ನೋಡಿ ಪುಟ. ೨೮).

ವಿಶಾಲಾರ್ಥದಲ್ಲಿ ಹೇಳುವುದಾದರೆ, ಸಾಮಾಜಿಕ ಬದುಕಿನಲ್ಲಿ ಸಂಪನ್ಮೂಲಗಳ ಉತ್ಪಾದನೆ, ವಿತರಣೆ ಹಾಗೂ ಬಳಕೆ ರಾಜಕಾರಣದ ಪ್ರಮುಖ ಕಾಳಜಿಯಾಗಿದೆ. ರಾಜಕಾರಣವೆಂಬುದು ಮೂಲತಃ ಅಧಿಕಾರವಾಗಿದೆ: ಯಾವುದೇ ವಿಧಾನದ ಮೂಲಕವಾದರೂ ಅಪೇಕ್ಷಿತ ಫಲಿತಾಂಶವನ್ನು ಸಾಧಿಸುವ ಸಾಮರ್ಥ್ಯವಾಗಿದೆ. ಇದನ್ನು ಹೆರಲ್ಡ್ ಲಾಸ್ವೆಲ್ (Harold Lasswell) ತನ್ನ ಕೃತಿಯ ಶೀರ್ಷಿಕೆ ಆದ '*Politics:Who Gets What, When, How? (ಪಾಲಿಟಿಕ್ಸ್: ಹೂ ಗೆಟ್ಸ್ ವಾಟ್, ವೆನ್, ಹೌ?* ನಲ್ಲೇ (೧೯೩೬) ಬಹಳ ಸ್ವಾರಸ್ಯಕರವಾಗಿ ಸಂಕ್ಷೇಪಿಸಿದ್ದಾನೆ. ಈ ದೃಷ್ಟಿಕೋನದಿಂದ ರಾಜಕಾರಣವೆಂಬುದು ವೈವಿಧ್ಯತೆ ಮತ್ತು ಘರ್ಷಣೆಯ ಕುರಿತಾದದ್ದು. ಆದರೆ ಕೊರತೆಯ ಇರುವಿಕೆಯೇ ರಾಜಕಾರಣದ ಪ್ರಮುಖ ಅಂಶವಾಗಿದೆ: ಮನುಷ್ಯ ಬಯಕೆ, ಅಗತ್ಯಗಳು ಅಪರಿಮಿತ ಮತ್ತು ಅದರ ತೃಪ್ತಿಗೆ ಲಭ್ಯವಿರುವ ಸಂಪನ್ಮೂಲಗಳು ಮಾತ್ರ ಯಾವಾಗಲೂ ಪರಿಮಿತ ಎಂಬುದು ವಾಸ್ತವ ಸಂಗತಿ. ರಾಜಕಾರಣವನ್ನು ಹಾಗೆ ಕೊರತೆಯಿರುವ ಸಂಪನ್ಮೂಲಗಳಿಗಾಗಿ ನಡೆಯುವ ಸಂಘರ್ಷವೆಂದು ಕರೆಯಬಹುದು ಮತ್ತು ಅಧಿಕಾರವನ್ನು ಒಂದು ಸಾಧನವಾಗಿ ಬಳಸುವುದರ ಮೂಲಕ ಈ ಸಂಘರ್ಷವನ್ನು ನಡೆಸಲಾಗುತ್ತದೆ ಎನ್ನುವುದನ್ನು ನಾವು ಕಾಣಬಹುದು.

ರಾಜಕಾರಣವನ್ನು ಅಧಿಕಾರ ಎನ್ನುವ ದೃಷ್ಟಿಯಿಂದ ಪರಿಭಾವಿಸುವರಲ್ಲಿ ಸ್ತ್ರೀವಾದಿಗಳು ಹಾಗೂ ಮಾರ್ಕ್ಸ್‌ವಾದಿಗಳು ಸೇರಿದ್ದಾರೆ. ೧೯೬೦–೧೯೭೦ರ ದಶಕಗಳಲ್ಲಿ ಹುಟ್ಟಿಕೊಂಡ ಸ್ತ್ರೀ ವಿಮೋಚನಾ ಚಳವಳಿಯು ಸ್ತ್ರೀವಾದದಲ್ಲಿ ಹೆಚ್ಚಿನ ಆಸಕ್ತಿಯನ್ನು ಕೆರಳಿಸಿ 'ರಾಜಕಾರಣ'ದ ಸ್ವರೂಪದ ಕುರಿತು ಹೆಚ್ಚು ತೀವ್ರವಾದ ಚಿಂತನೆಯನ್ನು ಪ್ರಚೋದಿಸಿತು. ಆಧುನಿಕ ಸ್ತ್ರೀವಾದಿಗಳು 'ವೈಯಕ್ತಿಕವಾದುದೂ ರಾಜಕೀಯವೇ' ಎಂಬ ಪ್ರಸಿದ್ಧ ತೀವ್ರಗಾಮಿ (radical) ಸ್ತ್ರೀವಾದಿ ಘೋಷಣೆಯನ್ನು ದಿಟ್ಟತನದಿಂದ ಪ್ರತಿಪಾದಿಸುವುದರ ಮೂಲಕ ರಾಜಕೀಯ ಸಂಭವಿಸಬಹುದಾದ ಕ್ಷೇತ್ರ ವ್ಯಾಪ್ತಿಯ ಪರಿಕಲ್ಪನೆಯನ್ನು ವಿಸ್ತರಿಸಲು ಪ್ರಯತ್ನಿಸಿದರಲ್ಲದೇ, ರಾಜಕೀಯವನ್ನು ಒಂದು ಪ್ರಕ್ರಿಯೆ ಎಂಬಂತೆ, ಅದರಲ್ಲೂ ನಿರ್ದಿಷ್ಟವಾಗಿ ಮತ್ತೊಬ್ಬರ ಮೇಲೆ ಚಲಾಯಿಸುವ ಅಧಿಕಾರಕ್ಕೆ ಸಂಬಂಧಿಸಿದ್ದು ಎಂಬಂತೆ ಪರಿಗಣಿಸಿದರು. ಕೇಟ್ ಮಿಲೆಟ್ (Kate Millet) ತನ್ನ *'Sexual Politics (ಸೆಕ್ಶುವಲ್ ಪಾಲಿಟಿಕ್ಸ್)'* (೧೯೬೯) ಕೃತಿಯಲ್ಲಿ ಈ ದೃಷ್ಟಿಕೋನವನ್ನು ಸಂಕ್ಷೇಪಿಸಿದ್ದಾಳೆ. ಈಕೆ ರಾಜಕಾರಣವನ್ನು ಒಂದು

ಗುಂಪಿನ ಜನ ಮತ್ತೊಂದರಿಂದ ನಿಯಂತ್ರಿಸಲ್ಪಡುವ 'ಅಧಿಕಾರಆಧಾರಿತ ಸಂಬಂಧಗಳ ರಚನೆ' ಎಂದು ವ್ಯಾಖ್ಯಾನಿಸಿದಳು.

ಮಾರ್ಕ್ಸ್‌ವಾದಿಗಳು 'ರಾಜಕಾರಣ'ವನ್ನು ಎರಡು ಅರ್ಥಗಳಲ್ಲಿ ಪರಿಭಾವಿಸಿದರು. ಒಂದು ಹಂತದಲ್ಲಿ ಮಾರ್ಕ್ಸ್ (ನೋಡಿ ಪುಟ. 41) 'ರಾಜಕಾರಣ' ಎಂಬ ಪದವನ್ನು ಸಾಂಪ್ರದಾಯಿಕ ಅರ್ಥದಲ್ಲೇ ಅಂದರೆ ಪ್ರಭುತ್ವದ ವ್ಯವಸ್ಥೆ ಎಂಬರ್ಥದಲ್ಲಿ ಬಳಸಿದ. ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ *(Communist Manifesto)* ((1848) 1967) ಕೃತಿಯಲ್ಲಿ ಅವನು (ಮತ್ತು ಎಂಗೆಲ್ಸ್ (Engels)) ರಾಜಕಾರಣವನ್ನು 'ಒಂದು ವರ್ಗದ ಜನ ಮತ್ತೊಂದು ವರ್ಗವನ್ನು ದಬ್ಬಾಳಿಕೆ ಮಾಡುವ ವ್ಯವಸ್ಥಿತ ಅಧಿಕಾರ' ಎಂದು ವ್ಯಾಖ್ಯಾನಿಸಿದರು. ಮಾರ್ಕ್ಸ್ ಪ್ರಕಾರ ಕಾನೂನು ಮತ್ತು ಸಂಸ್ಕೃತಿಯೊಂದಿಗೆ ರಾಜಕೀಯವು 'ಮೇಲ್ ರಚನೆ' (super-structure) ಯ ಒಂದು ಭಾಗವಾಗಿದ್ದು ಸಾಮಾಜಿಕ ಬದುಕಿನ ನಿಜವಾದ ಅಡಿಪಾಯವಾದ ಆರ್ಥಿಕ 'ತಳ ರಚನೆ' (base structure) ಗಿಂತ ಭಿನ್ನವಾದುದು. ಆದಾಗ್ಯೂ, ಆರ್ಥಿಕ 'ತಳ ರಚನೆ' ಹಾಗೂ ಕಾನೂನು ಮತ್ತು ರಾಜಕಾರಣದ 'ಮೇಲ್ ರಚನೆ' ಗಳೆರಡೂ ಸಂಪೂರ್ಣವಾಗಿ ಪ್ರತ್ಯೇಕವೆಂದು ಅವನು ಭಾವಿಸಲಿಲ್ಲ. ಆರ್ಥಿಕ 'ತಳ ರಚನೆ' ಯಿಂದಲೇ 'ಮೇಲ್ ರಚನೆ' ರೂಪುಗೊಳ್ಳುತ್ತದೆ ಮತ್ತು ಅದನ್ನು ಪ್ರತಿಬಿಂಬಿಸುತ್ತದೆ ಎನ್ನುವುದು ಅವನ ನಂಬಿಕೆಯಾಗಿತ್ತು. ಹಾಗಾಗಿ ಈ ದೃಷ್ಟಿಕೋನದ ಪ್ರಕಾರ ಆಳವಾದ ನೆಲೆಯಲ್ಲಿ ರಾಜಕೀಯ ಅಧಿಕಾರವು ವರ್ಗ ವ್ಯವಸ್ಥೆಯಲ್ಲಿ ತನ್ನ ಬೇರುಗಳನ್ನು ಹೊಂದಿರುತ್ತವೆ. ಇದನ್ನು ಲೆನಿನ್ (Lenin) (ನೋಡಿ ಪುಟ. 99) 'ರಾಜಕಾರಣವು ಆರ್ಥಿಕತೆಯ ಅತ್ಯಂತ ಸಾಂದ್ರೀಕೃತ ರೂಪವಾಗಿದೆ' ಎಂದು ವಿವರಿಸಿದ್ದ. ರಾಜಕಾರಣವನ್ನು ಪ್ರಭುತ್ವಕ್ಕೆ ಮತ್ತು ಒಂದು ಸಂಕುಚಿತ ಸಾರ್ವಜನಿಕ ವಲಯಕ್ಕೆ ಸೀಮಿತಗೊಳಿಸಬಹುದು ಎನ್ನುವ ನಂಬಿಕೆಗೆ ವಿರುದ್ಧವಾಗಿ ಮಾರ್ಕ್ಸ್‌ವಾದಿಗಳು 'ಆರ್ಥಿಕ ಎಂಬುದು ರಾಜಕೀಯ ವಿಷಯವೇ' ಎಂದು ನಂಬುತ್ತಾರೆ ಎಂದು ಹೇಳಬಹುದಾಗಿದೆ. ಈ ದೃಷ್ಟಿಕೋನದಿಂದ, ಮಾರ್ಕ್ಸ್‌ವಾದಿಗಳು ಭಾವಿಸುವಂತೆ ಸಂಘರ್ಷವನ್ನು ಗುಣಲಕ್ಷಣವನ್ನಾಗಿ ಹೊಂದಿರುವ ನಾಗರಿಕ ಸಮಾಜವೇ ರಾಜಕಾರಣದ ಕೇಂದ್ರಬಿಂದುವಾಗಿದೆ.

ಈ ಬಗೆಯ ನಿಲುವುಗಳು ರಾಜಕಾರಣವನ್ನು ನಕಾರಾತ್ಮಕವಾಗಿ ಬಿಂಬಿಸುತ್ತವೆ. ಸರಳವಾಗಿ, ರಾಜಕಾರಣವೆಂಬುದು ದಬ್ಬಾಳಿಕೆ, ಅಧೀನತೆಗಳಿಗೆ ಸಂಬಂಧಿಸಿದ ವಿಷಯವಾಗಿದೆ. ಸಮಾಜ ಪಿತೃಪ್ರಧಾನವಾದುದಾಗಿದ್ದು ಇಲ್ಲಿ ಮಹಿಳೆಯನ್ನು ಪುರುಷ ಶಕ್ತಿ ವ್ಯವಸ್ಥಿತವಾಗಿ ಅಧೀನವಾಗಿಸಿಕೊಳ್ಳುತ್ತದೆ ಎಂದು ತೀವ್ರಗಾಮಿ ಸ್ತ್ರೀವಾದಿ ಚಿಂತಕಿಯರು ಪ್ರತಿಪಾದಿಸುತ್ತಾರೆ. ಇನ್ನು ಸಾಂಪ್ರದಾಯಿಕವಾಗಿ ಮಾರ್ಕ್ಸ್‌ವಾದಿಗಳು ರಾಜಕಾರಣವು ಒಂದು ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಮಧ್ಯಮ ವರ್ಗ (bourgeoisie (ಬೂರ್ಜ್ವಾಜಿಗಳು))ದವರು ಕಾರ್ಮಿಕರನ್ನು ಶೋಷಿಸುವ ಒಂದು ಗುಣಲಕ್ಷಣವನ್ನು ಹೊಂದಿದೆ ಎಂದು ವಾದಿಸಿದರು. ಮತ್ತೊಂದೆಡೆ, ರಾಜಕಾರಣದ ಮೂಲಕ

ಅನ್ಯಾಯ, ಪ್ರಾಬಲ್ಯವನ್ನು ಪ್ರಶ್ನಿಸಬಹುದು ಎನ್ನುವ ಕಾರಣದಿಂದ ರಾಜಕಾರಣವನ್ನು ಒಂದು ವಿಮೋಚನಾ ಶಕ್ತಿಯಾಗಿಯೂ ನೋಡಲು ಸಾಧ್ಯವಿದೆ ಎನ್ನುವಂತಹ ದೃಷ್ಟಿಕೋನವು ಈ ಬಗೆಯ ನಕಾರಾತ್ಮಕ ಸೂಚ್ಯಾಪರಿಣಾಮಗಳನ್ನು ಸರಿದೂಗಿಸುತ್ತವೆ. ಕಾರ್ಮಿಕರ ಕ್ರಾಂತಿಯ ಮೂಲಕ ಈ ಶೋಷಣೆಯ ವ್ಯವಸ್ಥೆಯನ್ನು ಬುಡಮೇಲು ಮಾಡಬಹುದು ಎಂದು ಮಾರ್ಕ್ಸ್ ಭವಿಷ್ಯವಾಣಿ ನುಡಿದಿದ್ದ. ಇನ್ನು ತೀವ್ರಗಾಮಿ ಸ್ತ್ರೀವಾದಿ ಚಿಂತಕಿಯರು ಲಿಂಗಾಧಾರಿತ ಕ್ರಾಂತಿಯ ಮೂಲಕ ಲಿಂಗ ಸಂಬಂಧಗಳನ್ನು ಮರುವ್ಯವಸ್ಥೆಗೊಳಿಸಬೇಕಾದ ಅಗತ್ಯವಿದೆ ಎಂದು ಘೋಷಿಸುತ್ತಾರೆ. ಅದೇನೇ ಇರಲಿ, ರಾಜಕಾರಣವನ್ನು ಅಧಿಕಾರ ಮತ್ತು ಪ್ರಾಬಲ್ಯದ ನೆಲೆಯಲ್ಲಿರಿಸಿ ನೋಡಿದಾಗ ಅದುವೇ ಸಾಮಾಜಿಕ ಬದುಕಿನ ಅನಿವಾರ್ಯ ಲಕ್ಷಣವಾಗಿರುತ್ತದೆ ಎಂದೇನೂ ಭಾವಿಸಬೇಕಿಲ್ಲ ಎಂಬುದಂತೂ ಸ್ಪಷ್ಟ. ಲಿಂಗಭೇದಭಾವವಿಲ್ಲದ (non-sexist) ಸಾಮಾಜಿಕ ರಚನೆಯ ಮೂಲಕ 'ಲಿಂಗಾಧಾರಿತ ರಾಜಕಾರಣ'ಕ್ಕೆ ಕೊನೆ ಹಾಡಬಹುದು, ಅಂತಹುದೊಂದು ಸಮಾಜದಲ್ಲಿ ವ್ಯಕ್ತಿಯನ್ನು ಆತನ/ಆಕೆಯ ವ್ಯಕ್ತಿಗತ ಯೋಗ್ಯತೆಯ ಆಧಾರದ ಮೇಲೆ ಅಳೆಯಲಾಗುತ್ತದೆ ಹೊರತು ಲಿಂಗಾಧಾರದ ಮೇಲೆ ಅಲ್ಲ ಎಂದು ಸ್ತ್ರೀವಾದಿಗಳು ಆಶಿಸುತ್ತಾರೆ. ವರ್ಗರಹಿತ ಕಮ್ಯೂನಿಸ್ಟ್ ಸಮಾಜದ ಸ್ಥಾಪನೆಯೊಂದಿಗೆ 'ವರ್ಗಾಧಾರಿತ ರಾಜಕಾರಣ' ಕೊನೆಯಾಗುತ್ತದೆ; ಇದು ಕ್ರಮೇಣ ಪ್ರಭುತ್ವದ ದುರ್ಬಲವಾಗುವಿಕೆಗೆ ದಾರಿ ಮಾಡಿಕೊಡುತ್ತದೆ ಮತ್ತು ಇದರೊಂದಿಗೆ ಸಾಂಪ್ರದಾಯಿಕ ಅರ್ಥದಲ್ಲಿ ರಾಜಕೀಯವನ್ನು ಅಂತ್ಯಗೊಳಿಸುತ್ತದೆ ಎಂದು ಮಾರ್ಕ್ಸ್‌ವಾದಿಗಳು ನಂಬುತ್ತಾರೆ.

**ರಾಜಕಾರಣ – ಕ್ರಿಯೆಯಲ್ಲಿ. . .**

**ಸ್ತ್ರೀ ವಿಮೋಚನಾ ಚಳವಳಿಯ ಉದಯ: ರಾಜಕಾರಣವನ್ನು ವೈಯಕ್ತಿಕಗೊಳಿಸುವುದತ್ತ?**

**ಘಟನಾವಳಿಗಳು:**

ಮಹಿಳೆಯರಿಗೆ ಮತದಾನದ ಹಕ್ಕು (suffrage) ಅಭಿಯಾನದೊಂದಿಗೆ ಪ್ರಾರಂಭ ಗೊಂಡ ಒಂದು ಸುಸಂಘಟಿತ ಮಹಿಳಾ ಚಳವಳಿ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಪ್ರಾರಂಭವಾಯಿತಾದರೂ 1960ರ ಮಹಿಳಾ ವಿಮೋಚನಾ ಚಳವಳಿಯ ಜನನದೊಂದಿಗೆ ಹೊಸ ಚೈತನ್ಯವನ್ನು ಪಡೆಯಿತು. ಈ ಕಾಲಘಟ್ಟವನ್ನು ಸ್ತ್ರೀವಾದದ 'ಎರಡನೆಯ ಅಲೆ' ಎಂದು ಸಹ ಭಾವಿಸಲಾಗಿದೆ. ಮಹಿಳೆಯ ಸ್ಥಾನಮಾನಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಪರಿಹರಿಸಲು ಬರೀ ರಾಜಕೀಯ ಕ್ಷೇತ್ರದಲ್ಲಿ ಸುಧಾರಣೆಗಳನ್ನು ತಂದರೆ ಸಾಲದು ಅದರೊಂದಿಗೆ ಮಹಿಳೆಯ 'ಪ್ರಜ್ಞೆಯನ್ನು ಜಾಗೃತಿ'ಗೊಳಿಸುವ ಮೂಲಕ ಮತ್ತು ಅವಳ ಕೌಟುಂಬಿಕ,

**Commented [C3]:** The text has been indented to differentate it from the main text. The text is too big to be boxed in the word file here.

**Commented [C4]:** The women's Suffragette movement

ಗೃಹಸಂಬಂಧೀ ಹಾಗೂ ವೈಯಕ್ತಿಕ ಬದುಕನ್ನು ಪರಿವರ್ತಿಸುವುದರ ಮೂಲಕ ಒಂದು ಆಮೂಲಾಗ್ರ ಮತ್ತು ವಿಶೇಷವಾಗಿ ಸಾಂಸ್ಕೃತಿಕ ಬದಲಾವಣೆ ಪ್ರಕ್ರಿಯೆಯ ಅಗತ್ಯವಿದೆ ಎನ್ನುವ ನಂಬಿಕೆಯನ್ನು ಈ ಚಳವಳಿ ಬಿಂಬಿಸಿತು. 'ಹೆಣ್ತನ'ದ ಕುರಿತಾದ ರೂಢಿಗತ ಸಾಂಪ್ರದಾಯಿಕ ನಂಬಿಕೆಗಳಿಗೆ ಸವಾಲೆಸೆಯುವಂತಹ ಪ್ರತಿಭಟನೆಗಳು ಶುರುವಾದವು. ಉದಾಹರಣೆಗೆ, 1968 ಮತ್ತು 1969ರ ಮಿಸ್ ಅಮೆರಿಕಾ ಸೌಂದರ್ಯ ಸ್ಪರ್ಧೆಯಲ್ಲಿ ಪ್ರತಿಭಟನಾಕಾರರು ಸ್ಟಿಲೆಟ್ಟೋ ಶೂಗಳನ್ನು ಮತ್ತು ದಬ್ಬಾಳಿಕೆಯನ್ನು ಸೂಚಿಸುವ ಇಂತಹ ಇನ್ನಿತರ ಸಾಂಕೇತಿಕ ವಸ್ತುಗಳನ್ನು 'ಫ್ರೀಡಂ ಟ್ರಾಶ್ಕ್ಯಾನ್' ಎಂಬ ಹೆಸರಿನ ಕಸದ ಬುಟ್ಟಿಯಲ್ಲಿ ಎಸೆಯುವ ಮೂಲಕ ಖ್ಯಾತಪಡೆದುದಲ್ಲದೆ ಬ್ರಾಗಳನ್ನು ಸುಡುವ ಪ್ರತಿಭಟನೆ ಎನ್ನುವ ತಪ್ಪಾದ ವಿಕ್ಯಾತಿಯನ್ನು ಸಂಪಾದಿಸಿದರು. 1970ರಲ್ಲಿ ನಡೆದ ಮಿಸ್ ವರ್ಲ್ಡ್ ಸೌಂದರ್ಯ ಸ್ಪರ್ಧೆಯಲ್ಲಿ 50 ಮಹಿಳೆಯರು ಮತ್ತು ಬೆರಳೆಣಿಕೆಯಷ್ಟು ಪುರುಷರು ವೇದಿಕೆಯ ಮೇಲೆ ಬಂದು ಲಕ್ಷಾಂತರ ಟಿವಿ ವೀಕ್ಷಕರ ಸಮ್ಮುಖದಲ್ಲಿ ವೇದಿಕೆಯತ್ತ ಹಿಟ್ಟಿನ ಬಾಂಬು, ದುರ್ವಾಸನೆಯ ಬಾಂಬು, ಮಸಿಯ ಬಾಂಬು, ಭಿತ್ತಿ ಪತ್ರಗಳನ್ನು ಎಸೆದಿದ್ದರು. ಈ ತೀವ್ರಗಾಮಿ ಸ್ತ್ರೀವಾದೀಯ ಚಳವಳಿ 1970ರ ನಂತರ ಕ್ಷೀಣಿಸಲಾರಂಭಿಸಿತಾದರೂ ಮಹಿಳಾ ಚಳವಳಿ ದಿನೇ ದಿನೇ ಬೆಳೆಯುತ್ತಲೇ ಹೋಯಿತು ಹಾಗೂ ಪ್ರಮುಖ ಅಂತಾರಾಷ್ಟ್ರೀಯ ಆಯಾಮವನ್ನು ಪಡೆದುಕೊಂಡಿತು.

**ಮಹತ್ವ:**

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಶುರುವಾದ ಸ್ತ್ರೀವಾದಿ ಚಳವಳಿಯ 'ಮೊದಲ ಅಲೆ'ಯನ್ನು ಸಾಂಪ್ರದಾಯಿಕ 'ರಾಜಕಾರಣ'ದ ಅರ್ಥದ ಚೌಕಟ್ಟಿನೊಳಗಡೆ ರೂಪಿಸಲಾಗಿತ್ತು. 'ಮಹಿಳೆಯರಿಗೆ ಮತದಾನದ ಹಕ್ಕ'ನ್ನು ದೊರಕಿಸಿಕೊಡುವುದೇ ಆ ಕಾಲಘಟ್ಟದ ಸ್ತ್ರೀವಾದಿಯ ಮುಖ್ಯ ಗುರಿಯಾಗಿತ್ತು. ಆದ್ದರಿಂದ ರಾಜಕಾರಣವೆಂಬುದು 'ಸಾರ್ವಜನಿಕ' ವಲಯ ಎಂದು ಭಾವಿಸಲಾದ , ಸರ್ಕಾರಿ ಸಂಸ್ಥೆಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ, ಸಾರ್ವಜನಿಕ ಚರ್ಚೆಗಳಲ್ಲಿ, ಹಿತಾಸಕ್ತಿಯ ಗುಂಪುಗಳಲ್ಲಿ ಮಾತ್ರ ಸಂಭವಿಸುತ್ತದೆ ಎನ್ನುವ ಕಲ್ಪನೆಯನ್ನು ಅದು ಒಪ್ಪಿಕೊಂಡಿತ್ತು. ಹಾಗಾಗಿ ಮಹಿಳಾ ವಿಮೋಚನೆಯನ್ನು ಮಹಿಳೆಯರಿಗೆ ಸಾರ್ವಜನಿಕ ವಲಯಕ್ಕೆ ಪ್ರವೇಶಾವಕಾಶವೆಂದು ಮತ್ತು ವಿಶೇಷವಾಗಿ ಈಗಾಗಲೇ ಪುರುಷರು ಅನುಭವಿಸುತ್ತಿದ್ದ ರಾಜಕೀಯ ಹಕ್ಕುಗಳು ಅವರಿಗೂ ದೊರಕಬೇಕು ಎನ್ನುವುದಾಗಿ ವ್ಯಾಖ್ಯಾನಿಸಲಾಯಿತು. ಆದಾಗ್ಯೂ, ಸ್ತ್ರೀವಾದದ 'ಎರಡನೆಯ ಅಲೆ'ಯ ಒಂದು ಮುಖ್ಯ ಗುರಿಯು

ರಾಜಕಾರಣದ ಕುರಿತು ಇದ್ದ ಸಾಂಪ್ರದಾಯಿಕ ಆಲೋಚನೆಯನ್ನು ಪ್ರಶ್ನಿಸುವುದಾಗಿತ್ತು, ಅಂದರೆ ರಾಜಕಾರಣದ ಸ್ವರೂಪ ಮತ್ತು ರಾಜಕಾರಣ ಸಂಭವಿಸುವ ಸ್ಥಳ – ಎರಡನ್ನೂ ಪ್ರಶ್ನಿಸುವ ಮತ್ತು ಬುಡಮೇಲು ಮಾಡುವ ಪ್ರಯತ್ನವಾಗಿತ್ತು. ತೀವ್ರಗಾಮಿ ಸ್ತ್ರೀವಾದಿ ಚಿಂತಕರು ರಾಜಕಾರಣ ಎನ್ನುವುದು ಸಾರ್ವಜನಿಕ/ಖಾಸಗಿ ಎಂಬ ವಿಭಜನೆಯಲ್ಲಿ ನೆಲೆಗೊಂಡಿರುತ್ತದೆ ಎಂಬ ಕಲ್ಪನೆಯನ್ನೇ ಪ್ರಶ್ನಿಸಿದರು. ಮೊದಲಿಗೆ, ರಾಜಕಾರಣವೆಂಬುದು ಎಂದಿಗೂ ಸಾರ್ವಜನಿಕ ವಲಯದಲ್ಲಿನ ಚಟುವಟಿಕೆಯಾಗಿರುತ್ತದೆ ಎಂಬ ಕಲ್ಪನೆ ಮಹಿಳೆಯರನ್ನು ಬಹಳ ಪರಿಣಾಮಕಾರಿಯಾಗಿ ರಾಜಕೀಯ ಬದುಕಿನಿಂದ ದೂರ ಇರಿಸುತ್ತದೆ ಎಂದು ವಾದಿಸಿದರು. ಇದಕ್ಕೆ ಕಾರಣವೇನೆಂದರೆ, ವಿಭಿನ್ನ ಹಂತಗಳಲ್ಲಾದರೂ, ಎಲ್ಲ ಸಮಕಾಲೀನ ಹಾಗೂ ಚಾರಿತ್ರಿಕ ಸಮಾಜಗಳೂ ಸಾಮಾಜಿಕ ಚಟುವಟಿಕೆಗಳನ್ನು ಲಿಂಗಾಧಾರಿತವಾಗಿ ವಿಂಗಡಿಸಿದ್ದವು. ಇಲ್ಲಿ ರಾಜಕಾರಣ (ಸಾಂಪ್ರದಾಯಿಕ ಅರ್ಥದಲ್ಲಿ), ವೃತ್ತಿಬದುಕು, ಕಲೆ, ಸಾಹಿತ್ಯ ಮುಂತಾದವುಗಳನ್ನು ಒಳಗೊಂಡಿರುವ ಸಾರ್ವಜನಿಕ ವಲಯವನ್ನು ಪುರುಷರಿಗೆ ಮೀಸಲಾಗಿಸಿದ್ದರೆ ಮಹಿಳೆಯರ ಬದುಕು ಕುಟುಂಬ, ಗೃಹಸಂಬಂಧೀ ಜವಾಬ್ದಾರಿಗಳ ಮೇಲೆ ಕೇಂದ್ರಿತವಾಗಿದ್ದು ಪ್ರಧಾನವಾಗಿ ಅವರನ್ನು ‘ಖಾಸಗಿ’ ವಲಯಕ್ಕೆ ಸೀಮಿತಪಡಿಸಿತ್ತು. ಅಲ್ಲದೆ ರಾಜಕಾರಣ ಕೇವಲ ಸಾರ್ವಜನಿಕ ಚಟುವಟಿಕೆಗಳಿಗೆ ಮತ್ತು ಸಂಸ್ಥೆಗಳಿಗೆ ಸೀಮಿತವಾದಲ್ಲಿ ‘ಸಾರ್ವಜನಿಕ ಪುರುಷ’ ಮತ್ತು ‘ಖಾಸಗಿ ಮಹಿಳೆ’ ಎಂಬ ಶ್ರಮದ ಲಿಂಗಾಧಾರಿತ ವಿಭಜನೆ ಬದುಕಿನ ಪ್ರಕೃತಿ ಸಹಜ ಸಂಗತಿ ಎಂದೆನಿಸುತ್ತದೆ; ಪುರುಷಾಧಿಕಾರ ವ್ಯವಸ್ಥೆಯ ಸ್ಥಾಪನೆಗೆ ಮತ್ತು ಸಂರಕ್ಷಣೆಗೆಂದು ಬಳಸಲಾದ ಒಂದು ಮುಖ್ಯ ಕಾರ್ಯತಂತ್ರ ಎಂಬ ಅಂಶ ಮರೆಗೆ ಸರಿದುಬಿಡುತ್ತದೆ.

ರಾಜಕೀಯದ ಸಾಂಪ್ರದಾಯಿಕ ದೃಷ್ಟಿಕೋನದ ತೀವ್ರಗಾಮಿ ಸ್ತ್ರೀವಾದಿ ವಿಮರ್ಶೆಯ ಅತ್ಯಂತ ಪ್ರಭಾವೀಯ ಲಕ್ಷಣವೇನೆಂದರೆ ಅದು ರಾಜಕಾರಣವೆಂಬುದು ಕೇವಲ ಸಾರ್ವಜನಿಕ ಬದುಕಿನಲ್ಲಿ ಸಂಭವಿಸುವ ವಿದ್ಯಮಾನವಲ್ಲ, ಅಷ್ಟೇ ಮಹತ್ವದ ಮತ್ತು ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಅದು ಖಾಸಗಿ ಬದುಕಿನಲ್ಲೂ ಸಂಭವಿಸುತ್ತದೆ ಎಂಬುದಾಗಿದೆ. ‘ವೈಯಕ್ತಿಕವಾದುದೂ ರಾಜಕಾರಣವೇ’ ಎಂಬ ಘೋಷವಾಕ್ಯದೊಂದಿಗೆ ಈ ವಿಚಾರವನ್ನು ಪ್ರಚಾರ ಮಾಡಲಾಯಿತು. ರಾಜಕಾರಣವನ್ನು ಶಕ್ತಿ, ನಿಯಂತ್ರಣ, ಪ್ರಾಬಲ್ಯವೆಂದು ಮರುವ್ಯಾಖ್ಯಾನಿಸುವುದರ ಮೂಲಕ ತೀವ್ರಗಾಮಿ ಸ್ತ್ರೀವಾದಿ ಚಿಂತಕರು ಕುಟುಂಬ ಹಾಗೂ ಗೃಹಸಂಬಂಧೀ ಬದುಕನ್ನು ರಾಜಕಾರಣ ಸಂಭವಿಸುವ ಒಂದು ನಿರ್ಣಾಯಕ ಕಣ ಎಂಬುದಾಗಿ ಚಿತ್ರಿಸಿದರು. ಏಕೆಂದರೆ ಕ್ರಮವಾಗಿ ಹೆಂಡತಿ ಮತ್ತು ಮಕ್ಕಳ ಮೇಲೆ ಗಂಡ ಮತ್ತು

**Commented [C5]:** Corrected as it was not just their idea but it was influential as to radically rethink the notion of politics itself – a fundamental shift

ತಂದೆಯರ ಪ್ರಾಬಲ್ಯವು ಹುಡುಗರು ಹಾಗೂ ಹುಡುಗಿಯರು ಸಮಾಜದಲ್ಲಿ ಭಿನ್ನ ಪಾತ್ರಗಳನ್ನು ಸ್ವೀಕರಿಸುವಂತೆ ಮತ್ತು ವಿಭಿನ್ನ ಆಶೋತ್ತರಗಳನ್ನು ಅಪೇಕ್ಷಿಸುವಂತೆ ಸಜ್ಜುಗೊಳಿಸುತ್ತದೆ. ಪೀಳಿಗೆಯಿಂದ ಪೀಳಿಗೆಗೆ, ಕುಟುಂಬದ ಪಿತೃಪ್ರಧಾನದ ರಚನೆಯು ಪ್ರಾಬಲ್ಯವನ್ನು ಪುನರಾವರ್ತಿಸುತ್ತದೆ. ಈ ದೃಷ್ಟಿಕೋನದಿಂದ ಮಹಿಳೆಯರು ಪಿತ್ರಪ್ರಧಾನ ದಬ್ಬಾಳಿಕೆಯನ್ನು ಪ್ರಶ್ನಿಸಲು ಹೊರಟಲ್ಲಿ ಅವರು ತಮ್ಮ 'ವೈಯಕ್ತಿಕ' ನೆಲೆಯಿಂದ ತಮ್ಮ ಹೋರಾಟವನ್ನು ಪ್ರಾರಂಭಿಸಬೇಕಾಗುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಹಿರಿಯ ಹುದ್ದೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಅತಿ ಕಡಮೆ ಇದೆ ಎಂಬ ತರಹದ ಸಮಸ್ಯೆಗಳ ವಿರುದ್ಧ ಹೋರಾಡುವುದರ ಬದಲಾಗಿ ಅದರ ಮೂಲಾಧಾರ ಕಾರಣಗಳನ್ನು ಪ್ರಶ್ನಿಸಬೇಕಾಗುತ್ತದೆ: ಅಂದರೆ, ಕುಟುಂಬದೊಳಗೆ ಪೋಷಿಸುವ ರೂಢಿಗತವಾದ 'ಹೆಣ್ತನ' ಮತ್ತು 'ಗಂಡಸುತನ' ದ ವೈರುದ್ಧ್ಯಕರವಾದ ನಂಬಿಕೆಗಳನ್ನು ಮತ್ತು ಇವು ಪುರುಷರನ್ನು ಪ್ರಾಬಲ್ಯಕ್ಕೆ ಒಗ್ಗಿಸುವುದನ್ನು ಮತ್ತು ಮಹಿಳೆಯರನ್ನು ಅಧೀನತೆಯನ್ನು ಸ್ವೀಕರಿಸಲು ಪ್ರೋತ್ಸಾಹಿಸುವುದನ್ನು ಪ್ರಶ್ನಿಸಬೇಕಾಗುತ್ತದೆ.

**Commented [C6]:** Corrected as it is not just patriarchal families but the structure of a family itself which not only upholds but perpetuates the domination

**Commented [C7]:** Reorganized to bring out 2 important points: of questioning the underlying cause for under representation in positions and not just representation. Secondly to draw the process of socialization that takes place in the family structure

## ರಾಜಕಾರಣದ ಅಧ್ಯಯನ

## ರಾಜಕಾರಣದ ಅಧ್ಯಯನದ ವಿಧಾನಗಳು

ರಾಜಕೀಯ ಚಟುವಟಿಕೆಯ ಸ್ವರೂಪದ ಬಗ್ಗೆ ಭಿನ್ನಾಭಿಪ್ರಾಯಗಳಿರುವಂತೆ ರಾಜಕಾರಣದ ಸ್ವರೂಪವು ಒಂದು ಶೈಕ್ಷಣಿಕ ಅಧ್ಯಯನ ವಿಷಯವೆಂದು ಪರಿಗಣಿಸುವುದರ ಬಗ್ಗೆಯೂ ವಿವಾದಗಳಿವೆ ಎಂದು ಹೇಳಬಹುದು. ಬೌದ್ಧಿಕ ವಲಯದ ಅತಿ ಪ್ರಾಚೀನ ಶೋಧನೆಗಳಲ್ಲಿ ಒಂದಾದ ರಾಜಕಾರಣವು ಮೂಲತಃ ತತ್ವಶಾಸ್ತ್ರ, ಇತಿಹಾಸ ಅಥವಾ ಕಾನೂನಿನ ಒಂದು ಪರಿಕರವಾಗಿತ್ತು. ಮನುಷ್ಯ ಸಮಾಜ ಯಾವ ತತ್ವದ ಆಧಾರದ ಮೇಲೆ ಜೀವಿಸಬೇಕು ಎಂಬ ಜಿಜ್ಞಾಸೆ ಇದರ ಕೇಂದ್ರ ಆಶಯವಾಗಿತ್ತು. ಆದಾಗ್ಯೂ, 19ನೇ ಶತಮಾನದ ಉತ್ತರಾರ್ಧದ ನಂತರ, ಈ ತಾತ್ವಿಕ ಪ್ರಾಮುಖ್ಯತೆ ಕ್ರಮೇಣವಾಗಿ ಗೌಣವಾಯಿತು, ಇದಕ್ಕೆ ಬದಲಾಗಿ ರಾಜಕಾರಣವನ್ನು ಒಂದು ವೈಜ್ಞಾನಿಕ ಅಧ್ಯಯನ ಶಿಸ್ತಿನಂತೆ ಪರಿಶೀಲಿಸುವ ಪ್ರಯತ್ನ ನಡೆಯಿತು. ಈ ಪ್ರಯತ್ನ 1950 ಹಾಗು 1960ರ ದಶಕಗಳಲ್ಲಿ ತನ್ನ ಚರಮಾವಸ್ಥೆ ತಲುಪಿತು. ಈ ಹೊಸ ಪ್ರಯತ್ನ ಪ್ರಾಚೀನ ಸಾಂಪ್ರದಾಯಿಕ ಚಿಂತನೆಯನ್ನು ಅರ್ಥಹೀನ ತತ್ವಮೀಮಾಂಸೆ ಎಂದು ಸಾರಾಸಗಟಾಗಿ ತಿರಸ್ಕರಿಸಿತು. ಅಲ್ಲಿಂದಾಚೆಗೆ ಕಟ್ಟುನಿಟ್ಟಾದ ರಾಜಕೀಯ ವಿಜ್ಞಾನದ ಉತ್ಸಾಹ ಕ್ಷೀಣಿಸಿತು ಹಾಗೂ ನಿರಂತರ ಎಂದೆನ್ನಿಸಿಕೊಂಡಿರುವ ರಾಜಕೀಯ ಮೌಲ್ಯಗಳು ಮತ್ತು ಪ್ರಮಾಣಕ (normative) ಸಿದ್ಧಾಂತಗಳು ಹೆಚ್ಚಿನ ಪ್ರಾಮುಖ್ಯಗಳಿಸಿದವು. ಪ್ರತಿಯೊಬ್ಬರಿಗೂ ಒಪ್ಪಿತವಾದ ಸಾರ್ವತ್ರಿಕ ಮೌಲ್ಯಗಳ 'ಪರಂಪರಾಗತ'

ಹುಡುಕಾಟವನ್ನು ಕೈಬಿಡಲಾಗಿದೆ ಎಂದಾದಲ್ಲಿ ವಿಜ್ಞಾನವೊಂದೇ ಸತ್ಯದರ್ಶನ ಮಾಡಿಸಬಲ್ಲದು ಎಂಬ ಆಗ್ರಹವನ್ನೂ ಕೈಬಿಡಲಾಗಿದೆ, ಇದರ ಫಲವಾಗಿ ಇನ್ನೂ ಸಮೃದ್ಧವಾದ, ಇನ್ನೂ ಕುತೂಹಲಕಾರಿಯಾದ ಜ್ಞಾನಶಾಖೆಗಳು ಹುಟ್ಟಿಕೊಂಡವು. ಏಕೆಂದರೆ ಸ್ಪಷ್ಟವಾಗಿ ಇದು ವೈವಿಧ್ಯಮಯವಾದ ಸೈದ್ಧಾಂತಿಕ ವಿಧಾನಗಳನ್ನು ಮತ್ತು ವಿವಿಧ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡುವ ಗುಂಪುಗಳನ್ನು ಒಳಗೊಂಡಿದ್ದವು. .

**ತತ್ವಶಾಸ್ತ್ರೀಯ ಪರಂಪರೆ**

ರಾಜಕೀಯ ವಿಶ್ಲೇಷಣೆಯ ಮೂಲವನ್ನು ಪ್ರಾಚೀನ ಗ್ರೀಕ್ ನಾಗರಿಕತೆಯಲ್ಲೇ ಗುರುತಿಸಬಹುದಾಗಿದೆ ಮತ್ತು ಈ ಪರಂಪರೆಯನ್ನು 'ರಾಜಕೀಯ ತತ್ವಶಾಸ್ತ್ರ' ಎಂದು ಸಾಮಾನ್ಯವಾಗಿ ಕರೆಯಲ್ಪಡಲಾಗುತ್ತದೆ. ಇದರಲ್ಲಿ ನೈತಿಕ, ವಿಧಾಯಕ ಅಥವಾ **ಪ್ರಮಾಣಕ (normative)** ಪ್ರಶ್ನೆಗಳ ಬಗ್ಗೆ ಚಿಂತನೆ ನಡೆಯುತ್ತಿತ್ತು. ಅಂದರೆ 'ಏನಿದೆ' ಎಂಬುದಕ್ಕಿಂತಲೂ ಮಿಗಿಲಾಗಿ 'ಏನಿರಬೇಕು', 'ಹೇಗಿರಬೇಕು', 'ಯಾವುದಿರಲೇಬೇಕು' ಎಂಬುದೇ ಈ ಚರ್ಚೆಗಳ ಮುಖ್ಯ ವಿಷಯವಾಗಿತ್ತು. ಪ್ಲೇಟೋ (Plato) ಮತ್ತು ಅರಿಸ್ಟಾಟಲ್(Aristotle) ಈ ಪರಂಪರೆಯ ಮೂಲ ಪುರುಷರು ಎಂದು ಹೇಳಲಾಗುತ್ತದೆ. ಮಧ್ಯಯುಗದ ಸಿದ್ಧಾಂತಿಗಳಾದ ಅಗಸ್ಟಿನ್ (Augustine) (354–430), ಅಕ್ವೈನಸ್ (Aquinas) (1225–74) ಮುಂತಾದವರ ಬರವಣಿಗೆಗಳಲ್ಲಿ ಅವರ ವಿಚಾರಗಳೇ ಪ್ರತಿಫಲನವಾಗುವುದನ್ನು ನಾವು ಕಾಣಬಹುದು. ಉದಾಹರಣೆಯೊಂದಿಗೆ ವಿವರಿಸುವುದಾದರೆ, ಒಂದು ಆದರ್ಶ ಸಮಾಜದ ಸ್ವರೂಪವನ್ನು ವಿವರಿಸುವುದು ಪ್ಲೇಟೋನ ಕೃತಿಗಳ ಮೂಲ ವಿಷಯವಾಗಿತ್ತು. ಅಂತಹುದೊಂದು ರಾಜ್ಯ ತತ್ವಜ್ಞಾನಿಗಳಾದ ರಾಜರುಗಳ ಉಗ್ರವಲ್ಲದ ಸರ್ವಾಧಿಕಾರದ ಆಳ್ವಿಕೆಯಲ್ಲಿ ನಡೆಯುತ್ತದೆ ಎಂದು ಅವನು ಯೋಚಿಸಿದ.

ಇಂತಹ ಬರವಣಿಗೆಗಳು ರಾಜಕಾರಣದ 'ಪರಂಪರಾಗತ' ಚಿಂತನೆಯ ತಳಹದಿಯಾಗಿವೆ. ರಾಜಕೀಯ ಚಿಂತನೆಯ ಕೇಂದ್ರ ಆಶಯವಾದ ಇಂತಹ ಚಿಂತನೆಗಳು ಹಾಗೂ ಸಿದ್ಧಾಂತಗಳು ವಿಶ್ಲೇಷಣಾತ್ಮಕ ಅಧ್ಯಯನವಾಗಿದೆ. ಇದು ಚಾರಿತ್ರಿಕ ರಾಜಕೀಯ ಚಿಂತನೆಯ ರೂಪ ಪಡೆದುಕೊಂಡಿದ್ದು ಇದು 'ಪ್ರಮುಖ' ಚಿಂತಕರ (ಪ್ಲೇಟೋನಿಂದ ಮಾರ್ಕ್ಸ್‌ವರೆಗೆ) ಮತ್ತು ಅಂಗೀಕೃತ ಮೂಲಕೃತಿಗಳಲ್ಲಿ 'ಅತಿಶ್ರೇಷ್ಠ'ವಾದ ಕೃತಿಗಳ ಮೇಲೆ ಕೇಂದ್ರೀಕರಿಸುತ್ತವೆ. ಇದಕ್ಕೆ ಸಾಹಿತ್ಯಿಕ ವಿಶ್ಲೇಷಣೆಯ ಗುಣವಿದೆ: ಪ್ರಮುಖ ಚಿಂತಕರು ಏನು ಹೇಳಿದರು, ತಮ್ಮ ಚಿಂತನೆಯನ್ನು ಹೇಗೆ ಅಭಿವೃದ್ಧಿಪಡಿಸಿದರು ಅಥವಾ ಸಮರ್ಥಿಸಿಕೊಂಡರು, ಅವರ ಚಿಂತನೆಗೆ ಹಿನ್ನೆಲೆಯಾಗಿ ಒದಗಿ ಬಂದಿದ್ದ ಬೌದ್ಧಿಕ ಸಂದರ್ಭ ಎಂಥದು ಎಂಬಿತ್ಯಾದಿಗಳನ್ನು ಪರಿಶೀಲಿಸುವುದರಲ್ಲಿ ಇದು ಆಸಕ್ತಿ ಹೊಂದಿರುತ್ತದೆ. ಇಂತಹ ವಿಶ್ಲೇಷಣೆಗಳು ವಿಮರ್ಶಾತ್ಮಕವಾದುದು, ಸೂಕ್ಷ್ಮವಾದುದು ಎನಿಸಿದರೂ ಇದನ್ನು ಯಾವುದೇ ವೈಜ್ಞಾನಿಕ ಅರ್ಥದಲ್ಲೂ **ವಸ್ತುನಿಷ್ಠ (objective)** ಎಂದು ಕರೆಯಲು

ಬರುವುದಿಲ್ಲ. ಏಕೆಂದರೆ ಇವು 'ನಾನೇಕೆ ಪ್ರಭುತ್ವಕ್ಕೆ ವಿಧೇಯನಾಗಿರಬೇಕು?' 'ಪರಿಹಾರಗಳನ್ನು ಹೇಗೆ ನೀಡಬೇಕು?', 'ವ್ಯಕ್ತಿ ಸ್ವಾತಂತ್ರ್ಯದ ಮಿತಿಗಳೇನಾಗಿರಬೇಕು?' ಎಂಬ ತರಹದ ಪ್ರಮಾಣಕ ಪ್ರಶ್ನೆಗಳನ್ನಷ್ಟೇ ಇವು ಪರಿಶೀಲಿಸುತ್ತವೆ.

**ಪ್ರಾಯೋಗಿಕ ಸಂಪ್ರದಾಯ**

ರಾಜಕೀಯ ಚಿಂತನೆಯಲ್ಲಿ ವಿವರಣಾತ್ಮಕ ಅಥವಾ **ಪ್ರಾಯೋಗಿಕ (empirical)** ಪರಂಪರೆ ಪ್ರಮಾಣಕ ಸೈದ್ಧಾಂತೀಕರಣದಷ್ಟು ಪ್ರಮುಖವಲ್ಲದಿದ್ದರೂ ಅದಕ್ಕೆ ಬಹು ಪ್ರಾಚೀನ ಪರಂಪರೆ ಇದೆ. ಸಂವಿಧಾನವನ್ನು ವರ್ಗೀಕರಿಸುವ ಅರಿಸ್ಟಾಟಲನ ಪ್ರಯತ್ನದಲ್ಲಿ (ನೋಡಿ ಪುಟ. ೨೬೭–೮), ಮಾಕ್ಯವಲ್ಲಿಯ ವಾಸ್ತವಿಕ ರಾಜಕಾರಣದ ಆಖ್ಯಾನದಲ್ಲಿ, ಸರ್ಕಾರ ಮತ್ತು ಕಾನೂನಿನ ಸಾಮಾಜಿಕ ಸಿದ್ಧಾಂತದ ಕುರಿತಾದ ಮಾಂಟೆಸ್ಕ್ಯೂ (Montesquieu)ನ ಬರವಣಿಗೆಗಳಲ್ಲಿ (ನೋಡಿ ಪುಟ. ೩೧೨) ಇದನ್ನು ನಾವು ಕಾಣಬಹುದು. ಹಲವು ರೀತಿಯಲ್ಲಿ ಅಂತಹ ಬರವಣಿಗೆಗಳು ಈಗ ನಾವು ಯಾವುದನ್ನು 'ತುಲನಾತ್ಮಕ ಸರ್ಕಾರ' ಎಂದು ಕರೆಯುತ್ತೇವೆಯೋ ಅದಕ್ಕೆ ತಳಹದಿಯಾಗಿವೆ ಮತ್ತು ಈ ಬರವಣಿಗೆಗಳು ಮೂಲಭೂತವಾಗಿ ಅಧ್ಯಯನಕ್ಕೆ ಒಂದು ಸಾಂಸ್ಥಿಕ ದೃಷ್ಟಿಕೋನವನ್ನು ಒದಗಿಸುತ್ತವೆ. ನಿರ್ದಿಷ್ಟವಾಗಿ ಅಮೆರಿಕಾ ಮತ್ತು ಯುಕೆಗಳಲ್ಲಿ ಇದು ಪ್ರಮುಖ ವಿಶ್ಲೇಷಣಾ ಪರಂಪರೆಯಾಗಿ ಅಭಿವೃದ್ಧಿ ಹೊಂದಿತು. ರಾಜಕೀಯ ವಿಶ್ಲೇಷಣೆಯ ಪ್ರಾಯೋಗಿಕ ಮಾರ್ಗವು ರಾಜಕೀಯ ವಾಸ್ತವವನ್ನು ತಟಸ್ಥ ಭಾವದಿಂದ, ನಿಷ್ಪಕ್ಷಪಾತದಿಂದ ವಿಶ್ಲೇಷಿಸುವ ವಿಧಾನದ್ದಾಗಿದೆ. ಇದನ್ನು 'ವಿವರಣಾತ್ಮಕ' ವಿಧಾನ ಎನ್ನಬಹುದು. ಈ ವಿಧಾನವು ರಾಜಕಾರಣವನ್ನು ವಿಶ್ಲೇಷಿಸಿ ವಿವರಿಸುವ ಪ್ರಯತ್ನವನ್ನು ಮಾಡುತ್ತದೆ. ಪ್ರಮಾಣಕ ವಿಧಾನವು 'ಸೂಚನಾತ್ಮಕ'ವಾದುದು. ಅಂದರೆ ಇದು ತೀರ್ಮಾನಗಳನ್ನು ತಲುಪುತ್ತದೆ, ಶಿಫಾರಸುಗಳನ್ನು ಮಾಡುತ್ತದೆ.

ವಿವರಣಾತ್ಮಕ ರಾಜಕೀಯ ವಿಶ್ಲೇಷಣೆಯು ತಾತ್ವಿಕವಾಗಿ ಪ್ರಾಯೋಗಿಕತೆಯ ಸಿದ್ಧಾಂತವನ್ನು ಆಧರಿಸಿದೆ. ಈ ವಿಧಾನವು ಹದಿನೇಳನೆಯ ಶತಮಾನದ ನಂತರ ಜಾನ್ ಲಾಕ್ (John Locke) (ನೋಡಿ ಪುಟ. ೩೧) ಮತ್ತು ಡೇವಿಡ್ ಹ್ಯೂಮ್ (David Hume) (೧೭೧೧–೭೬) ಮುಂತಾದ ಸಿದ್ಧಾಂತಿಗಳ ಸಂಶೋಧನೆಗಳ ಮೂಲಕ ಬೆಳೆದು ಹರಡಿತು. ಪ್ರಾಯೋಗಿಕ ಸಿದ್ಧಾಂತವು ಜ್ಞಾನಕ್ಕೆ ಅನುಭವವೇ ತಳಹದಿಯಾಗಿದೆ ಎಂಬ ನಂಬಿಕೆಯನ್ನು ಆಧರಿಸಿತ್ತು. ಹಾಗಾಗಿ ಈ ವಿಧಾನವು ಎಲ್ಲ ಸಿದ್ಧಾಂತಗಳೂ, ಅನುಮಾನಿತ ಸಿದ್ಧಾಂತಗಳೂ ಗಮನಿಸುವ ಪ್ರಕ್ರಿಯೆಯಿಂದ ಪರೀಕ್ಷೆಗೆ ಒಳಗಾಗಬೇಕು ಎಂದು ಪ್ರತಿಪಾದಿಸಿತು. ಹತ್ತೊಂಬತ್ತನೆಯ ಶತಮಾನದ ಹೊತ್ತಿಗೆ ಇಂತಹ ಚಿಂತನೆಗಳು 'ಪ್ರತ್ಯಕ್ಷೈಕ ಪ್ರಮಾಣವಾದ (positivism)' ಎಂಬ ಹೆಸರಿನಿಂದ ಅಭಿವೃದ್ಧಿ ಹೊಂದಿತು. ಈ ಬೌದ್ಧಿಕ ಚಳವಳಿಯು ಅಗಸ್ಟ್ ಕಾಮ್ಟ್ (Auguste Comte) (೧೭೯೮–೧೮೫೭) ಬರವಣಿಗೆಯೊಂದಿಗೆ ವಿಶೇಷ ಸಂಬಂಧ ಹೊಂದಿದೆ. ಸಮಾಜ ವಿಜ್ಞಾನಗಳು, ಹಾಗೆ ನೋಡಿದರೆ ಎಲ್ಲ ತಾತ್ವಿಕ ಜಿಜ್ಞಾಸೆಗಳೂ ಸಹ, ಪ್ರಾಕೃತಿಕ ವಿಜ್ಞಾನಗಳ ವಿಧಾನಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿರತಕ್ಕದ್ದು

ಎಂದು ಈ ಸಿದ್ಧಾಂತವು ಘೋಷಿಸಿತು. ಸತ್ಯದ ಅನಾವರಣಕ್ಕೆ ವಿಜ್ಞಾನವೊಂದೇ ವಿಶ್ವಾಸಾರ್ಹ ಸಾಧನ ಎಂಬುದು ಒಮ್ಮೆ ಮನವರಿಕೆಯಾದ ಮೇಲೆ ರಾಜಕೀಯ ವಿಜ್ಞಾನವನ್ನು ಅಭಿವೃದ್ಧಿ ಪಡಿಸಬೇಕಾದ ಒತ್ತಡ ಪ್ರಬಲವಾಯಿತು.

**ವರ್ತನಾವಾದ**

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ನಂತರ, ರಾಜಕೀಯ ವಿಶ್ಲೇಷಣೆಯ ಮುಖ್ಯವಾಹಿನಿಯಲ್ಲಿ 'ವೈಜ್ಞಾನಿಕ' ಪರಂಪರೆ ಪ್ರಮುಖ ಪಾತ್ರ ವಹಿಸಿದೆ. ಇದು **ಪ್ರತ್ಯಕ್ಷೈಕ ಪ್ರಮಾಣವಾದದ (positivism)** ಪ್ರಭಾವವನ್ನು ಸೂಚಿಸುವಂತಹ ಬೆಳವಣಿಗೆಯಾಗಿದೆ. 1870ರಲ್ಲಿ ಆಕ್ಸ್‌ಫರ್ಡ್, ಪ್ಯಾರಿಸ್ ಮತ್ತು ಕೊಲಂಬಿಯಾ ವಿಶ್ವವಿದ್ಯಾಲಯಗಳಲ್ಲಿ 'ರಾಜಕೀಯ ವಿಜ್ಞಾನ'ದ ಕೋರ್ಸುಗಳು ಪ್ರಾರಂಭವಾದವು. 1906ರ ಹೊತ್ತಿಗೆ '*American Political Science Review ( ಅಮೆರಿಕನ್ ಪೊಲಿಟಿಕಲ್ ಸೈನ್ಸ್ ರೆವ್ಯೂ)*' ಪ್ರಕಟಿಸಲಾಗುತ್ತಿತ್ತು. ಆದಾಗ್ಯೂ, 1950 ಮತ್ತು 1960ರ ದಶಕದಲ್ಲಿ **ವರ್ತನಾವಾದ (behaviouralism) ವನ್ನು** ಆಧರಿಸಿದ ಒಂದು ರೀತಿಯ ರಾಜಕೀಯ ವಿಶ್ಲೇಷಣೆಯಿಂದಾಗಿ ರಾಜಕೀಯ ವಿಜ್ಞಾನದ ವಿಷಯದ ಕುರಿತಾದ ಉತ್ಸಾಹ, ಮುಖ್ಯವಾಗಿ ಅಮೆರಿಕಾದಲ್ಲಿ, ತಾರಕಕ್ಕೇರಿತ್ತು. ಇದು ಮೊತ್ತ ಮೊದಲ ಸಲ ರಾಜಕಾರಣಕ್ಕೆ ವಿಶ್ವಸನೀಯವಾದ ವೈಜ್ಞಾನಿಕ ಅರ್ಹತೆಗಳನ್ನು ಒದಗಿಸಿತು, ಏಕೆಂದರೆ ಈ ಹಿಂದೆ ಯಾವೆಲ್ಲ ಕೊರತೆ ಇತ್ತೋ ಆ ಕೊರತೆಗಳೆಲ್ಲವೂ ಇದರಿಂದಾಗಿ ನೀಗಿದವು: ವಸ್ತುನಿಷ್ಠವಾದ ಪರಿಮಾಣಾತ್ಮಕವಾದ ಮಾಹಿತಿಯಿಂದ ಅನುಮಾನಿತ ಸಿದ್ಧಾಂತಗಳನ್ನು ಪರೀಕ್ಷಿಸಲು ಸಾಧ್ಯವಾಯಿತು. ರಾಜಕಾರಣವು ಪ್ರಾಕೃತಿಕ ವಿಜ್ಞಾನಗಳ ಅಧ್ಯಯನ ವಿಧಾನಗಳನ್ನು ಅಳವಡಿಸಿಕೊಳ್ಳಬಲ್ಲವು ಎಂದು ಡೇವಿಡ್ ಈಸ್ಟನ್ (David Easton) (1979,1981) ರಂತಹ ರಾಜಕೀಯ ವಿಶ್ಲೇಷಕರು ಘೋಷಿಸಿದರು. ಇದರ ಪರಿಣಾಮವಾಗಿ ಪರಿಮಾಣಾತ್ಮಕ ಸಂಶೋಧನಾ ವಿಧಾನಗಳ ಬಳಕೆಗೆ ಸೂಕ್ತವಾದ ಕ್ಷೇತ್ರಗಳಲ್ಲಿ ಅಧ್ಯಯನಗಳು ವ್ಯಾಪಕವಾಗಿ ಹೆಚ್ಚಿದವು. ಉದಾಹರಣೆಗೆ, ಮತದಾನ ವರ್ತನೆ, ಶಾಸಕರುಗಳ ವರ್ತನೆ, ಮುನಿಸಿಪಾಲ್ ರಾಜಕಾರಿಣಿಗಳು ಹಾಗೂ ಲಾಬಿ ಮಾಡುವವರ ವರ್ತನೆಗಳ ಅಧ್ಯಯನಗಳು ಸಾಧ್ಯವಾದವು. ಅಂತಾರಾಷ್ಟ್ರೀಯ ಸಂಬಂಧಗಳ ವಸ್ತುನಿಷ್ಠ 'ಕಾನೂನು'ಗಳನ್ನು ಅಭಿವೃದ್ಧಿಪಡಿಸುವ ಆಶಯದಿಂದ ಅಂತಾರಾಷ್ಟ್ರೀಯ ಸಂಬಂಧಗಳ (IR) ಅಧ್ಯಯನಕ್ಕೂ ವರ್ತನಾವಾದವನ್ನು ಅನ್ವಯಿಸುವ ಪ್ರಯತ್ನಗಳು ಸಹ ನಡೆದವು.

1960ರ ದಶಕದ ನಂತರ ವರ್ತನಾವಾದದ ಕುರಿತಾದ ಅಧ್ಯಯನಗಳ ಮೇಲೆ ವಿಚಿತ್ರ ಒತ್ತಡ ಸೃಷ್ಟಿಯಾಯಿತು. ಮೊದಲಿಗೆ, ವರ್ತನಾವಾದವು ರಾಜಕೀಯ ವಿಶ್ಲೇಷಣೆಯ ವ್ಯಾಪ್ತಿಯನ್ನು ಗಮನಾರ್ಹ ರೀತಿಯಲ್ಲಿ ನಿರ್ಬಂಧಿಸಿ ಅದು ಕೇವಲ ನೇರವಾಗಿ ಗಮನಿಸಬಹುದಾದಂತಹ ಗಮನಿಕೆಗಳಿಗೆ ಸೀಮಿತಗೊಳಿಸಿತು. ವರ್ತನಾ ವಿಶ್ಲೇಷಣೆಯು ಮತದಾನದ ಅಧ್ಯಯನದಂತಹ

ಕ್ಷೇತ್ರಗಳಿಗೆ ನಿಸ್ಸಂಶಯವಾಗಿ ಹಲವಾರು ಮಹತ್ವದ ಒಳನೋಟಗಳನ್ನು ನೀಡಿದೆ ಮತ್ತು ನೀಡುತ್ತಲಿದೆಯಾದರೂ ಪರಿಮಾಣಾತ್ಮಕ ದತಾಂಶಗಳ ಮೇಲಿನ ಅತಿಯಾದ ಮೋಹವು ರಾಜಕಾರಣದಂತಹ ಅಧ್ಯಯನ ಶಿಸ್ತನ್ನು ಸಂಕುಚಿತಗೊಳಿಸುವ ಅಪಾಯವೂ ಇದೆ. ಅದಕ್ಕಿಂತಲೂ ಆತಂಕದ ಸಂಗತಿ ಎಂದರೆ, ಇದು ರಾಜಕೀಯ ವಿಜ್ಞಾನಿಗಳ ಒಂದು ಇಡೀ ತಲೆಮಾರು ಪ್ರಮಾಣಕ ರಾಜಕೀಯ ಚಿಂತನೆಯ ಸಮಸ್ತ ಪರಂಪರೆಗೆ ಬೆನ್ನು ತೋರಿಸುವಂತೆ ಮಾಡಿತು. 'ಸ್ವಾತಂತ್ರ್ಯ', 'ಸಮಾನತೆ', 'ನ್ಯಾಯ', 'ಹಕ್ಕುಗಳು' ಮುಂತಾದವುಗಳು ಪ್ರಾಯೋಗಿಕವಾದ ಪರಿಶೀಲನೆಗೆ ಒಳಪಡುವ ಕಲ್ಪನೆಗಳಲ್ಲ ಎಂಬ ಕಾರಣಕ್ಕೆ ಅಂತಹ ಪರಿಕಲ್ಪನೆಗಳನ್ನು ಅರ್ಥಹೀನವೆಂದು ಸಾರಾಸಗಟಾಗಿ ತಿರಸ್ಕರಿಸಲಾಯಿತು. ಜಾನ್ ರಾಲ್ಸ್ (John Rawls) (ನೋಡಿ ಪುಟ. ೪೫) ಮತ್ತು ರಾಬರ್ಟ್ ನೋಜಿಕ್ (Robert Nozick) (ನೋಡಿ ಪುಟ. ೬೮) ರಂತಹ ಸಿದ್ಧಾಂತಿಗಳ ಬರವಣಿಗೆಗಳಲ್ಲಿ ಪ್ರತಿಬಿಂಬಿಸಿರುವಂತೆ, ೧೯೭೦ರಲ್ಲಿ ವರ್ತನಾವಾದದ ವಿಷಯದಲ್ಲಿ ಅತೃಪ್ತಿ ಮೂಡಿ, ಅದರ ಪರಿಣಾಮವಾಗಿ ಪ್ರಮಾಣಕ ಪ್ರಶ್ನೆಗಳ ಬಗ್ಗೆ ಆಸಕ್ತಿಯು ಮತ್ತೆ ಕಾಣಿಸಿಕೊಳ್ಳಲಾರಂಭಿಸಿತು.

ಅದಕ್ಕಿಂತಲೂ ಮಿಗಿಲಾಗಿ ವರ್ತನಾವಾದದ ವೈಜ್ಞಾನಿಕ ಅರ್ಹತೆಗಳನ್ನು ಪ್ರಶ್ನಿಸುವ ಪ್ರವೃತ್ತಿ ಬೆಳೆಯಿತು. ವರ್ತನಾವಾದ 'ನಿಷ್ಪಕ್ಷಪಾತ' ವಾದುದು, ಅಂದರೆ ಅದು ನೈತಿಕ ಅಥವಾ ಪ್ರಮಾಣಿತ ನಂಬಿಕೆಗಳಿಂದ ಕಲುಷಿತಗೊಂಡ ಕಲ್ಪನೆಯಲ್ಲ: ಈ ಆಧಾರದ ಮೇಲೆ ಈ ವಿಧಾನವನ್ನು ವಸ್ತುನಿಷ್ಠ, ವಿಶ್ವಾಸಾರ್ಹ ಎಂದು ಭಾವಿಸಲಾಗಿತ್ತು. ಆದಾಗ್ಯೂ, ವಿಶ್ಲೇಷಣೆಯು ಗಮನಕ್ಕೆ ನಿಲುಕುವ ವರ್ತನೆಗಷ್ಟೇ ಸೀಮಿತವಾದಲ್ಲಿ ಹಾಲಿ ಇರುವ ರಾಜಕೀಯ ವ್ಯವಸ್ಥೆಯನ್ನು ವಿವರಿಸುವುದಕ್ಕಿಂತ ಹೆಚ್ಚಿನ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಅಂದರೆ ಇಂತಹ ಪ್ರಯತ್ನಗಳು ಯಥಾಸ್ಥಿತಿಯನ್ನು ಸಹಮತಿಸಿದಂತಾಗುತ್ತದೆ ಅಷ್ಟೇ. ಈ ಯಥಾಸ್ಥಿತಿವಾದದ ಮೌಲ್ಯಕ್ಕೆ ಬದ್ಧವಾದ **ಪಕ್ಷಪಾತಿ** ನಿಲುವು 'ಪ್ರಜಾಪ್ರಭುತ್ವ'ವನ್ನು ಗಮನಿಸಬಹುದಾದ ವರ್ತನೆ ಎಂಬಂತೆ ಮರುವ್ಯಾಖ್ಯಾನಿಸುವುದರಲ್ಲಿ ವ್ಯಕ್ತವಾಯಿತು. ಪ್ರಜಾಪ್ರಭುತ್ವಕ್ಕೆ 'ಜನಪ್ರಿಯ ಸ್ವಯಮಾಡಳಿತ' (ಅಕ್ಷರಶಃ ಜನರಿಂದ ನಡೆಯುವ ಸರ್ಕಾರ) ಎಂಬ ಅರ್ಥಕ್ಕೆ ಬದಲಾಗಿ ಜನಪ್ರಿಯ ಮತದಾನ ಪ್ರಕ್ರಿಯೆಯ ಮೂಲಕ ಅಧಿಕಾರವನ್ನು ಪಡೆಯಲು ಪರಸ್ಪರ ವಿರೋಧಿಗಳಾದ ಪ್ರಮುಖ ವ್ಯಕ್ತಿಗಳ ನಡುವೆ ನಡೆಯುವ ಒಂದು ಘರ್ಷಣೆ ಎಂಬ ಅರ್ಥ ಬಂದಿತು. ಸರಳವಾಗಿ ಹೇಳುವುದಾದರೆ ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ದೇಶಗಳ ತಥಾಕಥಿತ ಪ್ರಜಾಪ್ರಭುತ್ವೀಯ ರಾಜಕೀಯ ವ್ಯವಸ್ಥೆಯಲ್ಲಿ ನಡೆಯುವುದೇ ಪ್ರಜಾಪ್ರಭುತ್ವ ಎಂಬ ಅರ್ಥ ಬಂದಿತು.

## ವೈಚಾರಿಕ ಆಯ್ಕೆ ಸಿದ್ಧಾಂತ

ರಾಜಕಾರಣದ ಕುರಿತು ಇತ್ತೀಚಿನ ಸೈದ್ಧಾಂತಿಕ ಅಧ್ಯಯನ ವಿಧಾನಗಳ ಪೈಕಿ 'ಔಪಚಾರಿಕ ರಾಜಕೀಯ ಸಿದ್ಧಾಂತ' ಮುಖ್ಯವಾದುದು. ಇದನ್ನು 'ವೈಚಾರಿಕ ಆಯ್ಕೆ ಸಿದ್ಧಾಂತ', 'ಸಾರ್ವಜನಿಕ ಆಯ್ಕೆ ಸಿದ್ಧಾಂತ' (ನೋಡಿ ಪುಟ. 252), 'ರಾಜಕೀಯ ಆರ್ಥಿಕತೆ' (ನೋಡಿ ಪುಟ. 129) ಎಂದೂ ಕರೆಯಲಾಗುತ್ತದೆ. ಈ ವಿಶ್ಲೇಷಣಾ ವಿಧಾನವು ಕಾರ್ಯವಿಧಾನದ ನಿಯಮಗಳನ್ನು ಆಧರಿಸಿದ, ಸಾಮಾನ್ಯವಾಗಿ ಅದರಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ವಿವೇಚನಾಯುಕ್ತವಾದ ಸ್ವಹಿತಾಸಕ್ತಿಯ ವರ್ತನೆಯನ್ನು ಆಧರಿಸಿದ ಮಾದರಿಗಳನ್ನು ಕಟ್ಟುವ ಆರ್ಥಿಕ ಸಿದ್ಧಾಂತದ ಉದಾಹರಣೆಯಿಂದ ಬಹಳಷ್ಟು ಪ್ರಭಾವಿತವಾಗಿದೆ. ಈ ವಿಶ್ಲೇಷಣಾ ವಿಧಾನವು ಅಮೆರಿಕಾದಲ್ಲಿ ದೃಢವಾಗಿ ಸ್ಥಾಪನೆಗೊಂಡಿದ್ದು, ಇದು ವರ್ಜೀನ್ಯಾ ಚಿಂತನಾಕ್ರಮಕ್ಕೆ ಸೇರಿದ ವಿಧಾನವಾಗಿದೆ. ಇದೊಂದು ಔಪಚಾರಿಕ ರಾಜಕೀಯ ಸಿದ್ಧಾಂತವಾಗಿದ್ದು ಉಪಯುಕ್ತವಾದ ವಿಶ್ಲೇಷಣಾ ಪರಿಕರಗಳನ್ನು ಒದಗಿಸುತ್ತದೆ. ಇದು ಒದಗಿಸುವ ಪರಿಕರಗಳ ನೆರವಿನಿಂದ ಮತದಾರರ, ಲಾಬಿ ಮಾಡುವವರ, ಅಧಿಕಾರಶಾಹಿಯ, ರಾಜಕಾರಿಣಿಗಳ ಮತ್ತು ಅಂತಾರಾಷ್ಟ್ರೀಯ ವ್ಯವಸ್ಥೆಯೊಳಗಿನ ರಾಷ್ಟ್ರ ಪ್ರಭುತ್ವಗಳ ವರ್ತನೆಯ ವಿಷಯದಲ್ಲಿ ಹಲವು ಒಳನೋಟಗಳನ್ನು ನೀಡುತ್ತದೆ. 'ಸಾಂಸ್ಥಿಕ ಸಾರ್ವಜನಿಕ ಆಯ್ಕೆ ಸಿದ್ಧಾಂತ' ಎಂದು ಕರೆಯಲಾಗುವ ಈ ವಿಧಾನವು ರಾಜಕೀಯ ವಿಶ್ಲೇಷಣೆಯ ಮೇಲೆ ಅಗಾಧ ಪರಿಣಾಮ ಉಂಟು ಮಾಡಿತು. ಆಂಥೊನಿ ಡೌನ್ಸ್ (Anthony Downs) (1957), ಮ್ಯಾನ್ಸರ್ ಓಲ್ಸನ್ (Mancur Olson) (1968), ವಿಲಿಯಂ ನಿಸ್ಕ್ಯಾನೆನ್ (William Niskanen) (1971) ಮುಂತಾದ ಲೇಖಕರು ಪಕ್ಷ ಪೈಪೋಟಿ, ಆಸಕ್ತಿ ಗುಂಪಿನ ವರ್ತನೆ, ನೀತಿ ರೂಪಿಸುವುದರ ಮೇಲೆ ಅಧಿಕಾರಶಾಹಿಯ ಪ್ರಭಾವ ಮುಂತಾದ ವಿಷಯಗಳ ವಿಶ್ಲೇಷಣೆಗೆ ಇಂತಹ ವಿಧಾನಗಳನ್ನು ಬಳಸಿಕೊಂಡಿರುವುದನ್ನು ಗುರುತಿಸಬಹುದಾಗಿದ್ದು ಇದನ್ನು ನಂತರದ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಗೇಮ್ ಥಿಯರಿ ರೂಪದಲ್ಲಿಯೂ ಸಹ ಈ ವಿಧಾನವನ್ನು ಅನ್ವಯಿಸಲಾಗಿದ್ದು ಇದನ್ನು ಅರ್ಥಶಾಸ್ತ್ರಕ್ಕಿಂತಲೂ ಗಣಿತಶಾಸ್ತ್ರ ತತ್ವಗಳ ಆಧಾರದ ಮೇಲೆ ಹೆಚ್ಚು ಅಭಿವೃದ್ಧಿಪಡಿಸಲಾಗಿದೆ. ಇದು ವ್ಯಕ್ತಿಗಳ ವರ್ತನೆಗೆ ಕುರಿತಾದ ಒಗಟುಗಳ ವಿಶ್ಲೇಷಣೆಯ ಮೊದಲ ತತ್ವಗಳ ಬಳಕೆಯನ್ನು ಒಳಗೊಳ್ಳುತ್ತದೆ. 'ಬಂದಿಗಳ ಉಭಯಸಂಕಟ' (prisoners' dilemma) (ನೋಡಿ ಚಿತ್ರ 1.5) ಗೇಮ್ ಥಿಯರಿಯ ಅತ್ಯುತ್ತಮ ಉದಾಹರಣೆಯಾಗಿದೆ. ಅಂತಾರಾಷ್ಟ್ರೀಯ ಸಂಬಂಧಗಳ ಸಿದ್ಧಾಂತಿಗಳು ರಾಷ್ಟ್ರ ಪ್ರಭುತ್ವಗಳಿಗೆ ಕಷ್ಟವಾಗುವ ವಿಷಯಗಳನ್ನು, ಉದಾಹರಣೆಗೆ, ಸಮುದ್ರದಲ್ಲಿ ವಿಪರೀತ ಮೀನುಗಾರಿಕೆ ಮಾಡದಂತೆ ತಡೆಯುವುದು ಅಥವಾ ಅನಪೇಕ್ಷಿತ ಆಳ್ವಿಕೆಗೆ ಶಸ್ತ್ರಾಸ್ತ್ರಗಳ ಮಾರಾಟದ ಪ್ರಮಾಣವನ್ನು ತಡೆಯುವುದು ಮುಂತಾದ ವಿಷಯಗಳನ್ನು ವಿವರಿಸಲು ಗೇಮ್ ಥಿಯರಿ ಸಿದ್ಧಾಂತವನ್ನು ಬಳಸುತ್ತಾರೆ.

ರಾಜಕೀಯ ವಿಶ್ಲೇಷಣೆಗೆ ವೈಚಾರಿಕ ಆಯ್ಕೆ ವಿಧಾನವು ಯಾವ ರೀತಿಯಲ್ಲಿಯೂ ಸಾರ್ವತ್ರಿಕ ಸಮ್ಮತಿಯನ್ನು ಪಡೆದ ವಿಧಾನ ಎನಿಸಿಲ್ಲ. ಇದನ್ನು ಬೆಂಬಲಿಸುವವರು ರಾಜಕೀಯ ವಿದ್ಯಮಾನದ ಬಗ್ಗೆ ಚರ್ಚೆಯನ್ನು ಇದು ತೀಕ್ಷ್ಣಗೊಳಿಸುತ್ತದೆ  ಎಂದು ಹೇಳಿಕೊಳ್ಳುವರಾದರೂ ಇದರ ವಿಮರ್ಶಕರು ಇದರ ಮೂಲಭೂತ ಗೃಹೀತಗಳನ್ನೇ ಪ್ರಶ್ನಿಸುತ್ತಾರೆ. ಉದಾಹರಣೆಗೆ, ಇದು ಮನುಷ್ಯನ ವೈಚಾರಿಕ ಶಕ್ತಿಯ ಮೇಲೆ ಅತಿಯಾದ ಭರವಸೆ ಇಟ್ಟುಕೊಂಡಿರುವುದರ ಕಾರಣ ಜನರು ಅವರ ಗುರಿಗಳ ಆದ್ಯತೆ ಕುರಿತು ಸ್ಪಷ್ಟ ನಿಲುವು ಹೊಂದಿರುವುದಿಲ್ಲ ಮತ್ತು ಎಷ್ಟೋ ಸಲ ಪರಿಪೂರ್ಣವಾದ, ಸುಸ್ಪಷ್ಟವಾದ ತಿಳಿವಳಿಕೆಯೊಂದಿಗೆ ನಿರ್ಧಾರಗಳನ್ನು ತೆಗೆದುಕೊಂಡಿರುವುದೇ ಇಲ್ಲ ಎನ್ನುವ ಸಂಗತಿಯನ್ನು ನಿರ್ಲಕ್ಷಿಸುತ್ತದೆ. ಅಲ್ಲದೇ, ವೈಚಾರಿಕ ಆಯ್ಕೆ ಸಿದ್ಧಾಂತವು ವ್ಯಕ್ತಿಗಳ ಒಂದು ಅಸ್ಪಷ್ಟ ಮಾದರಿಯ ಕಲ್ಪನೆಯ ಆಧಾರದ ಮೇಲೆ ನಿಂತಿರುವುದರಿಂದ, ಇತರ ವಿಷಯಗಳನ್ನೂ ಒಳಗೊಂಡಂತೆ, ಮನುಷ್ಯನ ಸ್ವಹಿತಾಸಕ್ತಿಯು ಅವನ ಸಹಜ ಸ್ವಭಾವ ಮಾತ್ರವಾಗಿರದೆ ಸಾಮಾಜಿಕವಾಗಿ ರೂಢಿಯಾಗಿದ್ದಾಗಿರಬಹುದು ಎಂಬುದನ್ನು ಗುರುತಿಸುವಲ್ಲಿ ವಿಫಲವಾಗುವುದರಿಂದ ಅದು ಸಾಮಾಜಿಕ ಮತ್ತು ಚಾರಿತ್ರಿಕ ಅಂಶಗಳ ಕಡೆಗೆ ಸಾಕಷ್ಟು ಗಮನ ಹರಿಸುವುದಿಲ್ಲ.

### ಸಾಂಸ್ಥಿಕ ಅಧ್ಯಯನದ ನವ ವಿಧಾನ

1950ರವರೆಗೂ ರಾಜಕೀಯ ಅಧ್ಯಯನವೆಂದರೆ **ಸಂಸ್ಥೆಗಳ** ಅಧ್ಯಯನವೇ ಎಂದು ಭಾವಿಸಲಾಗಿತ್ತು. ಈ ‘ಪಾರಂಪರಿಕ’ ಅಥವಾ ‘ಹಳೆ’ಯ ಸಾಂಸ್ಥಿಕ ಅಧ್ಯಯನದ ವಿಧಾನವು ನಿಯಮಗಳು, ಕಾರ್ಯವಿಧಾನಗಳು, ಸರ್ಕಾರದ ಔಪಚಾರಿಕ ಸಂಘಟನೆ ಮುಂತಾದವುಗಳ ಮೇಲೆ ಕೇಂದ್ರೀಕೃತವಾಗಿತ್ತು ಮತ್ತು ಕಾನೂನು ಹಾಗೂ ಇತಿಹಾಸದ ಅಧ್ಯಯನದಲ್ಲಿ ಬಳಸುವ ವಿಧಾನಗಳನ್ನೇ ಅನುಸರಿಸುತ್ತಿತ್ತು. ‘ವರ್ತನಾವಾದ ಕ್ರಾಂತಿ’ಯ ಬರುವಿಕೆಯೊಂದಿಗೆ ಸಾಂಸ್ಥಿಕ ಅಧ್ಯಯನದ ವಿಧಾನವು ಮೂಲಭೂತವಾಗಿ ಪರ್ಯಾಲೋಚನೆ ಇಲ್ಲದ ವಿವರಣಾತ್ಮಕ ವಿಧಾನವಾಗಿದೆ (ಎಷ್ಟೋ ಸಲ ರಾಜಕಾರಣವನ್ನು ಸಂಘಟನಾತ್ಮಕ ನಿಯಮ ಹಾಗೂ ರಚನೆಗಳ ಸಂಗ್ರಹದ ಮಟ್ಟಕ್ಕೆ ಇಳಿಸುತ್ತಿತ್ತು) ಎನ್ನುವ ಕಾಳಜಿಗಳಿಂದಾಗಿ 1960 ಹಾಗೂ 1970ರ ದಶಕದಲ್ಲಿ ಅದು ನಿರ್ಲಕ್ಷ್ಯಕ್ಕೆ ಒಳಗಾಯಿತು. ಆದರೂ 1980ರ ದಶಕದಿಂದಾಚೆಗೆ ‘ಸಾಂಸ್ಥಿಕ ಅಧ್ಯಯನದ ನವ ವಿಧಾನ’ದ ಹುಟ್ಟಿನೊಂದಿಗೆ ಇದರ ಮೇಲಿನ ಆಸಕ್ತಿ ಮರುಕಳಿಸಿತು. ‘ಸಂಸ್ಥೆಗಳು ಎಂದಿಗೂ ಮುಖ್ಯವಾದುದು’ ಎಂಬ ಮೂಲ ಸಾಂಸ್ಥಿಕ ನಂಬಿಕೆಗೆ ಬದ್ಧವಾಗಿ ಇದ್ದುಕೊಂಡೇ, ಅಂದರೆ ರಾಜಕೀಯ ರಚನೆಗಳು ರಾಜಕೀಯ ವರ್ತನೆಯನ್ನು ರೂಪಿಸುತ್ತವೆ ಎಂಬ ಚಿಂತನೆಯೊಂದಿಗೆ, ಈ ನವ ವಿಧಾನವು ಒಂದು ‘ಸಂಸ್ಥೆ’ ಹೇಗೆ ರಚನೆಯಾಗುತ್ತದೆ, ಅಂದರೆ ಏನನ್ನು ಒಳಗೊಳ್ಳುತ್ತದೆ ಎಂಬ ಕುರಿತಾದ ನಮ್ಮ ತಿಳಿವಳಿಕೆಯನ್ನು ಹಲವು ರೀತಿಗಳಲ್ಲಿ ಪರಿಷ್ಕರಿಸಿತು.

ರಾಜಕೀಯ ಸಂಸ್ಥೆಗಳು ಬೇರೆ ಮತ್ತು ರಾಜಕೀಯ ಸಂಘಟನೆಗಳು ಬೇರೆ; ವ್ಯಕ್ತಿಗಳ ವರ್ತನೆಯನ್ನು ನಿರ್ಬಂಧಿಸುವ ಅಥವಾ ವರ್ತನೆಗೆ ಮಾರ್ಗದರ್ಶನ ಮಾಡುವ ಅವನ್ನು 'ವಸ್ತು'ಗಳನ್ನಾಗಿ ಅಲ್ಲದೆ, 'ನಿಯಮಾವಳಿ'ಗಳನ್ನಾಗಿ ಪರಿಭಾವಿಸಲಾಯಿತು. ಈ ನಿಯಮಗಳು ಔಪಚಾರಿಕವಾಗಿರುವಂತೆ ಅನೌಪಚಾರಿಕವಾಗಿರುವ ಸಾಧ್ಯತೆ ಇದೆ. ನೀತಿ ನಿರ್ಮಾಣ ಪ್ರಕ್ರಿಯೆಯನ್ನು ಔಪಚಾರಿಕ ವ್ಯವಸ್ಥೆಗಳ ಬದಲಿಗೆ, ಕೆಲವೊಮ್ಮೆ ಅಲಿಖಿತ ಶಿಷ್ಟಾಚಾರಗಳ ಮೂಲಕ ಅಥವಾ ಸಹಜ ತಿಳಿವಳಿಕೆಯ ಮೂಲಕ ರೂಪಿಸಲಾಗುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಸಂಸ್ಥೆಗಳನ್ನು ಸುಧಾರಿಸುವುದು, ಪರಿವರ್ತಿಸುವುದು ಅಥವಾ ಅದರ ಬದಲಿಗೆ ಮತ್ತೊಂದನ್ನು ರೂಪಿಸುವುದು ಏಕೆ ಕಷ್ಟವಾಗುತ್ತದೆ ಎಂಬುದನ್ನು ವಿವರಿಸುವಲ್ಲಿ ಇದು ನಮಗೆ ನೆರವಾಗಬಹುದು. ಅಂತಿಮವಾಗಿ ಸಂಸ್ಥೆಗಳನ್ನು, ಅವು ಕಾಲ ದೇಶಗಳನ್ನು ಮೀರಿ ಇರುತ್ತವೆ ಎಂಬಂತೆ, ಅವು ಸ್ವತಂತ್ರವಾದವುಗಳು ಎಂಬಂತೆ ಪರಿಭಾವಿಸದೇ ಅವು ಒಂದು ನಿರ್ದಿಷ್ಟ ಪ್ರಮಾಣಕ ಹಾಗೂ ಐತಿಹಾಸಿಕ ಸಂದರ್ಭದಲ್ಲಿ 'ನೆಲೆಗೊಂಡಿರುತ್ತದೆ' ಎಂದು ಈ ಹೊಸ ವಿಧಾನವನ್ನು ಪ್ರಸ್ತಾಪಿಸಿದ ಸಿದ್ಧಾಂತಿಗಳು ವಾದಿಸುತ್ತಾರೆ. ಒಂದು ಸಂಸ್ಥೆಯೊಳಗಿನ ಸದಸ್ಯರು ಕೆಲವು ಮೂಲ ನಿಯಮಗಳು ಹಾಗೂ ಪ್ರಕ್ರಿಯೆಗಳನ್ನು ಒಪ್ಪಿಕೊಳ್ಳಲು ಸಾಮಾಜೀಕರಣಗೊಂಡಂತೆ ಒಂದು ಸಂಸ್ಥೆಯೂ ಸಹ ಇನ್ನೂ ಹೆಚ್ಚಾದ ಮತ್ತು ಮೂಲಭೂತವಾದ ಕೆಲವು ಗೃಹೀತಗಳು ಹಾಗೂ ಅಭ್ಯಾಸಗಳ ಒಳಗೆ ಕಾರ್ಯಾಚರಣೆ ಮಾಡುತ್ತದೆ. ಇಷ್ಟೆಲ್ಲ ಸುಧಾರಣೆಗಳಾಗಿದ್ದಾಗ್ಯೂ ಸಾಂಸ್ಥಿಕ ಅಧ್ಯಯನವು ಹಲವು ಟೀಕೆಗಳನ್ನು ಎದುರಿಸಿವೆ. ಉದಾಹರಣೆಗೆ, ಇದು ರಚನಾತ್ಮಕ ತರ್ಕವನ್ನು ಒಪ್ಪುತ್ತದೆ ಎಂಬ ಆರೋಪ ಎದುರಿಸುತ್ತದೆ. ಅಂದರೆ ಹೆಚ್ಚು ಕಡಮೆ ರಾಜಕಾರಣಿಗಳನ್ನು ಅವರು ಕಾರ್ಯಾಚರಣೆ ನಡೆಸುವ ಸಾಂಸ್ಥಿಕ ಸಂದರ್ಭದ 'ಬಂದಿಗಳ' ಹಾಗೆ ಪರಿಗಣಿಸುತ್ತದೆ.

**ವಿಮರ್ಶಾತ್ಮಕ ವಿಧಾನಗಳು**

1980ರ ದಶಕದ ನಂತರ ರಾಜಕೀಯಕ್ಕೆ ಸಂಬಂಧಿಸಿದ ವಿಮರ್ಶಾತ್ಮಕ ವಿಧಾನಗಳು ಸಾಕಷ್ಟು ವಿಸ್ತಾರವಾಗಿ ಹರಡಿದೆ. ಅಲ್ಲಿಯವರೆಗೂ ಮಾರ್ಕ್ಸ್‌ವಾದ ಮುಖ್ಯವಾಹಿನಿಯ ರಾಜಕೀಯ ವಿಜ್ಞಾನಕ್ಕೆ ಒಂದು ಮುಖ್ಯವಾದ ಪರ್ಯಾಯವಾಗಿತ್ತು. ಹಾಗೆ ನೋಡಿದರೆ ಕಾರ್ಲ್ ಮಾರ್ಕ್ಸ್‌ನನ್ನು ರಾಜಕಾರಣವನ್ನು ವೈಜ್ಞಾನಿಕ ರೀತಿಯಲ್ಲಿ ವಿವರಿಸಲು ಪ್ರಯತ್ನಿಸಿದ ಮೊತ್ತಮೊದಲ ಸಿದ್ಧಾಂತಿ ಎನ್ನಬಹುದು. ತನ್ನ ತಥಾಕಥಿತ 'ಇತಿಹಾಸದ ಭೌತವಾದೀ ಪರಿಕಲ್ಪನೆ'ಯನ್ನು (ನೋಡಿ ಪುಟ. 40–1) ಬಳಸಿ ಐತಿಹಾಸಿಕ ಬೆಳವಣಿಗೆಯ ಹಿಂದಿನ ಶಕ್ತಿಯನ್ನು ಬಯಲು ಮಾಡಲು ಪ್ರಯತ್ನಿಸಿದ. ಇದರಿಂದಾಗಿ ಪ್ರಾಕೃತಿಕ ವಿಜ್ಞಾನದಲ್ಲಿ ನಿಯಮಗಳನ್ನು ಪುರಾವೆಗಳಂತೆ ಬಳಸುವ ಹಾಗೆ ಅವನಿಗೂ ಸಹ 'ನಿಯಮಗಳ' ಆಧಾರದ ಮೇಲೆ ಭವಿಷ್ಯವಾಣಿ ನುಡಿಯಲು ಸಾಧ್ಯವಾಯಿತು. ಅದೇನೇ ಇರಲಿ ಹೊಸ ವಿಮರ್ಶಾತ್ಮಕ ದೃಷ್ಟಿಕೋನಗಳಿಂದಾಗಿ ಆಧುನಿಕ ರಾಜಕೀಯ ವಿಶ್ಲೇಷಣೆ ಇನ್ನೂ ಸಮೃದ್ಧವಾಗಿದೆ, ವೈವಿಧ್ಯಮಯವಾಗಿ ಬೆಳೆದಿದೆ. ಸ್ತ್ರೀವಾದ (ನೋಡಿ ಪುಟ. 49–50), ವಿಮರ್ಶಾತ್ಮಕ

ಸಿದ್ಧಾಂತ, ಹಸಿರು ರಾಜಕಾರಣ (ನೋಡಿ ಪುಟ. 50–1), ರಾಚನಿಕವಾದ(constructivism), ರಾಚನಿಕೋತ್ತರವಾದ (post-structuralism), ವಸಾಹತೋತ್ತರವಾದ(postcolonialism) (ನೋಡಿ ಪುಟ. 52) ಮುಂತಾದವುಗಳನ್ನು ಪ್ರಮುಖ ಉದಾಹರಣೆಗಳನ್ನಾಗಿ ಹೆಸರಿಸಬಹುದು. ಈ ಹೊಸ ವಿಮರ್ಶಾತ್ಮಕ ಧ್ವನಿಗಳಲ್ಲಿನ ಸಾಮಾನ್ಯ ಅಂಶ ಯಾವುದು? ಯಾವ ಅರ್ಥದಲ್ಲಿ ಈ ಹೊಸ ಧ್ವನಿಗಳು 'ವಿಮರ್ಶಾತ್ಮಕ' ಎನಿಸಿಕೊಳ್ಳಬಲ್ಲವು? ಅವುಗಳ ವೈವಿಧ್ಯಮಯ ತಾತ್ವಿಕ ನೆಲೆಗಳು ಮತ್ತು ಭಿನ್ನ ರಾಜಕೀಯ ದೃಷ್ಟಿಕೋನಗಳ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ಮುಖ್ಯಧಾರೆಯ ಚಿಂತನೆಯ ಬಗ್ಗೆ ಅವುಗಳಿಗಿರುವ ವೈರುಧ್ಯವೇ ಅವುಗಳನ್ನು ಒಂದಾಗಿಸುವ ಸಾಮಾನ್ಯ ಅಂಶ ಎಂದು ವಾದಿಸಬಹುದು.

ಅಲ್ಲದೇ, ಇವು ಎರಡು ವಿಸ್ತಾರವಾದ ಹಾಗೂ ಕೆಲವೊಮ್ಮೆ ಸಂಬಂಧಿತವಾದ ಗುಣಲಕ್ಷಣಗಳನ್ನು ಹೊಂದಿವೆ. ಮೊದಲನೆಯದಾಗಿ, ಅವು ತಮ್ಮದೇ ಭಿನ್ನ ರೀತಿಯಲ್ಲಿ 'ವಿಮರ್ಶಾತ್ಮಕ'ವಾದವು, (ಸಾಮಾನ್ಯವಾಗಿ) ಅವು ತುಳಿತಕ್ಕೊಳಗಾದ ಅಥವಾ ಅಂಚಿಗೆ ನೂಕಲ್ಪಟ್ಟ ಸಮುದಾಯದ ಹಿತಾಸಕ್ತಿಯ ಬಗ್ಗೆ ಕಾಳಜಿ ಇರಿಸಿಕೊಂಡು ರಾಜಕೀಯದ ಯಥಾಸ್ಥಿತಿಯನ್ನು ಪ್ರಶ್ನಿಸಲು ಪ್ರಯತ್ನಿಸುವಂತಹವು. ಇವುಗಳ ಪೈಕಿ ಪ್ರತಿಯೊಂದೂ ಮುಖ್ಯವಾಹಿನಿಯ ವಿಧಾನಗಳು ನಿರ್ಲಕ್ಷಿಸುವ ಅಸಮಾನತೆ, ಅಸಮತೋಲನಗಳನ್ನು ಬಯಲು ಮಾಡಲು ಪ್ರಯತ್ನಿಸುವಂತಹವು. ಉದಾಹರಣೆಗೆ, ಸ್ತ್ರೀವಾದ ಪ್ರಚಲಿತವಾದ ವ್ಯವಸ್ಥಿತ ರಚನೆಯಲ್ಲಿನ ಎಲ್ಲ ರೂಪದ, ಎಲ್ಲಾ ಹಂತದ ಲಿಂಗ ಅಸಮಾನತೆಯ ರಾಜಕಾರಣದತ್ತ ಗಮನ ಸೆಳೆಯುತ್ತದೆ. ಫ್ರಾಂಕ್‌ಫರ್ಟ್ ಚಿಂತನಾಗುಂಪಿನ ನವಮಾರ್ಕ್ಸ್‌ವಾದದಲ್ಲಿ (ನೋಡಿ ಪುಟ. 64) ನೆಲೆಗೊಂಡಿರುವ ವಿಮರ್ಶಾತ್ಮಕ ಸಿದ್ಧಾಂತವು ಫ್ರಾಯ್ಡ್ ಮತ್ತು ವೆಬರ್ (ನೋಡಿ ಪುಟ. 82) ರನ್ನೂ ಒಳಗೊಂಡಂತೆ ಇತರ ವೈವಿಧ್ಯಮಯವಾದ ಸೈದ್ಧಾಂತಿಕ ಪ್ರಭಾವಗಳನ್ನೂ ಬಳಸಿ ಈ ವಿಮರ್ಶಾತ್ಮಕ ಪರಿಕಲ್ಪನೆಯನ್ನು ಎಲ್ಲಾ ಸಾಮಾಜಿಕ ಅಭ್ಯಾಸಗಳಿಗೂ ಅನ್ವಯಿಸಿದೆ. ಇನ್ನು ಹಸಿರು ರಾಜಕಾರಣ ಅಥವಾ ಪರಿಸರವಾದ (ನೋಡಿ ಪುಟ. 51) ಮಾನವಕೇಂದ್ರಿತ ರಾಜಕೀಯ ಹಾಗೂ ಸಾಮಾಜಿಕ ಸಿದ್ಧಾಂತಗಳನ್ನು ಪ್ರಶ್ನಿಸುತ್ತದಲ್ಲದೆ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಯನ್ನು ಅರ್ಥೈಸಿಕೊಳ್ಳಬಲ್ಲ ಸಮಗ್ರ ವಿಧಾನವನ್ನು ಮುಂದಿಡುತ್ತದೆ. ವಸಾಹತೋತ್ತರವಾದವು ವಸಾಹತುಶಾಹೀ ಆಡಳಿತದ ಸಾಂಸ್ಕೃತಿಕ ಆಯಾಮವನ್ನು ಪರಿಶೀಲಿಸಿ ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನ ಎಲ್ಲೆಡೆಯಲ್ಲಿಯೂ ಔಪಚಾರಿಕವಾಗಿ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದೆಯಾದರೂ ಪಾಶ್ಚಿಮಾತ್ಯ ಸಾಂಸ್ಕೃತಿಕ ಹಾಗೂ ರಾಜಕೀಯ ಯಾಜಮಾನ್ಯ (ನೋಡಿ ಪುಟ. 174) ಹೇಗೆ ಉಳಿದೆಲ್ಲ ಜಗತ್ತಿನ ಮೇಲೆ ಪ್ರಭಾವ ಬೀರುತ್ತಿದೆ ಎಂಬುದನ್ನು ಇದು ತೋರಿಸುತ್ತದೆ.

ರಾಜಕೀಯ ವಿಮರ್ಶಾತ್ಮಕ ವಿಧಾನದ ಎರಡನೆಯ ಗುಣಲಕ್ಷಣವೇನೆಂದರೆ, ಸಾಮಾಜಿಕ ನಡತೆಯ ಮೂಲಕ ರಾಜಕೀಯ ಜಗತ್ತನ್ನು ರೂಪಿಸುವ ಪ್ರಜ್ಞೆಯ ಪಾತ್ರಕ್ಕೆ ಪ್ರಾಮುಖ್ಯತೆ ನೀಡಿ ಅವು

ಮುಖ್ಯಧಾರೆಯ ರಾಜಕೀಯ ವಿಜ್ಞಾನದ ಪ್ರತ್ಯಕ್ಷೈಕವಾದದ ಆಚೆಗೆ (ವಿವಿಧ ರೀತಿ, ವಿವಿಧ ಪ್ರಮಾಣದಲ್ಲಾದರೂ ಸಹ) ಹೋಗಲು ಪ್ರಯತ್ನಿಸಿದವು. ಈ ತಥಾಕಥಿತ **'ಪ್ರತ್ಯ ಕ್ಷೈಕಪ್ರಮಾಣೊತ್ತರವಾದ (post-positivist)'** ವಿಧಾನಗಳು (ಕೆಲವೊಮ್ಮೆ ಇವುಗಳನ್ನು 'ಅರ್ಥವಿವರಣಾತ್ಮಕವಾದ (interpretivism)' ಅಥವಾ 'ಆಂಟಿ ಫೌಂಡೇಷನಲಿಸಂ(anti-foundationalism)' ಎಂದೂ ಕರೆಯಲಾಗುತ್ತದೆ) ಈ ಕಾರಣಕ್ಕಾಗಿ 'ವಿಮರ್ಶಾತ್ಮಕ'ವಾದುದು. ಇಲ್ಲಿ ಅವು ಮುಖ್ಯಧಾರೆಯ ವಿಧಾನದ ತೀರ್ಮಾನಗಳಲ್ಲಿನ ಸಮಸ್ಯೆಗಳನ್ನು ಪರಿಶೀಲಿಸುವುದಷ್ಟೇ ಅಲ್ಲ, ತಮ್ಮ ವಿಧಾನಗಳನ್ನೂ ಸತ್ವಪರೀಕ್ಷೆಗೆ ಒಳಪಡಿಸಿ ಅದರೊಳಗಿನ ಪೂರ್ವಗ್ರಹಗಳನ್ನು ಬಯಲು ಮಾಡಿ ಅದರ ಸೂಚ್ಯಪರಿಣಾಮಗಳನ್ನು ಪರಿಶೀಲಿಸುತ್ತವೆ. ಇದನ್ನು ನಿರ್ದಿಷ್ಟವಾಗಿ ರಾಚನಿಕವಾದ ಮತ್ತು ರಾಚನಿಕೋತ್ತರವಾದಲ್ಲಿ ಕಾಣಬಹುದಾಗಿದೆ. ರಾಚನಿಕವಾದವು ರಾಜಕೀಯ ವಿಜ್ಞಾನಕ್ಕಿಂತಲೂ ಮಿಗಿಲಾಗಿ ಅಂತಾರಾಷ್ಟ್ರೀಯ ಸಂಬಂಧಗಳ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ. ಇಂದು ಹಲವಾರು ಮಂದಿ ರಾಚನಿಕವಾದವನ್ನು ಮುಖ್ಯವಾಹಿನಿಯ ಅಂತಾರಾಷ್ಟ್ರೀಯ ಸಂಬಂಧಗಳ ಸಿದ್ಧಾಂತದಂತೆ ಪರಿಗಣಿಸುತ್ತಿದ್ದಾರೆ. ಅದೇನೇ ಇರಲಿ, ರಾಚನಿಕವಾದವು ಒಂದು ಸಂಪೂರ್ಣ ಸಿದ್ಧಾಂತವಾಗಿರದೆ ಕೇವಲ ಒಂದು ವಿಶ್ಲೇಷಣೆಯ ಸಾಧನವಾಗಿದೆ ಅಷ್ಟೇ. ಪ್ರಪಂಚವು ಒಂದು ರೀತಿಯ 'ಪರಸ್ಪರ–ವ್ಯಕ್ತಿನಿಷ್ಠ' ಅರಿವಿನಿಂದ ಕಾರ್ಯನಿರ್ವಹಿಸುತ್ತದೆ ಎಂದು ಸೂಚಿಸುವುದರ ಮೂಲಕ ಜನರೇ ತಾವು ಬದುಕುತ್ತಿರುವ ಪ್ರಪಂಚವನ್ನು 'ರಚಿಸುತ್ತಾರೆ' ಎಂದು ವಾದಿಸುವ ರಾಚನಿಕವಾದಿಗಳು ರಾಜಕಾರಣದ ವಿಶ್ಲೇಷಣೆಯು ವಸ್ತುನಿಷ್ಠವಾದುದು ಎಂಬ ಮುಖ್ಯಧಾರೆಯ ಹೇಳಿಕೆಗಳು ಪ್ರಶ್ನಾರ್ಹವೆಂದು ನಿರೂಪಿಸಿದ್ದಾರೆ. ಉದಾಹರಣೆಗೆ, ವ್ಯಕ್ತಿನಿಷ್ಠ ಅಸ್ತಿತ್ವಗಳಾಗಿ ರಾಜಕಾರಿಣಿಗಳಿಗೆ ಒಂದು ಖಚಿತವಾದ ಅಥವಾ ವಸ್ತುನಿಷ್ಠವಾದ ಆಸಕ್ತಿ ಅಥವಾ ಅಸ್ಮಿತೆ ಇರುವುದಿಲ್ಲ; ಬದಲಾಗಿ ಅವರ ಆಸಕ್ತಿ, ಅಸ್ಮಿತೆಗಳೆಲ್ಲವೂ ಎಲ್ಲಾ ಕಾಲಘಟ್ಟದಲ್ಲೂ ಪ್ರಚಲಿತವಾಗಿರುವ ಪರಂಪರೆ, ಮೌಲ್ಯಗಳು, ಭಾವನೆಗಳು ಮುಂತಾದವುಗಳ ಮೂಲಕ ರೂಪುಗೊಂಡಿದ್ದಾಗಿರುತ್ತವೆ (ಮರುರೂಪುಗೊಳಿಸಬಹುದಾಗಿರುತ್ತದೆ).

ರಾಚನಿಕೋತ್ತರವಾದದ ಜೊತೆಜೊತೆಗೆ ಆಧುನಿಕೋತ್ತರ ವಾದವೂ ಹುಟ್ಟಿಕೊಂಡಿತು (ನೋಡಿ ಪುಟ. 18), ಈ ಎರಡೂ ಪದಗಳನ್ನು ಒಂದಕ್ಕೆ ಬದಲಾಗಿ ಮತ್ತೊಂದನ್ನು ಬಳಸಬಹುದಾಗಿದೆ. ಎಲ್ಲಾ ಚಿಂತನೆಗಳು, ಪರಿಕಲ್ಪನೆಗಳು ಭಾಷೆಯ ಮೂಲಕ ವ್ಯಕ್ತವಾಗುತ್ತವೆ ಮತ್ತು ಭಾಷೆ ತಾನೇ ಸ್ವತಃ ಅಧಿಕಾರದ ಸಂಕೀರ್ಣ ಸಂಬಂಧಗಳಲ್ಲಿ ಸಿಕ್ಕಿಕೊಂಡಿವೆ ಎಂದು ರಾಚನಿಕೋತ್ತರ ವಾದವು ಒತ್ತಿಹೇಳುತ್ತದೆ. ವಿಶೇಷವಾಗಿ ಫ್ರೆಂಚ್ ತತ್ವಜ್ಞಾನಿ ಮತ್ತು ತೀವ್ರಗಾಮಿ ಚಿಂತಕ ಮಿಶೆಲ್ ಫುಕೋ (Michel Foucault) (1926–1984) ಅವರ ಬರಹಗಳಿಂದ ಪ್ರಭಾವಿತರಾದ ರಾಚನಿಕೋತ್ತರ ವಾದಿಗಳು **ಸಂಕಥನದ (discourse -** ಹಲವಾರು ವಿಷಯ, ವ್ಯಾಖ್ಯಾನ, ವಿಧಗಳಿಂದ ರೂಪಗೊಳ್ಳುವ ಜ್ಞಾನಮೀಮಾಂಸೆ) ಪರಿಕಲ್ಪನೆಯನ್ನು ಬಳಸುವ ಮೂಲಕ ಅಥವಾ 'ಅಧಿಕಾರದ

**Commented [C8]:** This is added to explain and add to the idea of the terminology - discourse

ಹಲವಾರು ಸಂಕಥನಗಳನ್ನು' ಬಳಸುವ ಮೂಲಕ ಅಧಿಕಾರ ಮತ್ತು ಚಿಂತನಾಕ್ರಮಗಳ ನಡುವಿರುವ ಸಂಬಂಧಕ್ಕೆ ಗಮನವನನ್ನು ಸೆಳೆಯುತ್ತಾರೆ. ಸರಳವಾಗಿ ಹೇಳುವುದಾದರೆ ಜ್ಞಾನವೇ ಅಧಿಕಾರ ಎಂಬುದನ್ನಿದು ಸೂಚಿಸುತ್ತದೆ. ಆದರೆ ಇದಕ್ಕೆ ಸಾರ್ವತ್ರಿಕ ಎನ್ನಬಹುದಾದ ಒಂದು ಚೌಕಟ್ಟಿಲ್ಲದಿರುವುದರಿಂದ ಅಥವಾ ವ್ಯಾಪಕವಾದಂತ ಒಂದು ದೃಷ್ಟಿಕೋನ ಇಲ್ಲದಿರುವುದರಿಂದ ಇಲ್ಲಿ ಹಲವಾರು ಪರಸ್ಪರ ವಿರೋಧಾತ್ಮಕ ದೃಷ್ಟಿಕೋನಗಳಿದ್ದು ಪ್ರತಿಯೊಂದು ದೃಷ್ಟಿಕೋನವೂ ಅಧಿಕಾರದ ಒಂದು ನಿರ್ದಿಷ್ಟ ಸಂಕಥನವನ್ನು ಪ್ರತಿನಿಧಿಸುತ್ತದೆ. ರಾಚನಿಕೋತ್ತರ ಹಾಗೂ ಆಧುನಿಕೋತ್ತರ ವಾದಗಳೆರಡೂ ನಿರುಪಾಧಿಕ ಮತ್ತು ಸಾರ್ವತ್ರಿಕ ಸತ್ಯ (foundationalism) ಇದೆ ಎಂಬುದನ್ನು ನಿರಾಕರಿಸುತ್ತವಾದರೂ ರಾಚನಿಕೋತ್ತರ ವಾದಿಗಳು **ನಿರಚನಾ (deconstruction)** ಪ್ರಕ್ರಿಯೆಯ ಮೂಲಕ ಒಂದು ನಿರ್ದಿಷ್ಟ ಪರಿಕಲ್ಪನೆ, ಸಿದ್ಧಾಂತ ಹಾಗೂ ಅರ್ಥವಿವರಣೆಗಳ ಹಿಂದಿರಬಹುದಾದ ಅರ್ಥಗಳನ್ನು ಬಯಲು ಮಾಡಬಹುದು ಎಂದು ವಾದಿಸುತ್ತಾರೆ.

| **ಗಮನಹರಿಸಿ . . . ಕೈದಿಗಳ ಬಿಕ್ಕಟ್ಟು** |
|---|
| ಜೈಲಿನ ಪ್ರತ್ಯೇಕ ಕೋಣೆಗಳಲ್ಲಿ ಬಂಧಿಸಲಾಗುವ ಇಬ್ಬರು ಕೈದಿಗಳಿಗೆ ಒಬ್ಬರ ಮೇಲೊಬ್ಬರು 'ಆರೋಪ ಮಾಡುವ' ಅಥವಾ 'ಆರೋಪ ಮಾಡದಿರುವ' ಅವಕಾಶ ನೀಡಲಾಗುತ್ತದೆ. ಒಬ್ಬಾತ ಆರೋಪಗಳನ್ನು ಒಪ್ಪಿಕೊಂಡು ಮತ್ತೊಬ್ಬನನ್ನು ಅಪರಾಧಿಯಾಗಿಸಲು ಅಗತ್ಯವಿರುವ ಸಾಕ್ಷ್ಯಾಧಾರಗಳನ್ನು ಒದಗಿಸಿದರೆ ಆತನನ್ನು ಆರೋಪಮುಕ್ತನನ್ನಾಗಿಸಿ ಬಿಡುಗಡೆ ಮಾಡಲಾಗುತ್ತದೆ, ಆರೋಪದ ಸಂಪೂರ್ಣ ಹೊಣೆಯನ್ನು ಆತನ ಸಂಗಡಿಗನಾದ ಮತ್ತೊಬ್ಬನ ಮೇಲೆ ಹೊರೆಸಲಾಗುವುದರಿಂದ ಆತ ಹತ್ತು ವರ್ಷಗಳ ಕಾಲ ಜೈಲಿನಲ್ಲಿ ಬಂಧಿಸಲಾಗುತ್ತಾನೆ. ಒಂದು ವೇಳೆ ಇಬ್ಬರೂ ತಪ್ಪೊಪ್ಪಿಕೊಂಡರೆ ಇಬ್ಬರನ್ನೂ ಆರು ವರ್ಷಗಳ ಕಾಲ ಬಂಧಿಸಲಾಗುತ್ತದೆ. ಒಂದು ವೇಳೆ ಇಬ್ಬರೂ ಆರೋಪ ತಪ್ಪೊಪ್ಪಿಗೆಯನ್ನು ನಿರಾಕರಿಸಿದರೆ ಅವರ ಅಪರಾಧ ಸಣ್ಣ ಪುಟ್ಟವು ಎಂದು ತೀರ್ಮಾನಿಸಿ ಇಬ್ಬರಿಗೂ ಒಂದೊಂದು ವರ್ಷ ಜೈಲುಶಿಕ್ಷೆ ನೀಡಲಾಗುತ್ತದೆ. ಚಿತ್ರ 1.3 ಕೈದಿಗಳಿಗೆ ಲಭ್ಯವಿರುವ ಆಯ್ಕೆಗಳನ್ನು ಮತ್ತು ಅವುಗಳ ಪರಿಣಾಮಗಳನ್ನು ಜೈಲುಶಿಕ್ಷೆ ಅನುಭವಿಸಬೇಕಾದ ಅವಧಿಯು ತೋರಿಸುತ್ತದೆ. ಇಂಥದೊಂದು ಉಭಯ ಸಂಕಟದ ಸನ್ನಿವೇಶದಲ್ಲಿ ಇಬ್ಬರೂ ಕೈದಿಗಳು ತಪ್ಪೊಪ್ಪಿಕೊಳ್ಳುವ ಸಾಧ್ಯತೆ ಇದೆ. ಏಕೆಂದರೆ ತಪ್ಪೊಪ್ಪಿಗೆ ನಿರಾಕರಿಸಿದಲ್ಲಿ ತನ್ನ ಸಂಗಡಿಗ ಆರೋಪವನ್ನು ರುಜುವಾತು ಮಾಡಬಹುದು ಮತ್ತು ಇಬ್ಬರೂ ಗರಿಷ್ಠ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂಬ ಭಯದಿಂದಾಗಿ ಈ ಸಾಧ್ಯತೆ ಇದೆ. ವಿಚಿತ್ರವೆಂದರೆ ವಿವೇಚನಾಯುಕ್ತ ನಡತೆಯಿಂದ ಕನಿಷ್ಠ ಅನುಕೂಲಕರ ಫಲಿತಾಂಶ (ಇಬ್ಬರೂ ಆರು ಆರು ವರ್ಷದಂತೆ ಒಟ್ಟಿಗೆ 12 ವರ್ಷಗಳ ಶಿಕ್ಷೆ ಅನುಭವಿಸುತ್ತಾರೆ) ಸಿಗುತ್ತದೆ ಎಂದು ಈ ಆಟ ತೋರಿಸಿಕೊಡುತ್ತದೆ. ಪರಿಣಾಮವಾಗಿ ಒಬ್ಬ ಮತ್ತೊಬ್ಬನನ್ನು ನಂಬಲು ಅಥವಾ ಸಹಕರಿಸಲು ವಿಫಲನಾದ ಕಾರಣ ಅವರಿಬ್ಬರು ಶಿಕ್ಷೆಗೆ ಒಳಗಾಗುತ್ತಾರೆ. ಆದಾಗ್ಯೂ, ಈ ಆಟವನ್ನು ಹಲವು ಬಾರಿ ಪುನರಾವರ್ತಿಸಿದಲ್ಲಿ ಸಹಕಾರದಿಂದ |

ಸ್ವಹಿತಾಸಕ್ತಿಯೂ ನೆರವೇರುತ್ತದೆ ಎಂದು ಕೈದಿಗಳು ಕಲಿಯಬಹುದು, ತತ್ಪರಿಣಾಮವಾಗಿ ಇಬ್ಬರೂ ತಪ್ಪೊಪ್ಪಿಗೆ ನಿರಾಕರಿಸುವುದನ್ನು ಪ್ರೋತ್ಸಾಹಿಸುತ್ತದೆ.

**Commented [C9]:** To please note that when enter key is pressed another box is formed. To re

| | | ಕೈದಿ B | |
|---|---|---|---|
| | | **ಒಪ್ಪಿಕೊಳ್ಳುತ್ತಾನೆ** | **ಒಪ್ಪಿಕೊಳ್ಳುವುದಿಲ್ಲ** |
| ಕೈದಿ A | **ಒಪ್ಪಿಕೊಳ್ಳುತ್ತಾನೆ** | **A:** 6 ವರ್ಷಗಳು **B:** 6 ವರ್ಷಗಳು | **A:** 0 ವರ್ಷಗಳು **B:** 10 ವರ್ಷಗಳು |
| | **ಒಪ್ಪಿಕೊಳ್ಳುವುದಿಲ್ಲ** | **A:** 10 ವರ್ಷಗಳು **B:** 0 ವರ್ಷಗಳು | **A:** 1 ವರ್ಷ **B:** 1 ವರ್ಷ |

ಚಿತ್ರ 1:3: ಕೈದಿಗಳ ಬಿಕ್ಕಟ್ಟಿನ ಆಯ್ಕೆಗಳು

### ಪರಿಕಲ್ಪನೆಗಳು, ಮಾದರಿಗಳು ಹಾಗೂ ಸಿದ್ಧಾಂತಗಳು

ಪರಿಕಲ್ಪನೆಗಳು, ಮಾದರಿಗಳು ಹಾಗೂ ಸಿದ್ಧಾಂತಗಳು ರಾಜಕೀಯ ವಿಶ್ಲೇಷಣೆಯ ಪರಿಕರಗಳಾಗಿವೆ. ಆದಾಗ್ಯೂ, ರಾಜಕಾರಣದಲ್ಲಿ ಉಳಿದೆಲ್ಲ ವಸ್ತುಗಳಂತೆ ಈ ವಿಶ್ಲೇಷಣಾ ಸಾಧನಗಳನ್ನೂ ಬಹಳ ಜಾಗರೂಕತೆಯಿಂದ ಬಳಸಬೇಕಾಗುತ್ತದೆ. ಮೊದಲಿಗೆ ಪರಿಕಲ್ಪನೆಗಳನ್ನು ವಿವೇಚಿಸೋಣ. ಪರಿಕಲ್ಪನೆ ಎಂಬುದು ಯಾವುದಾದರೂ ಒಂದು ವಸ್ತುವಿನ ಕುರಿತಾದ ಸಾಮಾನ್ಯವಾದ ಒಂದು ವಿಚಾರವಾಗಿರುತ್ತದೆ. ಆ ವಿಚಾರವನ್ನು ಒಂದು ಪದದಲ್ಲಿ ಅಥವಾ ಸಂಕ್ಷಿಪ್ತ ಪದಗುಚ್ಛದಲ್ಲಿ ವ್ಯಕ್ತಪಡಿಸಲಾಗುತ್ತದೆ. ಪರಿಕಲ್ಪನೆ ಎಂಬುದು ಒಂದು ಅಂಕಿತ ನಾಮಪದ ಅಥವಾ ಸಾಮಾನ್ಯ ನಾಮಪದ (ವಸ್ತುವಿನ ಹೆಸರು) ಕ್ಕಿಂತಲೂ ಮಿಗಿಲಿನದ್ದು. ಉದಾಹರಣೆಗೆ, ಒಂದು ನಿರ್ದಿಷ್ಟವಾದ, ವಿಶಿಷ್ಟವಾದ ಬೆಕ್ಕಿನ ಕುರಿತು ಮಾತನಾಡುವುದಕ್ಕೂ 'ಬೆಕ್ಕು' ಎಂಬ ಪರಿಕಲ್ಪನೆ ಇಟ್ಟುಕೊಂಡು ಮಾತನಾಡುವುದಕ್ಕೂ ವ್ಯತ್ಯಾಸವಿದೆ. ಬೆಕ್ಕಿನ ಪರಿಕಲ್ಪನೆ ಒಂದು 'ಭೌತವಸ್ತು' ಆಗಿರುವುದಿಲ್ಲ, ಅದೊಂದು 'ಪರಿಕಲ್ಪನೆ'ಯಾಗಿರುತ್ತದೆ. ಆ ಪರಿಕಲ್ಪನೆ ಒಂದು ಬೆಕ್ಕಿಗೆ ಇರುವ ವಿಶಿಷ್ಟವಾದ ವಿವಿಧ ಗುಣಲಕ್ಷಣಗಳನ್ನು ಒಳಗೊಂಡಿರುತ್ತದೆ: 'ರೋಮಮಯವಾದ ಸಸ್ತನಿ', 'ಚಿಕ್ಕದು', 'ಸಾಕುಪ್ರಾಣಿ', 'ಇಲಿಗಳನ್ನು ಹಿಡಿಯುತ್ತವೆ' ಇತ್ಯಾದಿ. 'ಸಮಾನತೆ' ಎಂಬುದು ಸಹ ಇದೇ ರೀತಿ ಒಂದು ತತ್ವವಾಗಿದೆ ಅಥವಾ ಒಂದು ಆದರ್ಶವಾಗಿದೆ. ಓಟಗಾರ ವಿಶ್ವಮಟ್ಟದ ದಾಖಲೆಯನ್ನು 'ಸರಿ'ಗಟ್ಟಿದ ಅಥವಾ ಪಿತ್ರಾರ್ಜಿತ ಆಸ್ತಿ ಇಬ್ಬರೂ ಸಹೋದರರಿಗೆ 'ಸರಿ'ಸಮನಾಗಿ ಹಂಚತಕ್ಕದ್ದು ಎಂಬ ಮಾತಿಗೂ 'ಸಮಾನತೆ'ಯ ಪರಿಕಲಪನೆಗೂ ವ್ಯತ್ಯಾಸವಿದೆ. ಇದೇ ರೀತಿ

'ಅಧ್ಯಕ್ಷತೆ' ಎಂಬುದು ಒಬ್ಬ ನಿರ್ದಿಷ್ಟ ಅಧ್ಯಕ್ಷನಿಗೆ  ಸಂಬಂಧಿಸಿದ್ದಲ್ಲ, ಬದಲಿಗೆ ಕಾರ್ಯಾಂಗದ ಅಧಿಕಾರದ ಸಂಘಟನೆಯ ಕುರಿತಾದ ಕಲ್ಪನೆಗಳ ಸಮುಚ್ಛಯಕ್ಕೆ ಸಂಬಂಧಿಸಿದ್ದಾಗಿದೆ.

ಹಾಗಿದ್ದರೆ ಪರಿಕಲ್ಪನೆಗಳ ಉಪಯುಕ್ತತೆ ಏನು? ಪರಿಕಲ್ಪನೆಗಳು ಪರಿಕರಗಳಾಗಿದ್ದು ಈ ಪರಿಕರದ ನೆರವಿನಿಂದ ನಾವು ಯೋಚಿಸುತ್ತೇವೆ, ವಿಮರ್ಶಿಸುತ್ತೇವೆ, ವಾದಿಸುತ್ತೇವೆ, ವಿವರಿಸುತ್ತೇವೆ, ವಿಶ್ಲೇಷಿಸುತ್ತೇವೆ. ಬಾಹ್ಯ ಜಗತ್ತನ್ನು ಸುಮ್ಮನೆ ಗ್ರಹಿಸಿದ ಮಾತ್ರಕ್ಕೆ ಆ ಗ್ರಹಿಕೆ ತನ್ನಷ್ಟಕ್ಕೆ ನಮಗೆ ತಿಳಿವಳಿಕೆ ನೀಡುವುದಿಲ್ಲ. ಜಗತ್ತನ್ನು ಯಥಾರ್ಥವಾಗಿ ಅರಿಯಲು ಒಂದು ರೀತಿಯಲ್ಲಿ ನಾವು ಜಗತ್ತಿಗೆ ಅರ್ಥವನ್ನು ಆರೋಪಿಸಬೇಕಾಗುತ್ತದೆ. ಪರಿಕಲ್ಪನೆಗಳನ್ನು ರೂಪಿಸುವ ಮೂಲಕ ನಾವು ಜಗತ್ತಿಗೆ ಅರ್ಥ ಕೊಡುತ್ತೇವೆ. ಸರಳವಾಗಿ ಹೇಳುವುದಾದರೆ, ಬೆಕ್ಕನ್ನು ಬೆಕ್ಕಿನಂತೆ ನಡೆಸಿಕೊಳ್ಳಬೇಕಾದರೆ ನಮಗೆ ಬೆಕ್ಕು ಎಂದರೇನು ಎನ್ನುವುದರ ಪರಿಕಲ್ಪನೆ ಇರಬೇಕಾಗುತ್ತದೆ. ವಸ್ತುಗಳು ಒಂದೇ ರೂಪ, ಒಂದೇ ಗುಣಲಕ್ಷಣಗಳನ್ನು ಹೊಂದಿವೆ ಎಂದು ಗುರುತಿಸಿ ಅದರಂತೆ ವರ್ಗೀಕರಿಸುವಲ್ಲಿಯೂ ಪರಿಕಲ್ಪನೆಗಳು ನಮಗೆ ನೆರವಾಗುತ್ತವೆ. ಉದಾಹರಣೆಗೆ, ಬೆಕ್ಕು ಎಂಬ ಪ್ರಾಣಿ 'ಬೆಕ್ಕು'ಗಳ ವರ್ಗದ ಒಂದು ಸದಸ್ಯ ಪ್ರಾಣಿಯಾಗಿದೆ. ಆದ್ದರಿಂದ ಪರಿಕಲ್ಪನೆಗಳು 'ಸಾಮಾನ್ಯ'ವಾದವುಗಳು: ಅವು ಹಲವಾರು ವಸ್ತುಗಳೊಂದಿಗೆ ಸಂಬಂಧ ಹೊಂದಬಲ್ಲವು, ಆ ಸಾಮಾನ್ಯ ಕಲ್ಪನೆಯ ಗುಣಲಕ್ಷಣಗಳಿಗೆ ಅನುಸಾರವಾಗಿರುವ ಯಾವುದೇ ವಸ್ತುವಿನೊಂದಿಗೆ ಸಂಬಂಧ ಹೊಂದಬಲ್ಲವು. ಈ ಜಗತ್ತನ್ನು ಅರ್ಥ ಮಾಡಿಕೊಳ್ಳಲು ನೆರವಾಗುವಂತಹ ಪರಿಕಲ್ಪನೆಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಪರಿಷ್ಕರಿಸುವ ಮೂಲಕ ನಾವು ನಮ್ಮ ರಾಜಕೀಯ ಜ್ಞಾನವನ್ನು ಕಟ್ಟಿಕೊಂಡಿದ್ದೇವೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗುವುದಿಲ್ಲ. ಆ ಅರ್ಥದಲ್ಲಿ ಪರಿಕಲ್ಪನೆಗಳು ಮನುಷ್ಯ ಜ್ಞಾನವನ್ನು ನಿರ್ಮಿಸಬಲ್ಲ ಇಟ್ಟಿಗೆಗಳಾಗಿವೆ.

ಆದಾಗ್ಯೂ, ಈ ಕಲ್ಪನೆಗಳು ಕೆಲವೊಮ್ಮೆ ದಾರಿ ತಪ್ಪಿಸುವಂತಹವೂ ಆಗಿರುತ್ತದೆ. ಮೊದಲಿಗೆ, ನಾವು ಅರ್ಥ ಮಾಡಿಕೊಳ್ಳಲು ಬಯಸುವ ರಾಜಕೀಯ ವಾಸ್ತವಗಳು ನಿರಂತರವಾಗಿ ಬದಲಾಗುತ್ತಿರುತ್ತದೆ ಮತ್ತು ಬಹಳ ಸಂಕೀರ್ಣವಾಗಿರುತ್ತದೆ. 'ಪ್ರಜಾಪ್ರಭುತ್ವ', 'ಮಾನವ ಹಕ್ಕುಗಳು', 'ಬಂಡವಾಳಶಾಹಿವಾದ' ಮುಂತಾದಂತಹ ಪರಿಕಲ್ಪನೆಗಳು ಅವುಗಳು ವಿವರಿಸಲು ಪ್ರಯತ್ನಿಸುವ ನಿರ್ದಿಷ್ಟ ರೂಪವಿರದ ವಾಸ್ತವಗಳಿಗಿಂತಲೂ ಹೆಚ್ಚು ಸ್ಪಷ್ಟ ಹಾಗೂ ಸುಸಂಬದ್ಧವಾಗಿರುವ ಕಾರಣ ಅದು ಸಮಸ್ಯಾತ್ಮಕವಾಗಿದೆ. ಮ್ಯಾಕ್ಸ್ ವೆಬರ್  (Max Weber) ಕೆಲವು ನಿರ್ದಿಷ್ಟ ಪರಿಕಲ್ಪನೆಗಳನ್ನು 'ಆದರ್ಶ ವಿಧಗಳು' ಎಂದು ಗುರುತಿಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಿದ. ಈ ದೃಷ್ಟಿಕೋನವು ನಾವು ಬಳಸುವ ಪರಿಕಲ್ಪನೆಗಳು ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ವಿದ್ಯಮಾನದ ಕೆಲವು ಮೂಲಭೂತ ಅಥವಾ ಮುಖ್ಯಲಕ್ಷಣಗಳ ಪ್ರತ್ಯೇಕಿಸಿರುವ ಅಂಶಗಳಿಂದ ಕಟ್ಟಲ್ಪಟ್ಟದ್ದಾಗಿರುತ್ತವೆ ಎಂದು ಸೂಚಿಸುತ್ತದೆ. ಅಂದರೆ ಒಂದು ಲಕ್ಷಣಕ್ಕೆ ಪ್ರಾಮುಖ್ಯತೆ ನೀಡಿ ಇನ್ನಿತರ ಲಕ್ಷಣಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವುದಾಗಿರುತ್ತದೆ. ಉದಾಹರಣೆಗೆ


'ಕ್ರಾಂತಿ' ಎಂಬ ಪರಿಕಲ್ಪನೆಯನ್ನೇ ತೆಗೆದುಕೊಳ್ಳೋಣ. ಇದನ್ನು ಒಂದು 'ಆದರ್ಶ ವಿಧ' ಎಂದು ಪರಿಗಣಿಸಬಹುದು. ಅಂದರೆ ಕ್ರಾಂತಿ ಎನ್ನುವುದು ಮೂಲಭೂತವಾಗಿ ಮತ್ತು ಸಾಮಾನ್ಯವಾಗಿ ಒಂದು ಹಿಂಸಾತ್ಮಕ ರಾಜಕೀಯ ಬದಲಾವಣೆಯ ಪ್ರಕ್ರಿಯ ಎನ್ನುವತ್ತ ಗಮನ ಸೆಳೆಯುತ್ತದೆ. ೧೭೮೯ರ ಫ್ರೆಂಚ್ ಕ್ರಾಂತಿ ಮತ್ತು ೧೯೮೯–೯೧ರ ಪೂರ್ವ ಯುರೋಪಿನ ಕ್ರಾಂತಿಗಳ ನಡುವಿನ ಪ್ರಮುಖ ಸಮಾನಾಂಶಗಳನ್ನು ಎತ್ತಿ ತೋರಿಸುವುದರ ಮೂಲಕ ಅದನ್ನು ಅರ್ಥಮಾಡಿಕೊಳ್ಳಲು ನಮಗೆ ನೆರವಾಗುತ್ತದೆ. ಆದಾಗ್ಯೂ ಆ ಪರಿಕಲ್ಪನೆಯನ್ನು ಬಹಳ ಎಚ್ಚರದಿಂದ ಬಳಸಬೇಕಾಗುತ್ತದೆ. ಏಕೆಂದರೆ ಆ ಪರಿಕಲ್ಪನೆಯು ಕೆಲವು ಮುಖ್ಯವಾದ ವ್ಯತ್ಯಾಸಗಳನ್ನೇ ಮುಚ್ಚಿಹಾಕಬಹುದು ಮತ್ತು ಆ ಕಾರಣದಿಂದ ಗ್ರಹಿಕೆಯನ್ನು ವಿರೂಪಗೊಳಿಸಬಹುದು. ಉದಹರಣೆಗೆ, ಈ ಪ್ರಕರಣದಲ್ಲಿ ಕ್ರಾಂತಿಯ ಸೈದ್ಧಾಂತಿಕ ಹಾಗೂ ಸಾಮಾಜಿಕ ಗುಣಲಕ್ಷಣಗಳ ಗ್ರಹಿಕೆಯಲ್ಲಿನ ವ್ಯತ್ಯಾಸವನ್ನೇ ವಿರೂಪಗೊಳಿಸುತ್ತವೆ. ಈ ಪ್ರವೃತ್ತಿಯನ್ನು ಸಾರ್ಟೋರಿ (Sartori) (೧೯೭೦) ಅವರು ಪರಿಕಲ್ಪನಾತ್ಮಕ 'ಪಯಣ' (conceptual 'travelling') (ಹೊಸ ಹೊಸ ಪ್ರಕರಣಗಳಿಗೆ ಪರಿಕಲ್ಪನೆಗಳನ್ನು ಅನ್ವಯಿಸುವುದು) ಮತ್ತು ಪರಿಕಲ್ಪನಾತ್ಮಕ 'ಹಿಗ್ಗಿಸುವಿಕೆ' (conceptual 'stretching') (ಹೊಸ ಪ್ರಕರಣಗಳಿಗೆ ಈ ಪರಿಕಲ್ಪನೆಗಳು ಸರಿಹೊಂದದೆ ಹೋದಾಗ ಸಂಭವಿಸಬಹುದಾದ ವಿರೂಪಗಳು) ಎನ್ನುವ ವಿದ್ಯಮಾನಗಳೆಡೆ ಗಮನ ಸೆಳೆಯುವುದರ ಮೂಲಕ ಇದೇ ರೀತಿಯ ಪ್ರವೃತ್ತಿಗಳು ಇರುವುದನ್ನು ಎತ್ತಿ ತೋರಿಸಿದರು. ಈ ಕಾರಣಕ್ಕಾಗಿ ಪರಿಕಲ್ಪನೆಗಳು ಅಥವಾ ಆದರ್ಶ ವಿಧಗಳನ್ನು ನಾವು 'ಉಪಯುಕ್ತ'ವೇ ಅಲ್ಲವೇ ಎಂದು ತೀರ್ಮಾನಿಸಲು ಬಳಸಿಕೊಳ್ಳಬೇಕಲ್ಲದೇ 'ಸತ್ಯ' ಅಥವಾ 'ಹುಸಿ' ಎಂದು ತೀರ್ಮಾನಿಸಲು ಬಳಸಬಾರದು.

ಇಲ್ಲಿ ಮತ್ತೊಂದು ಸಮಸ್ಯೆ ಎಂದರೆ, ರಾಜಕೀಯ ಪರಿಕಲ್ಪನೆಗಳು ಅನೇಕ ವೇಳೆ ಗಹನವಾದ ಸೈದ್ಧಾಂತಿಕ ವಿವಾದಕ್ಕೆ ಒಳಗಾಗುತ್ತವೆ. ರಾಜಕಾರಣವು ಒಂದು ಅರ್ಥದಲ್ಲಿ, ಪರಿಭಾಷೆ ಹಾಗೂ ಪರಿಕಲ್ಪನೆಗಳಿಗೆ ನ್ಯಾಯಸಮ್ಮತ ಅರ್ಥವನ್ನು ಕಂಡುಕೊಳ್ಳುವ ಹೋರಾಟವಾಗಿದೆ. 'ಸ್ವಾತಂತ್ರ್ಯ ರಕ್ಷಣೆಗಾಗಿ', 'ಪ್ರಜಾಪ್ರಭುತ್ವ ಎತ್ತಿ ಹಿಡಿಯಲಿಕ್ಕಾಗಿ' 'ನ್ಯಾಯ ನಮ್ಮ ಕಡೆಯಿದೆ' ಎಂದು ಶತ್ರುಗಳು ವಾದಿಸಬಹುದು, ಹೋರಾಡಬಹುದು, ಯುದ್ಧ ಸಾರಲೂ ಬಹುದು. ಆದರೆ ಇಲ್ಲಿ ಸಮಸ್ಯೆ ಏನೆಂದರೆ 'ಸ್ವಾತಂತ್ರ್ಯ', 'ಪ್ರಜಾಪ್ರಭುತ್ವ', 'ನ್ಯಾಯ' ಮುಂತಾದ ಪದಗಳಿಗೆ ಬೇರೆ ಬೇರೆಯ ತರಹದ ಜನರು ಬೇರೆ ಬೇರೆಯ ತರಹದ ಅರ್ಥಗಳನ್ನು ಹಚ್ಚಿರುತ್ತಾರೆ. 'ನಿಜವಾದ' ಪ್ರಜಾಪ್ರಭುತ್ವ, 'ನಿಜವಾದ' ಸ್ವಾತಂತ್ರ್ಯ, 'ನಿಜವಾದ' ನ್ಯಾಯ ಯಾವುದು ಎಂಬುದನ್ನು ಹೇಗೆ ನಿರ್ಧರಿಸುವುದು? ಅದನ್ನು ನಿರ್ಧರಿಸಲು ನಮಗೆ ಸಾಧ್ಯವೇ ಇಲ್ಲ ಎಂಬುದು ಸರಳ ಉತ್ತರವಾಗಿದೆ. 'ರಾಜಕಾರಣ'ವನ್ನು ಅರ್ಥೈಸುವ ಪ್ರಯತ್ನದಂತೆಯೇ ಹಲವಾರು ಪರಸ್ಪರ ವಿರೋಧಾತ್ಮಕ ರಾಜಕೀಯ ಪರಿಕಲ್ಪನೆಗಳಿವೆ ಎಂಬುದನ್ನು ನಾವು ಒಪ್ಪಬೇಕಾಗುತ್ತದೆ. ಇವುಗಳನ್ನು 'ಮೂಲಭೂತವಾಗಿ ಪ್ರಶ್ನಾರ್ಹ' ಪರಿಕಲ್ಪನೆಗಳೆಂದು ಪರಿಗಣಿಸುವುದು ಉತ್ತಮ (Gallie (ಗ್ಯಾಲಿ),

(1955/56)). ಏಕೆಂದರೆ ಇವುಗಳ ಬಗ್ಗೆ ಇರುವ ವಿವಾದವು ಅದೆಷ್ಟು ಗಹನವಾದುದೆಂದರೆ ನಮಗೆ ಒಂದು ತಟಸ್ಥವಾದ ಅಥವಾ ಸಿದ್ಧವಾದ ವ್ಯಾಖ್ಯಾನಕ್ಕೆ ಬಂದು ನಿಲ್ಲಲು ಸಾಧ್ಯವೇ ಆಗುವುದಿಲ್ಲ. ಪರಿಣಾಮವಾಗಿ, ಒಂದೇ ಒಂದು ಪರಿಭಾಷೆಯು ಹಲವು ಪರಸ್ಪರ ವಿರೋಧಾತ್ಮಕ ಪರಿಕಲ್ಪನೆಗಳನ್ನು ಪ್ರತಿನಿಧಿಸಬಹುದು ಮತ್ತು ಆ ಹಲವು ಪರಿಕಲ್ಪನೆಗಳ ಪೈಕಿ ಒಂದನ್ನು 'ಸರಿಯಾದ' ಅರ್ಥ ಎಂದು ಸ್ವೀಕರಿಸಲಾಗುವುದಿಲ್ಲ. ಉದಾಹರಣೆಗೆ, ರಾಜಕಾರಣವನ್ನು 'ರಾಜ್ಯದ ವ್ಯವಹಾರಗಳು' ಎಂದೂ, 'ಸಾರ್ವಜನಿಕ ಬದುಕಿನ ನಡಾವಳಿಗಳು' ಎಂದೂ, 'ವಾಗ್ವಾದ ಮತ್ತು ರಾಜಿ' ಎಂದೂ, 'ಅಧಿಕಾರ ಹಾಗೂ ಸಂಪನ್ಮೂಲಗಳ ಹಂಚಿಕೆ' ಎಂದೂ ಏಕಕಾಲಕ್ಕೆ ವ್ಯಾಖ್ಯಾನಿಸಬಹುದಾಗಿದೆ.

ಮಾದರಿಗಳು ಹಾಗೂ ಸಿದ್ಧಾಂತಗಳು ಪರಿಕಲ್ಪನೆಗಿಂತಲೂ ವಿಶಾಲ ವ್ಯಾಪ್ತಿ ಹೊಂದಿವೆ; ಇವು ಒಂದಲ್ಲ ಹಲವಾರು ಕಲ್ಪನೆಗಳನ್ನು ಒಳಗೊಂಡಿರುತ್ತವೆ. ಸಾಮಾನ್ಯವಾಗಿ **ಮಾದರಿ** ಎಂಬುದು ಯಾವುದೋ ಒಂದನ್ನು ಪ್ರತಿನಿಧಿಸುವ ಪರಿಭಾಷೆಯಾಗಿದೆ. ಅದನ್ನು ಬೊಂಬೆ ಮನೆ ಅಥವಾ ವಿಮಾನ ಆಟಿಕೆಗಳಂತಹ ಸಾಮಾನ್ಯವಾಗಿ ಸಣ್ಣ ಪ್ರಮಾಣದವುಗಳನ್ನು ಪ್ರತಿನಿಧಿಸುವಂತದ್ದಾಗಿರುತ್ತದೆ. ಈ ಅರ್ಥದಲ್ಲಿ ಮಾದರಿಯ ಉದ್ದೇಶ ಸಾಧ್ಯವಾದಷ್ಟೂ ಮೂಲ ವಸ್ತುವಿಗೆ ಹೋಲುವುದಾಗಿದೆ. ಆದಾಗ್ಯೂ ಪರಿಕಲ್ಪನಾತ್ಮಕ ಮಾದರಿಗಳು ವಸ್ತುವನ್ನು ಹೋಲಲೇಬೇಕು ಎಂದೇನಿಲ್ಲ. ಉದಾಹರಣೆಗೆ, ಒಂದು ಆರ್ಥಿಕತೆಯ ಕಂಪ್ಯೂಟರ್ ಮಾದರಿ ನಿಜವಾದ ಆರ್ಥಿಕತೆಯನ್ನು ಹೋಲಲೇಬೇಕು ಎಂದು ಒತ್ತಾಯಿಸಿದರೆ ಅದು ಅಸಂಗತವಾಗಿರುತ್ತದೆ. ಬದಲಿಗೆ, ಪರಿಕಲ್ಪನಾತ್ಮಕ ಮಾದರಿಗಳು ವಿಶ್ಲೇಷಣಾ ಪರಿಕರಗಳಾಗಿವೆ; ಈ ಪರಿಕರಗಳು ಬಹಳ ಮುಖ್ಯವಾದುವು ಏಕೆಂದರೆ ಅವುಗಳ ಮೂಲಕ ಅರ್ಥವನ್ನು ಆರೋಪಿಸಬಹುದಾಗಿರುತ್ತದೆ. ಇಲ್ಲವಾದಲ್ಲಿ ಅದು ಕ್ರಮವಿಲ್ಲದ ಗೊಂದಲಮಯವಾದ ಮಾಹಿತಿಗಳ ಸಂಗ್ರಹವಾಗುತ್ತದೆ ಅಷ್ಟೇ. ಮಾಹಿತಿಗಳು ತಾನಾಗೇ ಏನೂ ಹೇಳುವುದಿಲ್ಲ; ಅವನ್ನು ವ್ಯವಸ್ಥಿತವಾಗಿ ವ್ಯಾಖ್ಯಾನಿಸಬೇಕಾಗುತ್ತದೆ, ಸಂಘಟಿಸಬೇಕಾಗುತ್ತದೆ. ಈ ಕಾರ್ಯಚಟುವಟಿಕೆಯನ್ನು ಸಾಧಿಸಲು ಮಾದರಿ ನಮಗೆ ನೆರವಾಗುತ್ತದೆ. ಏಕೆಂದರೆ ಅದು ಸೂಕ್ತವಾದ ಪ್ರಾಯೋಗಿಕ ದತ್ತಾಂಶಗಳ ಅರ್ಥ ಮತ್ತು ಮಹತ್ವವನ್ನು ಎತ್ತಿಹಿಡಿಯಬಲ್ಲ ಸಂಬಂಧಗಳ ಜಾಲವನ್ನು ಒಳಗೊಂಡಿರುತ್ತದೆ. ಇದನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬಹುದು. ಡೇವಿಡ್ ಈಸ್ಟನ್ (1979, 1981) ಅಭಿವೃದ್ಧಿಪಡಿಸಿದ ರಾಜಕೀಯ ವ್ಯವಸ್ಥೆಯ ಮಾದರಿಯು ರಾಜಕೀಯ ವಿಶ್ಲೇಷಣೆಯ ಅತ್ಯಂತ ಪ್ರಭಾವೀ ಮಾದರಿಗಳಲ್ಲಿ ಒಂದಾಗಿದೆ. ಇದನ್ನು ಒಂದು ಚಿತ್ರದ ಮೂಲಕ ವಿವರಿಸಬಹುದು (ನೋಡಿ ಚಿತ್ರ 1.4).

ಹೊರಹರಿವು




ಹೊರಹರಿವು

ಚಿತ್ರ 1.4 ರಾಜಕೀಯ ವ್ಯವಸ್ಥೆ

- ಒಳಹರಿವು(ಪೂರಕ ಮಾಹಿತಿ); ಹೊರಹರಿವು (ಫಲಿತಾಂಶಗಳು)

Commented [C10]: Added

ಈ ಮಹತ್ವಾಕಾಂಕ್ಷೀ ಮಾದರಿಯು ಇಡೀ ರಾಜಕೀಯ ಪ್ರಕ್ರಿಯೆಯನ್ನು ವಿವರಿಸುತ್ತದಲ್ಲದೇ ವ್ಯವಸ್ಥಾ ವಿಶ್ಲೇಷಣೆ (systems analysis) ಎಂಬ ಅನ್ವಯದ ಮೂಲಕ ಪ್ರಮುಖ ರಾಜಕೀಯ ಪಾತ್ರಧಾರಿಗಳ ಕಾರ್ಯಗಳನ್ನೂ ವಿವರಿಸುತ್ತದೆ. ಸಿಸ್ಟಂ ಎಂಬುದು ಸುಸಂಘಟಿತವಾದ ಅಥವಾ ಸಂಕೀರ್ಣವಾದ ಸಮಗ್ರ ವ್ಯವಸ್ಥೆಯಾಗಿದೆ. ಪರಸ್ಪರ ಸಂಬಂಧಿಯೂ, ಪರಸ್ಪರಾವಲಂಬಿಯೂ ಆದ ಭಾಗಗಳ ಒಂದು ಸಮೂಹವಾಗಿದೆ. ಇನ್ನು ರಾಜಕೀಯ ವ್ಯವಸ್ಥೆಯಲ್ಲಿ, ಈಸ್ಟನ್ ಮಾತುಗಳಲ್ಲೇ ಹೇಳುವುದಾದರೆ 'ಇನ್‌ಪುಟ್' (input(ಒಳಹರಿವು)) ಮತ್ತು 'ಔಟ್‌ಪುಟ್' (output(ಹೊರಹರಿವು))ಗಳ ನಡುವೆ ಸಂಬಂಧ ಇರುತ್ತದೆ. ರಾಜಕೀಯ ವ್ಯವಸ್ಥೆಯಲ್ಲಿ ಬೇಡಿಕೆಗಳು ಹಾಗೂ ಸಾಮಾನ್ಯ ಸಾರ್ವಜನಿಕರ ಬೆಂಬಲವೇ ಇನ್‌ಪುಟ್ ಆಗಿರುತ್ತದೆ. ಉತ್ತಮ ಜೀವನಮಟ್ಟ, ಸುಧಾರಿತ ಉದ್ಯೋಗ ಅವಕಾಶಗಳು, ಅಲ್ಪಸಂಖ್ಯಾತರ ಹಾಗೂ ವ್ಯಕ್ತಿಸ್ವಾತಂತ್ರ್ಯದ ರಕ್ಷಣೆಗಾಗಿ ಹೆಚ್ಚು ಉದಾರ ಕಲ್ಯಾಣ ನಿಧಿಗಳು ಇವೇ ಮುಂತಾದವುಗಳು ಬೇಡಿಕೆಗಳಾಗಿವೆ. ಸಾರ್ವಜನಿಕರು ಸರ್ಕಾರದೊಂದಿಗೆ ಅನುಸರಿಸುವುದು, ತೆರಿಗೆ ಪಾವತಿಸುವ ಮೂಲಕ ರಾಜಕೀಯ ವ್ಯವಸ್ಥೆಗೆ ತಾವು ಕೊಡುಗೆ ನೀಡುವುದು, ಸಾರ್ವಜನಿಕ ಬದುಕಿನಲ್ಲಿ ಪಾಲ್ಗೊಳ್ಳಲು ಸಮ್ಮತಿಸುವುದು ಇವೇ ಮುಂತಾದವುಗಳು ಬೆಂಬಲವಾಗಿದೆ. ಇನ್ನು ಓಟ್‌ಪುಟ್ ಎಂಬುದು ಸರ್ಕಾರದ ನಿರ್ಧಾರಗಳು ಹಾಗೂ ಕ್ರಿಯೆಗಳಾಗಿವೆ: ನೀತಿ ರೂಪಿಸುವುದು, ಕಾನೂನು ಜಾರಿಗೊಳಿಸುವುದು, ತೆರಿಗೆ ವಿಧಿಸುವುದು, ಸಾರ್ವಜನಿಕ ನಿಧಿಗಳನ್ನು ಹಂಚುವುದು ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಈ ಔಟ್‌ಪುಟ್‌ಗಳು ಸ್ಪಷ್ಟ ಅಭಿಪ್ರಾಯಗಳನ್ನು ರೂಪಿಸುವ ಮೂಲಕ ಹೆಚ್ಚಿನ ಬೇಡಿಕೆ ಹಾಗೂ

ಬೆಂಬಲಗಳನ್ನು ಸೃಷ್ಟಿಸುತ್ತದೆ. ರಾಜಕೀಯ ವ್ಯವಸ್ಥೆಯ ಉಳಿವು ಔಟ್‌ಪುಟ್ ಹಾಗೂ ಇನ್‌ಪುಟ್ ನಡುವಿನ ಸಾಮರಸ್ಯವನ್ನು ಅವಲಂಬಿಸಿರುವ ಕಾರಣ ಅದು ದೀರ್ಘಾವಧಿಯ ಸಮತೋಲನವನ್ನು ಅಥವಾ ರಾಜಕೀಯ ಸ್ಥಿರತೆಯತ್ತ ಒಲವು ತೋರುತ್ತದೆ ಎಂಬುದು ಈಸ್ಟನ್ ಮಾದರಿ ನೀಡುವ ಪ್ರಮುಖ ಒಳನೋಟವಾಗಿದೆ.

ಆದಾಗ್ಯೂ, ವಾಸ್ತವವನ್ನು ವಿವರಿಸಲು ಪ್ರಯತ್ನಿಸುವ ಪರಿಕಲ್ಪನಾತ್ಮಕ ಮಾದರಿಗಳು ವಾಸ್ತವದ ಸರಳೀಕರಣಗಳು ಮಾತ್ರ ಎಂಬುದನ್ನು ನೆನಪಿಡಬೇಕಾದುದು ಬಹಳ ಮುಖ್ಯ. ಅವು ನಮ್ಮಲ್ಲಿ ಜ್ಞಾನ ಮೂಡಿಸಬಲ್ಲ ಪರಿಕರಗಳಾಗಿವೆಯೇ ವಿನಾ ಅವು ವಿಶ್ವಾಸಾರ್ಹ ಜ್ಞಾನವೇನೂ ಅಲ್ಲ. ಉದಾಹರಣೆಗೆ, ಈಸ್ಟನ್ ಮಾದರಿಯಲ್ಲಿ ರಾಜಕೀಯ ಪಕ್ಷಗಳು ಹಾಗೂ ಆಸಕ್ತಿ ಗುಂಪುಗಳನ್ನು 'ದ್ವಾರಪಾಲಕರ'ಗಳನ್ನಾಗಿ ವಿವರಿಸಲಾಗಿದೆ. ರಾಜಕೀಯ ವ್ಯವಸ್ಥೆಯೊಳಗೆ ಒಳಹರಿವನ್ನು ನಿಯಂತ್ರಿಸುವುದು ಈ ದ್ವಾರಪಾಲಕರ ಮುಖ್ಯ ಕಾರ್ಯವಾಗಿರುತ್ತದೆ. ಇದು ಇವುಗಳ ಹಲವು ಕಾರ್ಯಗಳ ಪೈಕಿ ಒಂದಾದರೂ ಪಕ್ಷಗಳು ಹಾಗೂ ಆಸಕ್ತಿ ಗುಂಪುಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುತ್ತವೆ, ಮತ್ತು ಆ ಮೂಲಕ ಸಹಜ ಸಾರ್ವಜನಿಕ ಬೇಡಿಕೆಯನ್ನು ರೂಪಿಸುವಲ್ಲಿ ನೆರವಾಗುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇವು ವಾಸ್ತವದಲ್ಲಿ ವ್ಯವಸ್ಥಾ ಮಾದರಿಗಳು ಸೂಚಿಸುವುದಕ್ಕಿಂತಲೂ ಹೆಚ್ಚು ಆಸಕ್ತಿಕರವೂ, ಹೆಚ್ಚು ಸಂಕೀರ್ಣವೂ ಆದ ಸಂಸ್ಥೆಗಳಾಗಿವೆ. ಅದೇ ರೀತಿ ರಾಜಕೀಯ ವ್ಯವಸ್ಥೆಗಳು ಏಕೆ ದಬ್ಬಾಳಿಕೆ ನಿರ್ಬಂಧಗಳನ್ನು ಅಳವಡಿಸಿಕೊಳ್ಳುತ್ತವೆ (ಹೆಚ್ಚು ಕಡಮೆ ಮಟ್ಟದಲ್ಲಾದರೂ ಎಲ್ಲಾ ವ್ಯವಸ್ಥೆಗಳು ಅವುಗಳನ್ನು ಬಳಸುತ್ತವೆ) ಎಂಬುದನ್ನು ವಿವರಿಸುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಜನಪ್ರಿಯ ಒತ್ತಡಗಳಿಗೆ ಏಕೆ ಮತ್ತು ಹೇಗೆ ಸ್ಪಂದಿಸುತ್ತವೆ ಎಂಬುದನ್ನು ಈಸ್ಟನ್ ಮಾದರಿ ವಿವರಿಸುತ್ತದೆ.

ಅನೇಕ ವೇಳೆ **'ಸಿದ್ಧಾಂತ'** ಹಾಗೂ 'ಮಾದರಿ' ಈ ಎರಡೂ ಪರಿಭಾಷೆಗಳನ್ನು ರಾಜಕಾರಣದಲ್ಲಿ ಸಮಾನಾರ್ಥಕವೆಂಬಂತೆ ಬಳಸಲಾಗುವುದು. ಇವೆರಡೂ ಪರಿಕಲ್ಪನಾತ್ಮಕ ರಚನೆಗಳಾಗಿದ್ದು ರಾಜಕೀಯ ವಿಶ್ಲೇಷಣೆಯ ಪರಿಕರಗಳನ್ನಾಗಿ ಇವನ್ನು ಬಳಸಲಾಗುತ್ತದೆ. ಆದಾಗ್ಯೂ, ಖಚಿತವಾಗಿ ಹೇಳುವುದಾದರೆ ಸಿದ್ಧಾಂತ ಒಂದು ಪ್ರಸ್ತಾವನೆಯಾಗಿದೆ. ಪ್ರಾಯೋಗಿಕ ದತ್ತಾಂಶಗಳುಳ್ಳ ಒಂದು ಸಂಗತಿಗೆ ಇದು ವ್ಯವಸ್ಥಿತವಾಗಿ ವಿವರಣೆ ನೀಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಮಾದರಿಯು ಕೇವಲ ವಿವರಣಾತ್ಮಕ ಪರಿಕರವಾಗಿದೆ; ಇದು ಹೆಚ್ಚು ಸಾಬೀತುಪಡಿಸಬೇಕಾದ ಅನುಮಾನಿತ ಸಿದ್ಧಾಂತದಂತಿದೆ. ಈ ಅರ್ಥದಲ್ಲಿ ರಾಜಕಾರಣಕ್ಕೆ ಸಂಬಂಧಿಸಿದಂತೆ, ಸಿದ್ಧಾಂತಗಳನ್ನು ಹೆಚ್ಚು ಕಡಮೆ 'ಸತ್ಯ' ಎಂದೂ ಕರೆಯಬಹುದಾದರೂ ಮಾದರಿಗಳನ್ನು ಹೆಚ್ಚು ಕಡಮೆ 'ಉಪಯುಕ್ತ' ಮಾತ್ರ ಎಂದು ಕರೆಯಬಹುದಾಗಿದೆ. ಆದಾಗ್ಯೂ, ಅನೇಕ ವೇಳೆ ಸಿದ್ಧಾಂತ ಹಾಗೂ ಮಾದರಿಗಳು ಸ್ಪಷ್ಟವಾಗಿ ಪರಸ್ಪರ ಸಂಬಂಧ ಹೊಂದಿರುತ್ತವೆ: ವಿಶಾಲವಾದ ರಾಜಕೀಯ ಸಿದ್ಧಾಂತಗಳನ್ನು ಮಾದರಿಗಳ ಒಂದು ಸರಣಿಯ ರೀತಿಯಲ್ಲಿ

ವಿವರಿಸಬಹುದಾಗಿದೆ. ಉದಾಹರಣೆಗೆ ಬಹುತ್ವದ ಸಿದ್ಧಾಂತವು (ಇದನ್ನು ಅಧ್ಯಾಯ 4 ಮತ್ತು 5 ರಲ್ಲಿ ಚರ್ಚಿಸಲಾಗಿದೆ) ರಾಜ್ಯದ ಒಂದು ಮಾದರಿ, ಮತದಾನದ ಪೈಪೋಟಿಯ ಒಂದು ಮಾದರಿ, ಗುಂಪು ರಾಜಕೀಯದ ಒಂದು ಮಾದರಿ ಇವೇ ಮುಂತಾದವುಗಳನ್ನು ಒಳಗೊಂಡಿದೆ.

ಆದಾಗ್ಯೂ ಬಹುತೇಕ ಎಲ್ಲಾ ಪರಿಕಲ್ಪನಾತ್ಮಕ ಪರಿಕರಗಳು, ಸಿದ್ಧಾಂತಗಳು, ಮಾದರಿಗಳು ಗುಪ್ತ ಮೌಲ್ಯಗಳನ್ನು ಅಥವಾ ಸೂಚ್ಯಾರ್ಥ ಗೃಹೀತಗಳನ್ನು ಒಳಗೊಂಡಿರುತ್ತದೆ. ಆದ್ದರಿಂದಲೇ ಶುದ್ಧ ಪ್ರಾಯೋಗಿಕವಾದ ಸಿದ್ಧಾಂತಗಳನ್ನು ಹುಟ್ಟುಹಾಕುವುದು ಕಷ್ಟಕರವಾದುದು; ಅಪರಿಣಾಮಿಯಾಗಿ ಮೌಲ್ಯಗಳು ಹಾಗೂ ಪ್ರಮಾಣಕ ನಂಬಿಕೆಗಳು ಪ್ರಭಾವಿಸುತ್ತವೆ. ಪರಿಕಲ್ಪನೆಗಳ ವಿಷಯದಲ್ಲಿ ಹೇಳುವುದಾದರೆ,  ಇದು ಜನ ಬಳಸುವ 'ಭಲೇ!' ('hurrah')(ಹಿಗ್ಗು, ಜಯೋತ್ಸಾಹ, ಮೆಚ್ಚಿಕೆ ಮೊದಲಾದವುಗಳನ್ನು ಸೂಚಿಸಲು) ಅಂತಹ ಉದ್ಗಾರ ಪದಗಳಲ್ಲಿ (ಉದಾಹರಣೆಗೆ 'ಪ್ರಜಾಪ್ರಭುತ್ವ', 'ಸ್ವಾತಂತ್ರ್ಯ', 'ನ್ಯಾಯ' ಇತ್ಯಾದಿ) ಇಲ್ಲವೇ 'ಛೀ!' ('boo') (ಅಸಮಾಧಾನ ಸೂಚಿಸುವ) ಎನ್ನುವ ಪದಗಳಲ್ಲಿ (ಉದಾಹರಣೆಗೆ 'ಘರ್ಷಣೆ', 'ಅರಾಜಕತೆ', 'ಸಿದ್ಧಾಂತ', ಅಷ್ಟೇ ಏಕೆ 'ರಾಜಕೀಯ' ಕೂಡ) ವ್ಯಕ್ತವಾಗುತ್ತದೆ. ಮಾದರಿಗಳು ಹಾಗೂ ಸಿದ್ಧಾಂತಗಳು ಸಹ 'ಭಾರೀ ಅಧಿಕಾರ್ಥ' ಪದಗಳಾಗಿವೆ, ಅಂದರೆ ಅವು ಹಲವಾರು ಬಗೆಯ ಪೂರ್ವಗ್ರಹಗಳನ್ನು ಒಳಗೊಂಡಿರುತ್ತವೆ. ಉದಾಹರಣೆಗೆ, ವೈಚಾರಿಕ ಆಯ್ಕೆ ಸಿದ್ಧಾಂತಗಳು ಮೌಲ್ಯಗಳ ವಿಷಯದಲ್ಲಿ ತಟಸ್ಥವಾಗಿರುತ್ತವೆ ಎಂದು ಒಪ್ಪಲು ಕಷ್ಟ. ಏಕೆಂದರೆ ಅಂತಹ ಸಿದ್ಧಾಂತಗಳು ಮನುಷ್ಯ ಮೂಲಭೂತವಾಗಿ ಅಹಮಿಕೆಯುಳ್ಳವನು, ಸ್ವಹಿತಾಸಕ್ತಿಯವನು ಎಂದು ಭಾವಿಸಿರುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಅದು ರಾಜಕೀಯವಾಗಿ ಸಾಂಪ್ರದಾಯಿಕ ಎನ್ನಿಸುವ ನೀತಿಗಳನ್ನು ರೂಪಿಸಿರುವುದು ಆಶ್ಚರ್ಯಕರವೇನಲ್ಲ ಎಂದು ತೋರಿಸಿದೆ. ಅದೇ ರೀತಿ ಮಾರ್ಕ್ಸ್‌ವಾದಿಗಳು ಪ್ರತಿಪಾದಿಸುವ  ರಾಜಕಾರಣದ ವರ್ಗ ಸಿದ್ಧಾಂತಗಳು ಸಮಾಜ ಮತ್ತು ಇತಿಹಾಸಗಳ ಬಗ್ಗೆ ಇನ್ನೂ ವಿಸ್ತಾರವಾದ ಸಿದ್ಧಾಂತಗಳನ್ನು ಆಧರಿಸಿವೆ ಮತ್ತು ನಿಶ್ಚಯವಾಗಿ, ಅವು ಅಂಗೀಕಾರಾರ್ಹತೆಯನ್ನು ಹೊಂದಿರುವ ಸಮಗ್ರ ಸಾಮಾಜಿಕ ತತ್ವದ ಮೇಲೆ ಅಂತಿಮವಾಗಿ ನಿಂತಿರುತ್ತವೆ.

ಆದ್ದರಿಂದ, ಮಾದರಿಗಳು ಹಾಗೂ ಸೂಕ್ಷ್ಮಸಿದ್ಧಾಂತಗಳಂತಹ ವಿಶ್ಲೇಷಣಾತ್ಮಕ ಪರಿಕರಗಳನ್ನು ವಿಸ್ತಾರವಾದ ಸ್ಥೂಲ ಸಿದ್ಧಾಂತಗಳ ಆಧಾರದ ಮೇಲೆ ರೂಪಿಸುವುದರಲ್ಲಿ ಅರ್ಥವಿದೆ. ರಾಜಕೀಯ ವಿಶ್ಲೇಷಣೆಯ ಈ ಪ್ರಮುಖ ಸೈದ್ಧಾಂತಿಕ ಪರಿಕರಗಳು ಬಹುತ್ವ, (ನೋಡಿ ಪುಟ. 100), ಪಂಚರ ಪ್ರಭುತ್ವ (elitism) (ನೋಡಿ ಪುಟ. 102), ವರ್ಗ ವಿಶ್ಲೇಷಣೆ ಮುಂತಾದವುಗಳ ವಿಷಯದಲ್ಲಿ ಅಧಿಕಾರ ಹಾಗೂ ರಾಜ್ಯದ ಪಾತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ವಿಶ್ಲೇಷಿಸುತ್ತವೆ. ಈ ಸಿದ್ಧಾಂತಗಳನ್ನು ಅಧ್ಯಾಯ 4 ಮತ್ತು 5ರಲ್ಲಿ ಪರಿಶೀಲಿಸಲಾಗಿದೆ. ಆದಾಗ್ಯೂ, ಇನ್ನೂ ಆಳದ ನೆಲೆಯಲ್ಲಿ ಪರಿಶೀಲಿಸುವುದಾದರೆ ಈ ಸ್ಥೂಲ ಸಿದ್ಧಾಂತಗಳು ಒಂದಲ್ಲ ಒಂದು ಪ್ರಮುಖ ಸೈದ್ಧಾಂತಿಕ ಪರಂಪರೆಯ ಗೃಹೀತಗಳು ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುತ್ತವೆ. ಈ ಪರಂಪರೆಗಳು

‘ರೂಢಮಾದರಿ(paradigms)’ಗಳಂತೆಯೇ ವರ್ತಿಸುತ್ತವೆ. ಇದನ್ನು ಥಾಮಸ್ ಕುನ್ಹ್ (Thomas Kuhn) ತನ್ನ *‘The Structure of Scientific Revolutions (ದಿ ಸ್ಟ್ರಕ್ಚರ್ ಆಫ್ ಸೈಂಟಿಫಿಕ್ ರೆವಲ್ಯೂಷನ್ಸ್)’*(೧೯೬೨) ಕೃತಿಯಲ್ಲಿ ವಿವರಿಸುತ್ತಾನೆ. ರೂಢಮಾದರಿ ಎಂಬುದು ಸಂಬಂಧಿತ ತತ್ವಗಳ, ವಿಚಾರಗಳ ಹಾಗೂ ಸಿದ್ಧಾಂತಗಳ ಸಮುಚ್ಛಯವಾಗಿದ್ದು ಇದು ಬೌದ್ಧಿಕ ಶೋಧನೆಯ ಪ್ರಕ್ರಿಯೆಯನ್ನು ರೂಪಿಸಿಕೊಳ್ಳಲು ನೆರವಾಗುತ್ತದೆ. ಪರಿಣಾಮವಾಗಿ ಒಂದು ‘ರೂಢಮಾದರಿ’ಯು ಜ್ಞಾನದ ಹುಡುಕಾಟಕ್ಕೆ ಅಗತ್ಯವಿರುವ ಒಂದು ಚೌಕಟ್ಟನ್ನು ನಿರ್ಮಿಸಿಕೊಡುತ್ತದೆ. ಇದನ್ನು ಕೇನ್ಸ್ ಸಿದ್ಧಾಂತದ (Keynesianism) ಬದಲಾಗಿ ಹಣಕಾಸು ತತ್ವವನ್ನು (monetarism - ಸಮಾಜದಲ್ಲಿ ನಾಣ್ಯಗಳ ಚಲಾವಣೆಯನ್ನು ನಿಯಂತ್ರಿಸುವಲ್ಲಿ ಸರ್ಕಾರದ ಪಾತ್ರಕ್ಕೆ ಪ್ರಾಮುಖ್ಯತೆ ನೀಡುವ ಹಣ ಕಾಸಿಗೆ ಸಂಬಂಧಿಸಿದ ಆರ್ಥಿಕಶಾಸ್ತ್ರ) ಮುನ್ನೆಲೆಗೆ ತಂದಿರುವುದನ್ನು (ಮತ್ತು ಅಲ್ಲಿಂದಾಚೆಗೆ ನವ ಕೇನ್ಸ್ ಸಿದ್ಧಾಂತಕ್ಕೆ ಹಿಂದಿರುಗುವುದನ್ನು) ಅರ್ಥಶಾಸ್ತ್ರದಲ್ಲಿ ಕಾಣಬಹುದು; ಸಾರಿಗೆಗೆ ಸಂಬಂಧಿಸಿದ ನೀತಿಯಲ್ಲಿ ವ್ಯಕ್ತವಾದ ಪರಿಸರ ಕಲ್ಪನೆಗಳ ಕಾಳಜಿಗಳಲ್ಲಿ ಇದನ್ನು ಗುರುತಿಸಬಹುದು.

ಕುನ್ಹ್ ಪ್ರಕಾರ ಪ್ರಾಕೃತಿಕ ವಿಜ್ಞಾನಗಳು ಯಾವುದೇ ಕಾಲದಲ್ಲಾದರೂ ಒಂದು ನಿರ್ದಿಷ್ಟ ರೂಢಮಾದರಿಯಿಂದ ಪ್ರಭಾವಿತವಾಗಿರುತ್ತವೆ; ‘ಕ್ರಾಂತಿ’ಗಳ ಒಂದು ಸರಣಿಯ ಮೂಲಕ ವಿಜ್ಞಾನ ಅಭಿವೃದ್ಧಿ ಹೊಂದುತ್ತದೆ. ಈ ಪ್ರಕ್ರಿಯೆಯಲ್ಲಿ ಹಳೆಯ ರೂಢಮಾದರಿಯ ಜಾಗಕ್ಕೆ ಹೊಸ ರೂಢಮಾದರಿ ಬರುತ್ತದೆ. ಆದಾಗ್ಯೂ, ರಾಜಕೀಯ ಮತ್ತು ಸಾಮಾಜಿಕ ಶೋಧನೆಯು ವಿಭಿನ್ನವಾದವು, ಅಂದರೆ ಅವು ಪರಸ್ಪರ ವಿರೋಧಾತ್ಮಕ, ಪ್ರಶ್ನಾರ್ಹ ರೂಢಮಾದರಿಗಳ ಒಂದು ರಣರಂಗವಾಗಿರುತ್ತದೆ. ಈ ರೂಢಮಾದರಿಗಳು ವಿಶಾಲ ಸಾಮಾಜಿಕ ತತ್ವದ ರೂಪ ಪಡೆದುಕೊಳ್ಳುತ್ತದೆ, ಇವನ್ನು ‘ರಾಜಕೀಯ ಸಿದ್ಧಾಂತಗಳು’ ಎಂದು ಕರೆಯಲಾಗುತ್ತದೆ: ಉದಾರವಾದ, ಸಂಪ್ರದಾಯವಾದ, ಸಮಾಜವಾದ, ಫ್ಯಾಸಿಸಂ, ಸ್ತ್ರೀವಾದ ಇತ್ಯಾದಿ. ಪ್ರತಿಯೊಂದೂ ತನ್ನದೇ ಆದ ಸಾಮಾಜಿಕ ಅಸ್ತಿತ್ವದ ಸ್ವರೂಪವನ್ನು ವಿವರಿಸುತ್ತದೆ; ಪ್ರತಿಯೊಂದೂ ಒಂದು ನಿರ್ದಿಷ್ಟವಾದ ಲೋಕದೃಷ್ಟಿಯನ್ನು ನೀಡುತ್ತದೆ. ಈ ಸಿದ್ಧಾಂತಗಳನ್ನು ಸೈದ್ಧಾಂತಿಕ ರೂಢಮಾದರಿಗಳು ಎಂದು ವಿವರಿಸಿದಾಗ ಅದರ ರಾಜಕೀಯ ವಿಶ್ಲೇಷಣೆ ಸಂಕುಚಿತವಾದುದಾಗಿದೆ ಎಂದು, ಅಂದರೆ ಒಂದು ನಿರ್ದಿಷ್ಟ ಗುಂಪು ಅಥವಾ ವರ್ಗದ ಹಿತಾಸಕ್ತಿಯನ್ನಷ್ಟೇ ಮುನ್ನೆಲೆಗೆ ತರುತ್ತದೆ ಎಂದು, ಹೇಳಿದಂತೇನೂ ಆಗುವುದಿಲ್ಲ. ಬದಲಾಗಿ ಒಂದು ನಿರ್ದಿಷ್ಟ ಸೈದ್ಧಾಂತಿಕ ಸಂಪ್ರದಾಯದ ಅಡಿಪಾಯದ ಮೇಲೆ ರಾಜಕೀಯ ವಿಶ್ಲೇಷಣೆಯನ್ನು ನಡೆಸಲಾಗುತ್ತದೆ ಎಂದು ಒಪ್ಪಿದಂತಾಗುತ್ತದೆ ಅಷ್ಟೇ. ಬಹುತೇಕ ರಾಜಕೀಯ ವಿಜ್ಞಾನವನ್ನು ಉದಾರವಾದ ವೈಚಾರಿಕತೆಯ ಗೃಹೀತಗಳಿಗೆ ಅನುಸಾರವಾಗಿ ರೂಪಿಸಲಾಗಿದೆ. ಆದ್ದರಿಂದ ಅವು ಉದಾರವಾದಿ ಪರಂಪರೆಯ ಚಹರೆಗಳನ್ನು ಉಳಿಸಿಕೊಂಡಿವೆ.

ವಿವಿಧ ಹಂತದ ಪರಿಕಲ್ಪನಾತ್ಮಕ ವಿಶ್ಲೇಷಣೆಯನ್ನು ಚಿತ್ರ ೧.೫ರಲ್ಲಿ ವಿವರಿಸಲಾಗಿದೆ.

| | |
|---|---|
| ಪರಿಕಲ್ಪನೆಗಳು | ಉದಾಹರಣೆಗಳು: ಅಧಿಕಾರ, ಸಾಮಾಜಿಕ ವರ್ಗ, ಹಕ್ಕುಗಳು, ಕಾನೂನು |
| ಮಾದರಿಗಳು ಅಥವಾ ಸೂಕ್ಷ್ಮ ಸಿದ್ಧಾಂತಗಳು | ಉದಾಹರಣೆಗಳು: ವ್ಯವಸ್ಥಾ ವಿಶ್ಲೇಷಣೆ, ಸಾರ್ವಜನಿಕ ಆಯ್ಕೆ, ಗೇಮ್ ಥಿಯರಿ |
| ಸ್ಥೂಲ ಸಿದ್ಧಾಂತಗಳು | ಉದಾಹರಣೆಗಳು: ಪಂಚರ ಪ್ರಭುತ್ವ, ಬಹುಸಾಂಸ್ಕೃತಿಕತೆ, ಕಾರ್ಯೋದ್ದೇಶವಾದ |
| ಸೈದ್ಧಾಂತಿಕ ಸಂಪ್ರದಾಯಗಳು/ ರೂಢಮಾದರಿಗಳು | ಉದಾಹರಣೆಗಳು:<br><br>ಉದಾರವಾದ, ಮಾರ್ಕ್ಸ್‌ವಾದ, ಸ್ತ್ರೀವಾದ |

ಚಿತ್ರ 1.5 ಪರಿಕಲ್ಪನಾತ್ಮಕ ವಿಶ್ಲೇಷಣೆಯ ಮಟ್ಟಗಳು.

**ಚರ್ಚಿಸುವುದು . . .**

Commented [C11]: This is part of the below text in column.

**ರಾಜಕೀಯ ಅಧ್ಯಯನ ಮಾಡುವ ವಿದ್ಯಾರ್ಥಿಗಳು ವಸ್ತುನಿಷ್ಠವಾಗಿರಲು, ರಾಜಕೀಯವಾಗಿ ತಟಸ್ಥರಾಗಿರಲು ಪ್ರಯತ್ನಿಸಬೇಕೇ?**

ರಾಜಕೀಯದ ಬಗ್ಗೆ ಅಧ್ಯಯನ ಮತ್ತು ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದರ ನಡುವೆ, ವಿಷಯದ ಕುರಿತಾದ ಶೈಕ್ಷಣಿಕ ಆಸಕ್ತಿ ಮತ್ತು ರಾಜಕೀಯಕ್ಕೆ ಬದ್ಧವಾಗಿರುವುದು ಅಥವಾ ರಾಜಕೀಯವಾಗಿ ತೊಡಗಿಕೊಳ್ಳುವಿಕೆಯ ನಡುವೆ ಒಂದು ಕಟ್ಟುನಿಟ್ಟಾದ ಗೆರೆ ಎಳೆಯಿತಕ್ಕದ್ದು ಎಂದು ಬಹುತೇಕರು ಭಾವಿಸುತ್ತಾರೆ. ಆದರೆ ಈ ವ್ಯತ್ಯಾಸವನ್ನು ಮಾಡಲು ಸಾಧ್ಯವೇ? ನಾವು (ಶಿಕ್ಷಕರು ಮತ್ತು ವಿದ್ಯಾರ್ಥಿಗಳು) 'ವೈಜ್ಞಾನಿಕ' ವಸ್ತುನಿಷ್ಠತೆಯೊಂದಿಗೆ ತಟಸ್ಥ ನೆಲೆಯಲ್ಲಿ ನಿಂತು ರಾಜಕೀಯ ಅಧ್ಯಯನದಲ್ಲಿ ತೊಡಗಲು ಸಾಧ್ಯವೇ? ಅಥವಾ ರಾಜಕೀಯದಲ್ಲಿ ಆಸಕ್ತಿ ಮತ್ತು ಬದ್ಧತೆಗಳು ಅನಿವಾರ್ಯವಾಗಿ ಸಂಬಂಧ ಹೊಂದಿರುತ್ತವೆ ಮತ್ತು

ರಾಜಕೀಯ ಬದ್ಧತೆಯೇ ಕ್ರಮೇಣ ರಾಜಕೀಯ ಗ್ರಹಿಕೆಯನ್ನು ಉಂಟು ಮಾಡುತ್ತದೆ ಎಂದು ಒಪ್ಪಿಕೊಳ್ಳಬೇಕೇ?

| ಹೌದು | ಇಲ್ಲ |
|---|---|
| **ವಿವರಿಸುವ ಅಪೇಕ್ಷೆ.** | **ತಾಟಸ್ಥ್ಯವೆಂಬ ಮಿಥ್ಯೆ.** |
| ರಾಜಕೀಯ ಬಗ್ಗೆ ಅಧ್ಯಯನ ಹಾಗೂ ಸಕ್ರಿಯವಾಗಿ ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದು ಇವೆರಡರ ಉದ್ದೇಶಗಳೇ ಬೇರೆ ಬೇರೆಯಾಗಿದೆ – ಅಥವಾ ಬೇರೆ ಬೇರೆಯಾಗಿರತಕ್ಕದ್ದು. ರಾಜಕೀಯದ ಬಗ್ಗೆ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಎಲ್ಲಕ್ಕಿಂತ ಮಿಗಿಲಾಗಿ ರಾಜಕೀಯ ಜಗತ್ತನ್ನು ತಿಳಿದುಕೊಂಡು ವಿವರಿಸಲು (ಇದು ಬಹಳ ಸಂಕೀರ್ಣವಾದ ಗೊಂದಲಮಯವಾದ ವಿಷಯವಾಗಿದೆ) ಪ್ರಯತ್ನಿಸಬೇಕು. ವಿಷಯಗಳನ್ನು ಅರ್ಥೈಸಿಕೊಳ್ಳಬೇಕಾದ ಕಾರಣ ಅವರು ತಮ್ಮ ಎಲ್ಲ ವೈಯಕ್ತಿಕ ಆದ್ಯತೆಯನ್ನು ಗೌಣವಾಗಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ, ರಾಜಕೀಯದಲ್ಲಿ ತೊಡಗಿಸಿಕೊಂಡವರು (ರಾಜಕಾರಣಿಗಳು, ಕಾರ್ಯಕರ್ತರು ಮುಂತಾದವರು) ತಮ್ಮ ಗಾಢ ನಂಬಿಕೆ ಅಥವಾ ಆದ್ಯತೆಗಳಿಗೆ ಅನುಸಾರವಾಗಿ ರಾಜಕೀಯ ಜಗತ್ತನ್ನು ಮರುರೂಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುತ್ತಾರೆ. ಪರಿಣಾಮವಾಗಿ ರಾಜಕೀಯ ದೃಢ ನಂಬಿಕೆಗಳು ಜನರನ್ನು 'ಅನನುಕೂಲಕರ' ಸತ್ಯಗಳಿಗೆ ಕುರುಡರನ್ನಾಗಿಸುತ್ತವೆ, ರಾಜಕೀಯ ಪ್ರಚಾರದ ಅಗತ್ಯಗಳಿಗೆ ರಾಜಕೀಯ ವಿಶ್ಲೇಷಣೆಯನ್ನು | ಪ್ರಾಕೃತಿಕ ವಿಜ್ಞಾನಿಗಳು ತಮ್ಮ ಅಧ್ಯಯನವನ್ನು ವಸ್ತುನಿಷ್ಠವಾದ, ನಿಷ್ಪಕ್ಷಪಾತವಾದ ನೆಲೆಯಲ್ಲಿ ನಿಂತು ಕೈಗೊಳ್ಳಬಹುದೇನೋ. ಆದರೆ ರಾಜಕೀಯ ಅಧ್ಯಯನದಲ್ಲಿ ಇದು ಅಸಾಧ್ಯದ ಕೆಲಸವಾಗಿದೆ. ನಾವು ಯಾವುದೇ ರೀತಿಯಲ್ಲಿ ರಾಜಕಾರಣವನ್ನು ವ್ಯಾಖ್ಯಾನಿಸಿದರೂ ಅದು ನಾವು ಬದುಕುತ್ತಿರುವ ಮತ್ತು ಬೆಳೆದುಬಂದಂತಹ ಸಮಾಜದ ರಚನೆ ಹಾಗೂ ಕಾರ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪರಿಶೀಲಿಸುತ್ತದೆ. ನಮ್ಮ ಕೌಟುಂಬಿಕ ಹಿನ್ನೆಲೆ, ಸಾಮಾಜಿಕ ಅನುಭವ, ಆರ್ಥಿಕ ಸ್ಥಿತಿಗತಿ, ರಾಜಕೀಯ ಒಲವು ನಿಲುವುಗಳು ನಾವು ಅಧ್ಯಯಿಸಲು ಅಪೇಕ್ಷಿಸುವ ರಾಜಕೀಯ ಜಗತ್ತಿನ ಕುರಿತು ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಪೂರ್ವಗ್ರಹಗಳನ್ನು ಸೃಷ್ಟಿಸಿರುತ್ತದೆ. ನಿಶ್ಚಯವಾಗಿ, ವಿಶ್ವಾಸಾರ್ಹ ಜ್ಞಾನಕ್ಕಿರುವ ಬಹುದೊಡ್ಡ ಅಪಾಯ ಬಹುಶಃ ಪೂರ್ವಗ್ರಹಗಳಲ್ಲ, ಬದಲಾಗಿ ಪೂರ್ವಗ್ರಹಗಳಿವೆ ಎಂಬುದನ್ನು ಅರಿತು ಒಪ್ಪಿಕೊಳ್ಳಲು ವಿಫಲರಾದಾಗ. ಆ ವೈಫಲ್ಯ ರಾಜಕೀಯ ತಾಟಸ್ಥ್ಯದಂತಹ ನಮ್ಮ ಹುಸಿ ಹೇಳಿಕೆಗಳಲ್ಲಿ ಪ್ರತಿಬಿಂಬಿತವಾಗುತ್ತಿರುತ್ತದೆ. |

| | |
|---|---|
| ಮುಡಿಪಾಗಿಡಿಸಲು ಅನುವು ಮಾಡಿಕೊಡುತ್ತದೆ. | |
| **ವಸ್ತುನಿಷ್ಠ ಜ್ಞಾನ.**<br><br>ಜ್ಞಾನಾರ್ಜನೆಗೆ ಒಂದು ವಿಧಾನವಿದೆ. ಅದು ವೈಜ್ಞಾನಿಕ ವಿಧಾನದ ಜ್ಞಾನಾರ್ಜನೆಯ ಕ್ರಮವಾಗಿದ್ದು ಅದಕ್ಕೆ ಸರಿಸಟಿಯಾಗಿರುವಂತಹದು ಯಾವುದೂ ಇಲ್ಲ ಎನ್ನಬಹುದು. ಇದನ್ನು ರಾಜಕಾರಣ(ಅಥವಾ 'ರಾಜಕೀಯ ವಿಜ್ಞಾನ')ವನ್ನೂ ಒಳಗೊಂಡಂತೆ ಎಲ್ಲಾ ಕಲಿಕಾ ಕ್ಷೇತ್ರಗಳಿಗೂ ಅನ್ವಯಿಸತಕ್ಕದ್ದು. ಗಮನಿಸುವುದು, ಅಳೆಯುವುದು, ಪ್ರಯೋಗ ಮಾಡುವುದು ಇವೇ ಮುಂತಾದ ವೈಜ್ಞಾನಿಕ ವಿಧಾನದ ಮೂಲಕ ನಮ್ಮ ಲೋಕಜ್ಞಾನದ ನಿಕಷದಿಂದ ಅನುಮಾನಿತ ಸಿದ್ಧಾಂತಗಳನ್ನು ಪರಿಶೀಲಿಸಲಾಗುತ್ತದೆ ಅಥವಾ ಅದನ್ನು ಹುಸಿ ಎಂದು ರುಜುವಾತು ಮಾಡಲಾಗುತ್ತದೆ. ವೈಜ್ಞಾನಿಕ ತತ್ವಗಳ ಹಿನ್ನೆಲೆಯಲ್ಲಿ ಈ ವ್ಯವಸ್ಥಿತವಾದ ಜಿಜ್ಞಾಸೆಯೊಂದೇ ಜ್ಞಾನೋತ್ಪತ್ತಿಗೆ ಮತ್ತು ಜ್ಞಾನಸಂಚಯಕ್ಕೆ ವಿಶ್ವಾಸಾರ್ಹವಾದ ಮಾರ್ಗವಾಗಿದೆ. ಇದನ್ನು ನಿಷ್ಪಕ್ಷಪಾತ ವಿಧಾನದ ಮೂಲಕ ಪರಿಶೀಲಿಸುವ ಕಾರಣ ಇದು 'ವಸ್ತುನಿಷ್ಠ' ಜ್ಞಾನವಾಗಿದೆ. ಇಲ್ಲಿ ಮೌಲ್ಯಮುಕ್ತವೆಂದರೆ, ಪ್ರಾಯೋಗಿಕ ಪ್ರಶ್ನೆಗಳಲ್ಲಿ ಮಾತ್ರ ಆಸಕ್ತಿ ಹೊಂದಿರುತ್ತದೆ ಯಾವುದೇ ಪ್ರಮಾಣಕ ತೀರ್ಮಾನಗಳನ್ನು ಮಾಡಲು ಪ್ರಯತ್ನಿಸುವುದಿಲ್ಲ. | **ವಿಮೋಚನಾತ್ಮಕ ಜ್ಞಾನ.**<br><br>ಎಲ್ಲೋ ಕೆಲವರು ಅಪರೂಪಕ್ಕೆ ಜ್ಞಾನೈಕ ನಿಷ್ಠೆಯಿಂದ ನಿರ್ಲಿಪ್ತವಾಗಿ ರಾಜಕೀಯ ಅಧ್ಯಯನದ ಕಡೆಗೆ ಒಲವು ತೋರಿಸುತ್ತಾರೆ. ಅಂತಹವರು ಯಾವುದೋ ಒಂದು ಉದ್ದೇಶಕ್ಕಾಗಿ ಜ್ಞಾನಾರ್ಜನೆ ಮಾಡುತ್ತಿರುತ್ತಾರೆ ಮತ್ತು ಆ ಉದ್ದೇಶ ಅಪರಿಣಾಮಿಯಾಗಿ ಯಾವುದಾದರೂ ಒಂದು ಪ್ರಮಾಣಕ ಅಂಶವನ್ನು ಒಳಗೊಂಡಿರುತ್ತದೆ. ಈ ಕುರಿತು ಕಾರ್ಲ್‌ಮಾರ್ಕ್ಸ್‌ನ ಪ್ರಸಿದ್ಧ ಉಕ್ತಿಯೊಂದಿದೆ, 'ತತ್ವಜ್ಞಾನಿಗಳು ಪ್ರಪಂಚವನ್ನು ವಿಧವಿಧವಾಗಿ ವ್ಯಾಖ್ಯಾನಿಸಿದ್ದಾರೆ. ಆದರೆ ಪ್ರಶ್ನೆ ಇರುವುದು ಪ್ರಪಂಚವನ್ನು ಬದಲಾಯಿಸುವುದು ಹೇಗೆ ಎಂಬುದರಲ್ಲಿ'. ಈ ವಿಧಾನವನ್ನು ಆಧುನಿಕ ವಿಮರ್ಶಾತ್ಮಕ ಸಿದ್ಧಾಂತಿಗಳು ಬಹು ಶ್ರದ್ಧೆಯಿಂದ ಅಳವಡಿಸಿಕೊಂಡಿದ್ದಾರೆ. ಇವರು ವಿಮೋಚನಾ ರಾಜಕಾರಣಕ್ಕೆ ಪೂರ್ತಿಯಾಗಿ ಬದ್ಧರಾಗಿರುತ್ತಾರೆ. ವಿಮರ್ಶಾತ್ಮಕ ಸಿದ್ಧಾಂತದ ಮುಖ್ಯ ಉದ್ದೇಶ ದೇಶಿಯ ಹಾಗೂ ಜಾಗತಿಕ ರಾಜಕಾರಣದಲ್ಲಿ ದಬ್ಬಾಳಿಕೆ, ಅನ್ಯಾಯಗಳ ವ್ಯವಸ್ಥೆಯನ್ನು ಅನಾವರಣ ಮಾಡುವುದಾಗಿದೆ. ವ್ಯಕ್ತಿಗತ ಹಾಗೂ ಸಾಮುದಾಯಿಕ ವಿಮೋಚನೆ ಇಂತಹ ಸಿದ್ಧಾಂತದ ವಿಧಾನದ ಮೂಲ ಉದ್ದೇಶವಾಗಿರುತ್ತದೆ. |
| **ಮುಕ್ತ ವಿಚಾರವಂತರು.**<br><br>ಶಿಕ್ಷಣ ಹಾಗೂ ಬೌದ್ಧಿಕ ಜಿಜ್ಞಾಸೆಗಳು ನಿಷ್ಪಕ್ಷಪಾತವಾದ ವಿದ್ವತ್ತಿಗೆ ತರಬೇತಿಯ | **ಪರಸ್ಪರ ವಿರೋಧಾತ್ಮಕ ವಾಸ್ತವಗಳು.**<br><br>ಪ್ರತ್ಯಕ್ಷೈಕಪ್ರಮಾಣೋತ್ತರವಾದ (post-positivist) ಸಿದ್ಧಾಂತಿಗಳು ವೈಜ್ಞಾನಿಕ |


| | |
|---|---|
| ಕ್ಷೇತ್ರಗಳಾಗಿವೆ. ಇದು ಸಾಮಾಜಿಕ ಹಾಗೂ ಕೌಟುಂಬಿಕ ಹಿನ್ನೆಲೆಯಿಂದ ಪಡೆದಿರುವಂತಹ ನಂಬಿಕೆಗಳು ಮತ್ತು ಪೂರ್ವಗ್ರಹಿಕೆಗಳಿಂದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು, ಕಾಲಾಂತರದಲ್ಲಿ, ಅಂತರ ಕಾಯ್ದುಕೊಳ್ಳಲು ಅನುವು ಮಾಡಿಕೊಡುತ್ತದೆ. ಜರ್ಮನ್ ಸಮಾಜಶಾಸ್ತ್ರಜ್ಞ ಕಾರ್ಲ್ ಮ್ಯಾನ್‌ಹೈಮ್ (Karl Mannheim) (1893–1947) ವಸ್ತುನಿಷ್ಠತೆ ಎಂಬುದು 'ಸಾಮಾಜಿಕವಾಗಿ ನಿರ್ಲಿಪ್ತರಾದ ಬುದ್ಧಿಜೀವಿಗಳ' ಸುಪರ್ದಿನದ್ದಾಗಿದೆ ಮತ್ತು ಇಂತಹ ಬುದ್ಧಿಜೀವಿಗಳು ಮಾತ್ರ ಶಿಸ್ತುಬದ್ಧವಾಗಿ ನಿರ್ಲಿಪ್ತವಾಗಿ ಜಿಜ್ಞಾಸೆಯಲ್ಲಿ ತೊಡಗಿಕೊಳ್ಳಬಲ್ಲರು; ಮುಕ್ತ ಬುದ್ಧಿಜೀವಿಗಳಾಗಿ ಅವರು ಅರ್ಥಮಾಡಿಕೊಳ್ಳಲು ಬಯಸುವ ಜಗತ್ತನ್ನು ವಸ್ತುನಿಷ್ಠವಾಗಿ ನೋಡಬಲ್ಲರು ಮತ್ತು ಆ ಕಾರಣ ಮತ್ತಷ್ಟು ಸ್ಪಷ್ಟವಾಗಿ ಅವಲೋಕಿಸಬಲ್ಲರು ಎಂದು ವಾದಿಸಿದ್ದ. | ವಸ್ತುನಿಷ್ಠತೆ ಎಂಬ ಪರಿಕಲ್ಪನೆಯನ್ನೇ ಪ್ರಶ್ನಿಸುತ್ತಾರೆ. ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಒಂದಕ್ಕಿಂತಲೂ ಹೆಚ್ಚು ಮಾರ್ಗಗಳುಂಟು ಎಂದು ವಾದಿಸುತ್ತಾರೆ. ಆದ್ದರಿಂದ ಹೊರಗಿನ 'ವಾಸ್ತವ ಜಗತ್ತಿನ' ಕುರಿತು ಯಾವುದೇ ಒಂದು ವ್ಯಾಪಕ ಸತ್ಯವು ವೀಕ್ಷಕನ ನಂಬಿಕೆ, ಕಲ್ಪನೆ, ಗೃಹೀತಗಳಿಗಿಂತ ಪ್ರತ್ಯೇಕವಾಗಿ ಇರುವುದಿಲ್ಲ. ವ್ಯಕ್ತಿಯಾದವನು (ರಾಜಕೀಯ ಅಧ್ಯಯನದ ವಿದ್ಯಾರ್ಥಿ) ವಸ್ತುವಿನಿಂದ (ರಾಜಕೀಯ ಜಗತ್ತಿಗಿಂತ) ಯಾವುದೇ ವಿಶ್ವಾಸಾರ್ಹ ರೀತಿಯಲ್ಲಿ ಪ್ರತ್ಯೇಕಿಸಲಾಗುವುದಿಲ್ಲ ಎಂದ ಮೇಲೆ ನಿರ್ಲಿಪ್ತವಾದ ವಿದ್ವತ ಎಂಬುದನ್ನು ಹೆಚ್ಚೆಂದರೆ ಸಾಧಿಸಲಾಗದಂತಹ ಆದರ್ಶ ಎಂದು ಪರಿಗಣಿಸಬೇಕಾಗುತ್ತದೆ. ಏಕೆಂದರೆ ಸಾಮಾಜಿಕ ಹಾಗೂ ರಾಜಕೀಯ ವಿಶ್ಲೇಷಣೆಗಳು ಅನಿವಾರ್ಯವಾಗಿ ಮೌಲ್ಯಗಳಿಂದ ತುಂಬಿದ ಚಟುವಟಿಕೆಗಳಾಗಿರುತ್ತವೆ. |

## ಜಾಗತಿಕ ಯುಗದಲ್ಲಿ ರಾಜಕಾರಣ

### ದೇಶಿಯ /ಅಂತಾರಾಷ್ಟ್ರೀಯ ವಿಭಜನೆಗಳಿಂದ ಆಚೆಗೆ

ಪಾರಂಪರಿಕವಾಗಿ ರಾಜಕಾರಣವು ಒಂದು ಅಧ್ಯಯನ ಶಿಸ್ತಾಗಿ ಪ್ರಭುತ್ವವನ್ನು ನಿರ್ದಿಷ್ಟವಾಗಿ ಸರ್ಕಾರದ ಆಡಳಿತ ಯಂತ್ರವನ್ನು ಅಧ್ಯಯಿಸುತ್ತಾ ಬಂದಿದೆ: ಪ್ರಭುತ್ವದ ಸಾಂಸ್ಥಿಕ ಚೌಕಟ್ಟು, ಆ ಚೌಕಟ್ಟಿನೊಳಗೆ ಯಾರಿಗೆ ಅಧಿಕಾರವಿರುತ್ತದೆ, ನಿರ್ಧಾರಗಳನ್ನು ಕೈಗೊಳ್ಳುವ ಬಗೆ ಹೇಗೆ ಇತ್ಯಾದಿಗಳನ್ನು ಅಧ್ಯಯಿಸುತ್ತದೆ. ಈ ಪ್ರಭುತ್ವಾಧರಿತ ರೂಢಮಾದರಿಯು ರಾಜಕೀಯ ಅಧ್ಯಯನಕ್ಕೆ ಒಂದು ಪ್ರಾದೇಶಿಕವಾದ ವಿಶಿಷ್ಟತೆಯನ್ನು ನೀಡಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಗಡಿರೇಖೆಗಳು, ಎಲ್ಲೆಕಟ್ಟುಗಳು ಮುಖ್ಯವಾಗುತ್ತವೆ. *ದೇಶಿಯ* ರಾಜಕಾರಣದ, ಅಂದರೆ ಸುವ್ಯವಸ್ಥೆ

ಕಾಪಾಡುವುದರಲ್ಲಿ ಪ್ರಭುತ್ವದದ ಪಾತ್ರ, ತನ್ನ ಗಡಿರೇಖೆಯೊಳಗೆ ನಿಯಮ, ನಿಬಂಧನೆಗಳನ್ನು ಕಾರ್ಯಗತಗೊಳಿಸುವುದು ಇತ್ಯಾದಿಗಳ ಅಧ್ಯಯನ ಮತ್ತು *ಅಂತಾರಾಷ್ಟ್ರೀಯ* ರಾಜಕಾರಣಗಳ, ಅಂದರೆ ಪ್ರಭುತ್ವಗಳ ನಡುವಿನ ಸಂಬಂಧಗಳ ಕುರಿತಾದ ಅಧ್ಯಯನಗಳ ನಡುವಿನ ವ್ಯತ್ಯಾಸವನ್ನು ವಿವೇಚಿಸುವಾಗ ಇದು ವಿಶೇಷವಾಗಿ ಮುಖ್ಯವಾಗುತ್ತದೆ. ಈ ಅರ್ಥದಲ್ಲಿ ಸಾರ್ವಭೌಮತೆ (ನೋಡಿ ಪುಟ. 58) ಅಂದರೆ ಪ್ರಭುತ್ವದ ಸರ್ವೋಚ್ಚ ಅಥವಾ ಪ್ರಶ್ನಾತೀತ ಅಧಿಕಾರವು ರಾಜಕಾರಣದ 'ಒಳಗನ್ನು' ರಾಜಕಾರಣದ 'ಹೊರಗಿ'ನಿಂದ ವಿಭಜಿಸುವ ಬಲಿಷ್ಠವಾದ ಗೋಡೆಯಾಗಿದೆ. ಈ ದೇಶಿಯ/ಅಂತಾರಾಷ್ಟ್ರೀಯ ಅಥವಾ 'ಒಳಗು/ಹೊರಗು' ಎಂಬ ವಿಂಗಡಣೆ ರಾಜಕೀಯದ ಪರಸ್ಪರಕ್ರಿಯೆಯ ಎರಡು ವಿಭಿನ್ನ ಕ್ಷೇತ್ರಗಳೆಂದು ನಾವು ಪಾರಂಪರಿಕವಾಗಿ ನಂಬಿಕೊಂಡು ಬಂದಿರುವ ಕಲ್ಪನೆಯನ್ನೂ ಪ್ರತ್ಯೇಕಿಸುತ್ತದೆ. (ನೋಡಿ ಚಿತ್ರ 1.6).




ಚಿತ್ರ 1.6 ಪ್ರಾದೇಶಿಕ ರಾಜಕೀಯದ ವ್ಯತಿರಿಕ್ತ ಮಾದರಿಗಳು

ದೇಶಿಯ ವಲಯದೊಳಗೆ ಪ್ರಭುತ್ವವು ಮೇಲಿನಿಂದ ಕಾನೂನನ್ನು ಹೇರುವ ಕಾರಣ 'ಒಳಗಿನ' ರಾಜಕಾರಣವು ವ್ಯವಸ್ಥಿತ ಮತ್ತು ನಿಯಂತ್ರಿತ ಸ್ವಭಾವವನ್ನು ಹೊಂದಿದ್ದರೆ 'ಹೊರಗಿನ' ರಾಜಕಾರಣವು ಅರಾಜಕ ಸ್ವಭಾವದ್ದಾಗಿದೆ. ಅಂತಾರಾಷ್ಟ್ರೀಯ ವಲಯದಲ್ಲಿ ಪ್ರಭುತ್ವದ ಸಾರ್ವಭೌಮತ್ವಕ್ಕಿಂತ ಮಿಗಿಲಿನ ಅಧಿಕಾರಕೇಂದ್ರವಿಲ್ಲ ಎಂಬ ವಾಸ್ತವದಿಂದ ಈ ಗುಣವನ್ನು ಹೊಂದಿದೆ. ಪ್ರಭುತ್ವಾಧಾರಿತ ರೂಢಮಾದರಿಯು ನೆಲೆಗೊಳಿಸಿರುವ ಪ್ರಾದೇಶಿಕ ವಿಂಗಡಣೆಯು 'ರಾಜಕೀಯ ವಿಜ್ಞಾನ ಮತ್ತು 'ಅಂತಾರಾಷ್ಟ್ರೀಯ ಸಂಬಂಧಗಳ' ನಡುವಿನ ಈ ಸಾಂಪ್ರದಾಯಿಕ ಉಪ ಅಧ್ಯಯನ ಶಿಸ್ತಿನ ಕಾರ್ಯ ವಿಂಗಡಣೆಯಲ್ಲೂ ಕಾಣಸಿಗುತ್ತದೆ. ರಾಜಕೀಯ ವಿಜ್ಞಾನವು

**Commented [C12]:** Figure 1.6 was missing. Has been done in Adobe photoshop programme at DTP. To centre it

ಪ್ರಭುತ್ವವನ್ನು ರಾಜಕೀಯ ಜಗತ್ತಿನೊಳಗಿನ ಸ್ಥೂಲ ಹಂತದಲ್ಲಿ ಕಾರ್ಯನಿರ್ವಾಹಕದಂತೆ ಕಂಡರೆ ಅಂತಾರಾಷ್ಟ್ರೀಯ ಸಂಬಂಧದ ಅಧ್ಯಯನವು ಪ್ರಭುತ್ವವನ್ನು ಅಂತಾರಾಷ್ಟ್ರೀಯ ವ್ಯಾಪ್ತಿಯೊಳಗಿನ ಸೂಕ್ಷ್ಮ ಹಂತದಲ್ಲಿ ಕಾರ್ಯನಿರ್ವಾಹಕದಂತೆ ಕಾಣುತ್ತದೆ.

ಆದಾಗ್ಯೂ, ಪ್ರಭುತ್ವಾಧಾರಿತ ರೂಢಮಾದರಿಯ ರಾಜಕಾರಣವು ಹೊಸ ಬದಲಾವಣೆ, ಬೆಳವಣಿಗೆಗಳ ಕಾರಣದಿಂದಾಗಿ, ಗಮನಾರ್ಹವಾಗಿ ಜಾಗತೀಕರಣದಿಂದಾಗಿ  ಒತ್ತಡಕ್ಕೆ ಒಳಪಟ್ಟಿದೆ (ನೋಡಿ ಪುಟ. 142). ನಿರ್ದಿಷ್ಟವಾಗಿ, **ರಾಷ್ಟ್ರದ ಎಲ್ಲೆಗಳಿಂದಾಚೆ(transnational)**ಯ ನೆಲೆಯಲ್ಲಿ ವ್ಯವಹಾರಗಳು ಅಂದರೆ ಜನಗಳ, ಸರಕುಗಳ, ಹಣದ, ಮಾಹಿತಿಯ, ಚಿಂತನೆಯ ಹರಿವು ಮತ್ತು ಕೊಳು-ಕೊಡುಗೆಗಳಲ್ಲಿ ಸಾಕಷ್ಟು ಬೆಳವಣಿಗೆಗಳಾಗಿವೆ. ರಾಷ್ಟ್ರಗಳ ಗಡಿಗಳು ಹೆಚ್ಚು 'ಪ್ರವೇಶಸಾಧ್ಯ'ವಾಗಿದ್ದರಿಂದ ದೇಶಿಯ/ಅಂತಾರಾಷ್ಟ್ರೀಯ ಅಥವಾ ಒಳಗು/ಹೊರಗು ಎಂಬ ಸಾಂಪ್ರದಾಯಿಕ ವಿಂಗಡಣೆಯನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಇದನ್ನು ೨೦೦7-೨೦೦9ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ವ್ಯಾಪಕ ಮತ್ತು ಬಲವಾದ ಪರಿಣಾಮ ತೋರಿಸಿದಂತೆ ಜಗತ್ತಿನ ಯಾವುದೋ ಮೂಲೆಯಲ್ಲಿ ನಡೆಯುವ ಘಟನೆಗಳು ದೇಶಿಯ ಆರ್ಥಿಕತೆಯನ್ನು ಸಾಕಷ್ಟು ದುರ್ಬಲಗೊಳಿಸುವ ಹಿನ್ನೆಲೆಯಲ್ಲಿ ವಿವರಿಸಬಹುದಾಗಿದೆ. ಹಾಗೆಯೇ ಡಿಜಿಟಲ್ ತಂತ್ರಜ್ಞಾನದ ವ್ಯಾಪಕ ಬಳಕೆಯ ಹಿನ್ನೆಲೆಯಲ್ಲಿಯೂ ಇದನ್ನು ವಿವರಿಸಬಹುದಾಗಿದೆ. ಈ ಡಿಜಿಟಲ್ ತಂತ್ರಜ್ಞಾನವು ಮೊಬೈಲ್ ಹಾಗೂ ಇಂಟರ್‌ನೆಟ್ ನಂತಹ ಸಾಧನಗಳ ಮೂಲಕ ಜನ ಪರಸ್ಪರರೊಂದಿಗೆ ಸಂವಹನ ಮಾಡುವ ಅವಕಾಶ ಕಲ್ಪಿಸಿದ್ದು ಇದನ್ನೆಲ್ಲ ನಿಯಂತ್ರಣದಲ್ಲಿ ಇರಿಸಿಕೊಳ್ಳುವುದು ರಾಷ್ಟ್ರೀಯ ಸರ್ಕಾರಗಳಿಗೆ ಸವಾಲಿನ ವಿಷಯವಾಗಿದೆ. ಹೆಚ್ಚುತ್ತಿರುವ ಪ್ರಾದೇಶಿಕ ಪರಸ್ಪರಾವಲಂಬನೆಯ ಪ್ರಮಾಣ, ವ್ಯಾಪ್ತಿ, ಕೆಲವೊಮ್ಮೆ ಸ್ವರೂಪವೂ ಸಹ,  ಕೆಲವರನ್ನು ರಾಜಕೀಯ ವಿಜ್ಞಾನ ಹಾಗೂ ಅಂತಾರಾಷ್ಟ್ರೀಯ ಸಂಬಂಧಗಳ ನಡುವಿನ ಅಧ್ಯಯನದ ವಿಂಗಡಣೆ ಪೂರ್ತಿಯಾಗಿ ವಿಲೀನವಾಗಿಬಿಡಬೇಕು ಎಂದು ಆಲೋಚಿಸಲು ಪ್ರೋತ್ಸಾಹಿಸಿದೆ (Hay (ಹೇ), ೨೦1೦)). ರಾಜಕೀಯ ಚಟುವಟಿಕೆಗಳು ಪ್ರತ್ಯೇಕ ದೇಶಿಯ ಮತ್ತು ಅಂತಾರಾಷ್ಟ್ರೀಯ ವಲಯದೊಳಗೆ ಸಂಭವಿಸುವುದಿಲ್ಲ ಎಂದು ಪರಿಗಣಿಸುವ ಪಕ್ಷದಲ್ಲಿ ಬಹುಶಃ ರಾಜಕಿಯವನ್ನು ಜಾಗತಿಕ, ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಸ್ಥಳೀಯ ವಲಯಗಳ ನಡುವೆ ಇರುವ ಪರಸ್ಪರ ಸಂಬಂಧಗಳು ಹಾಗೂ ಅತಿವ್ಯಾಪನೆಗಳು ಎಂದು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದೇ ಸೂಕ್ತವೆನಿಸುತ್ತದೆ (ನೋಡಿ ಚಿತ್ರ 1.6). ಆದಾಗ್ಯೂ,ರಾಜಕೀಯವನ್ನು ಈ ದೃಷ್ಟಿಯಿಂದ ನೋಡುವುದೇ ಹೊಸದು ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಏಕೆಂದರೆ ದೇಶಿಯ/ಅಂತಾರಾಷ್ಟ್ರೀಯ ವಿಂಗಡಣೆಯನ್ನು ಜಡ ಸಿದ್ಧಾಂತದಂತೆ ನೋಡುವುದರ ಬದಲಾಗಿ, ಸಾಮಾನ್ಯವಾಗಿ ಒಂದು ನಿರ್ದಿಷ್ಟ ವಲಯ ಮತ್ತು ಪರಸ್ಪರಕ್ರಿಯೆಗಳ ಸಮುಚ್ಚಯದ ಆದ್ಯತೆಯನ್ನು ನಿರ್ಧರಿಸುವ ರೀತಿ ಎಂಬಂತೆ ನೋಡಲಾಗಿದೆ. ಉದಾಹರಣೆಗೆ, ಪ್ರಭುತ್ವದ ಸಾಂವಿಧಾನಿಕ ರಚನೆಯು ಅದರ ಬಾಹ್ಯ ವರ್ತನೆಯ ಮೇಲೆ ಪ್ರಭಾವ ಬೀರುತ್ತದೆ ಎಂದು

ಉದಾರವಾದಿ ಅಂತಾರಾಷ್ಟ್ರೀಯ ಸಂಬಂಧಗಳ ಸಿದ್ಧಾಂತಿಗಳು ವಾದಿಸಿದರೆ ಕ್ರಾಂತಿಯ ಕಾರಣಗಳನ್ನು ಅಧ್ಯಯನ ಮಾಡುವ ರಾಜಕೀಯ ವಿಜ್ಞಾನಿಗಳು ಯುದ್ಧ ಮತ್ತು ದಾಳಿಗಳು ಕೆಲವೊಮ್ಮೆ ಅದರ ತಲೆದೋರಿಕೆಗೆ ನಿರ್ಣಾಯಕವಾದ ಅಂಶಗಳು ಎಂಬ ಸಂಗತಿಯನ್ನು ಯಾವಾಗಲೂ ಒಪ್ಪಿಕೊಂಡಿದ್ದಾರೆ.

ರಾಜಕೀಯ ವಿಶ್ಲೇಷಣೆಗೆ ಸಂಬಂಧಿಸಿದಂತೆ ಇವೆಲ್ಲ ಅಂತಿಮವಾಗಿ ನಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೆ? ರಾಜಕಾರಣವೆಂಬುದು ಜಾಗತಿಕ, ಪ್ರಾದೇಶಿಕ, ರಾಷ್ಟ್ರೀಯ, ಸ್ಥಳೀಯ ನೆಲೆಗಳಲ್ಲಿ ನಡೆಯುವುದಷ್ಟೇ ಅಲ್ಲ ಅದರ ಜೊತೆಗೆ ಮತ್ತು ಮುಖ್ಯವಾಗಿ ಈ ಹಲವು ನೆಲೆಗಳ ನಡುವಿನ ಸಂಬಂಧದಲ್ಲೂ ರಾಜಕೀಯವೆಂಬುದು ನಡೆಯುತ್ತದೆ ಎಂದು ಒಪ್ಪಿಕೊಳ್ಳುವುದರ ಒಂದು ಸೂಕ್ಷ್ಮಪರಿಣಾಮವೇನೆಂದರೆ ಇದು ತನ್ನ ಮಾನದಂಡಗಳನ್ನು ಹಾಗೂ ಸಂಕೀರ್ಣತೆಗಳನ್ನು ಸಂತತವಾಗಿ ವಿಸ್ತರಿಸಿಕೊಳ್ಳುವ ರೀತಿಯಿಂದಾಗಿ ಇವೆಲ್ಲವನ್ನೂ ಸಮಗ್ರವಾಗಿ ಗ್ರಹಿಸಿ ವಿವೇಚಿಸುವುದು ಕಷ್ಟಸಾಧ್ಯ ಮಾತ್ರವಲ್ಲ ಅಸಾಧ್ಯವೂ ಆಗುತ್ತದೆ ಎಂದು ಹೇಳಬಹುದು. ಏಕೆಂದರೆ ಇಲ್ಲಿ ನಾವು ಚುನಾವಣೆಗಳು, ಪಕ್ಷರಾಜಕೀಯಗಳು, ಸಂವಿಧಾನಗಳು, ಸಂಸತ್ತುಗಳು ಮತ್ತು ಇವೇ ಮುಂತಾದ ರಾಷ್ಟ್ರೀಯ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಜೊತೆಗೆ ಯುದ್ಧ ಮತ್ತು ಶಾಂತಿ, ಅಣು ಪ್ರಸರಣ, ಭಯೋತ್ಪಾದನೆ, ಬಡತನ ಮತ್ತು ಅಭಿವೃದ್ಧಿ, ಅಂತಾರಾಷ್ಟ್ರೀಯ ಸಂಘಟನೆಗಳು ಇತ್ಯಾದಿ ವಿಷಯಗಳನ್ನು ಅಧ್ಯಯನ ಮಾಡುವುದನ್ನೂ ಒಳಗೊಳ್ಳುತ್ತವೆ. ಅಲ್ಲದೇ, ಜಾಗತಿಕ ಬೆಳವಣಿಗೆಗಳು ದೇಶಿಯ/ಅಂತಾರಾಷ್ಟ್ರೀಯ ಎಂಬ ವಿಭಜನೆಯನ್ನು ನಿಸ್ಸಂಶಯವಾಗಿ ತೆಳುಗೊಳಿಸಿದೆಯಾದರೂ ಈ ವಿಭಜನೆ ಪೂರ್ತಿಯಾಗಿ ಅರ್ಥಹೀನ ಎಂದು ವಾದಿಸಲಾಗದು. ರಾಜಕೀಯ – ಹಾಗೆಯೆ ಉಳಿದ ವಿಷಯಗಳು – ಎಲ್ಲವೂ ಜಾಗತಿಕ ಸುಳಿಯಲ್ಲಿ ಪರಸ್ಪರ ಸಂಬಂಧಿಸಿವೆ ಮತ್ತು ಇದು ಪರಿಣಾಮಕಾರಿಯಾಗಿ ಎಲ್ಲ ಬಿಡಿಭಾಗಗಳನ್ನೂ ಅವಿನಾಭಾವ ಮತ್ತು ಒಂದೇ ಜಾಗತಿಕ ಅಸ್ತಿತ್ವವಾಗಿ ಒಗ್ಗೂಡಿಸುತ್ತದೆ ಎನ್ನುವ ಅವಾಸ್ತವಿಕ ಕಲ್ಪನೆಗಳನ್ನು ಹೊಂದಿರುವ 'ಅತಿ ಜಾಗತಿಕವಾದಿಗಳು (hyperglobalisers)' ಎನಿಸಿಕೊಂಡವರು ಮಾತ್ರ ದೇಶಿಯ ಹಾಗೂ ಜಾಗತಿಕ ವಲಯಗಳೆರಡರಲ್ಲೂ ಪ್ರಭುತ್ವ ವ್ಯವಸ್ಥೆಯು –ಇದು ಪರಿವರ್ತನೆ ಆಗುತ್ತಲೇ ಇರುತ್ತದಾದರೂ– ಬಹುಮುಖ್ಯ ಪಾತ್ರ ವಹಿಸುತ್ತವೆ ಎಂಬುದನ್ನು ಅರಿಯುವಲ್ಲಿ ವಿಫಲರಾಗುತ್ತಾರೆ. ರಾಜಕೀಯದ 'ಒಳಗ'ನ್ನು ರಾಜಕೀಯದ 'ಹೊರಗಿ'ನಿಂದ ಬೇರ್ಪಡಿಸುವ ಸಾರ್ವಭೌಮತೆಯು ಬಲಿಷ್ಠ ಗೋಡೆಯಾಗಿ ಇರದೆ ಹೋದರೂ ಸಹ ದುರ್ಬಲ ಗೋಡೆಯಾಗಿಯಾದರೂ ಉಳಿದುಕೊಳ್ಳುತ್ತದೆ. ಪ್ರಾದೇಶಿಕ ಪರಸ್ಪರಾವಲಂಬನೆಯ ಸೂಕ್ಷ್ಮಪರಿಣಾಮಗಳನ್ನು ಒಪ್ಪುವ ಈ ಪುಸ್ತಕ ಸಮಗ್ರ ಎನ್ನಬಹುದಾದ ವಿಧಾನವನ್ನು ಅನುಸರಿಸಿದೆಯಾದರೂ, ನಿರ್ದಿಷ್ಟವಾಗಿ ಪ್ರಭುತ್ವದೊಳಗಿನ ವ್ಯವಹಾರಗಳು ಮತ್ತು ಪ್ರಭುತ್ವಗಳ ನಡುವಿನ ವ್ಯವಹಾರಗಳು ಒಂದರ ಮೇಲೊಂದು ಹಿಂದೆಂದಿಗಿಂತಲೂ ಹೆಚ್ಚಿನ ಪರಿಣಾಮ ಉಂಟುಮಾಡುತ್ತಿದೆ ಎಂದು ಒಪ್ಪುತ್ತದಾದರೂ, ಇದು ಮೂಲಭೂತವಾಗಿ ದೇಶಿಯ ದೃಷ್ಟಿಕೋನದಿಂದ ರಾಜಕೀಯ ಸಂಗತಿಗಳನ್ನು ಅಧ್ಯಯಿಸುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ, ಇದರ ಜೊತೆಗಿನ ಮತ್ತೊಂದು ಸಂಪುಟವಾದ '*Global Politics (ಜಾಗತಿಕ ರಾಜಕಾರಣ)*' (2011) ಪುಸ್ತಕವು ಮೂಲಭೂತವಾಗಿ ಅಂತಾರಾಷ್ಟ್ರೀಯ ಅಥವಾ ಜಾಗತಿಕ ದೃಷ್ಟಿಕೋನದಿಂದ ರಾಜಕೀಯದ ಪರಸ್ಪರಕ್ರಿಯೆಗಳನ್ನು ಪರಿಶೀಲಿಸುತ್ತದೆ. ತತ್ಪರಿಣಾಮವಾಗಿ ಅದು ಅಂತಾರಾಷ್ಟ್ರೀಯ ಸಂಬಂಧಗಳ ಕ್ಷೇತ್ರದೊಳಗೆ ಸಾಂಪ್ರದಾಯಿಕವಾಗಿ ಅಧ್ಯಯನ ಮಾಡಿಕೊಂಡು ಬಂದಿರುವ ಚಿಂತನೆಗಳು, ವಿಷಯಗಳು ಹಾಗೂ ಸಿದ್ಧಾಂತಗಳಿಗೆ ಹೆಚ್ಚಿನ ಗಮನ ನೀಡುತ್ತದೆ.

**ಗಮನಹರಿಸಿ . . .**

Commented [C13]: Original in Box. As the text is too big and problematic to do so, it has been indented to differentiate from the main text

**ರಾಜಕಾರಣ ಮತ್ತು ಅಂತಾರಾಷ್ಟ್ರೀಯ ಸಂಬಂಧ: ಎರಡು ಅಧ್ಯಯನ ಶಿಸ್ತುಗಳೇ ಅಥವಾ ಒಂದೇ ಅಧ್ಯಯನ ಶಿಸ್ತೇ?**

ರಾಜಕಾರಣ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳು (IR) ಎರಡು ಪ್ರತ್ಯೇಕ ಅಧ್ಯಯನ ಶಿಸ್ತುಗಳೇ ಅಥವಾ ಅವೆರಡನ್ನು ಎರಡು ಉಪವಿಭಾಗಗಳಂತೆ ಪರಿಗಣಿಸಬೇಕೇ ಅಥವಾ ಅವೆರಡೂ ರಾಜಕಾರಣ ಅಥವಾ ರಾಜಕೀಯ ವಿಶ್ಲೇಷಣೆ ಎಂಬ ಹೆಸರಿನ ಒಂದೇ ವಿಶಾಲವಾದ ಅಧ್ಯಯನ ಶಿಸ್ತಿನಲ್ಲಿ ನಡೆಯುವ ವಿಶ್ಲೇಷಣೆಯ ಎರಡು ವಿಭಿನ್ನ ಹಂತಗಳಂತೆ ಪರಿಗಣಿಸಬೇಕೇ? ಬಹುತೇಕ ಸಂದರ್ಭಗಳಲ್ಲಿ ರಾಜಕೀಯ ವಿಜ್ಞಾನ ಹಾಗೂ ಅಂತಾರಾಷ್ಟ್ರೀಯ ಸಂಬಂಧಗಳ ಅಧ್ಯಯನಗಳು ಪ್ರತ್ಯೇಕವಾಗಿ ಸ್ವತಂತ್ರವಾಗಿ ಬೆಳೆದು ಬಂದವುಗಳಾಗಿವೆ. ರಾಜಕೀಯ ವಿಜ್ಞಾನವನ್ನು ಅಮೆರಿಕಾ ಮತ್ತು ಯುರೋಪ್ ಖಂಡಗಳಲ್ಲಿ ಒಂದು ಶೈಕ್ಷಣಿಕ ಅಧ್ಯಯನವನ್ನಾಗಿ ಹತ್ತೊಂಬತ್ತನೆಯ ಶತಮಾನದ ಮಧ್ಯಾವಧಿಯ ನಂತರ ಪ್ರಾರಂಭಿಸಲಾಯಿತು. ಅಂತಾರಾಷ್ಟ್ರೀಯ ಸಂಬಂಧಗಳೆಂಬ ಅಧ್ಯಯನ ವಿಷಯವಾದರೂ ಒಂದನೇ ಮಹಾಯುದ್ಧದ ನಂತರ ಬೆಳೆಯಿತು. ಇದನ್ನು ಸ್ಥಿರವಾದ ಶಾಂತಿಗೆ ಅಗತ್ಯವಿರುವ ಪೂರ್ವಭಾವಿಗಳನ್ನು ಶೋಧಿಸುವ ಆಕಾಂಕ್ಷೆಯೊಂದಿಗೆ ರೂಪಿಸಲಾಯಿತು (ಅದರ ಕೆಲಸದ ನೀತಿ ಪ್ರಸ್ತುತತೆಯ ಒಂದು ಕಾಳಜಿಯಾಗಿರುವ ಈ ವಿಷಯವನ್ನು ಇದೇ ರೀತಿ ರಾಜಕೀಯ ವಿಜ್ಞಾನಕ್ಕೆ ಎಂದೂ ಅನ್ವಯಿಸಲಾಗಿಲ್ಲ). ರಾಜಕೀಯ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳು ಎರಡು ಪ್ರತ್ಯೇಕ ಜ್ಞಾನಕ್ಷೇತ್ರಗಳಾಗಿವೆ. ಅಂದರೆ ರಾಜಕೀಯವೆಂಬುದು 'ದೇಶಿಯ' ಸಮಸ್ಯೆ, ಅಭಿವೃದ್ಧಿಗಳಿಗೆ ಸಂಬಂಧಿಸಿದ್ದಾದರೆ (ರಾಜ್ಯದೊಳಗಿನ ಆಗು ಹೋಗುಗಳಿಗೆ ಸಂಬಂಧಿಸಿದ್ದಾಗಿದೆ) ಅಂತಾರಾಷ್ಟ್ರೀಯ ಸಂಬಂಧ ಎಂಬುದು 'ಅಂತಾರಾಷ್ಟ್ರೀಯ' ಸಮಸ್ಯೆ, ಅಭಿವೃದ್ಧಿಗಳಿಗೆ ಸಂಬಂಧಿಸಿದ್ದಾಗಿದೆ (ಎರಡು ರಾಷ್ಟ್ರ ಪ್ರಭುತ್ವಗಳ ನಡುವೆ ಸಂಭವಿಸುವ ಆಗು ಹೋಗುಗಳಿಗೆ ಸಂಬಂಧಿಸಿದ್ದಾಗಿದೆ). ಹಾಗಾಗಿ ರಾಜಕಾರಣ ಮತ್ತು

ಅಂತಾರಾಷ್ಟ್ರೀಯ ಸಂಬಂಧಗಳೆರಡೂ ತಮ್ಮದೇ ಆದ ವಿಶ್ಲೇಷಣಾ ಪರಿಕರಗಳನ್ನು, ಸೈದ್ಧಾಂತಿಕ ದೃಷ್ಟಿಕೋನಗಳನ್ನು ಅಭಿವೃದ್ಧಿಪಡಿಸಿಕೊಂಡಿವೆ. ಅರ್ಥಶಾಸ್ತ್ರ ಅಥವಾ ಸಮಾಜಶಾಸ್ತ್ರಗಳಂತೆ ಅಧಿಕೃತ ಅಧ್ಯಯನ ಶಿಸ್ತಿನ ಮಟ್ಟವನ್ನು ಹೊಂದಲು ಎರಡೂ ಸಹ ಒಂದಕ್ಕೊಂದು ಸಹಾಯ ಮಾಡಿವೆ.

ಆದಾಗ್ಯೂ, ರಾಜಕಾರಣ ಮತ್ತು ಅಂತಾರಾಷ್ಟ್ರೀಯ ಸಂಬಂಧದ ನಡುವಿನ ಅಧ್ಯಯನ ಶಿಸ್ತಿನ ವಿಂಗಡಣೆಗೆ ಯಾವುದೇ ಕಟ್ಟಳೆಗಳಿಲ್ಲ. ಈ ದೃಷ್ಟಿಯಿಂದ ರಾಜಕಾರಣ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳೆಂಬ ಅಧ್ಯಯನ ಶಿಸ್ತುಗಳನ್ನು ಪ್ರತ್ಯೇಕವೆಂಬಂತಲ್ಲ, ಬದಲಾಗಿ ಪರಸ್ಪರ ಪೂರಕವೆಂಬಂತೆ ಕಾಣಬಹುದಾಗಿದೆ: ಇವೆರಡೂ ಸಹ ವಿಭಿನ್ನ ಹಂತದ (ಯಾವಾಗಲೂ ಸಂಬಂಧಿತವಾಗಿದ್ದರೂ)ಲ್ಲಿ ನಡೆಯುವ ರಾಜಕೀಯ ಪರಸ್ಪರಕ್ರಿಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತವೆಯಾದರೂ ಅವು ಒಂದೇ ರೀತಿಯ ಪ್ರಶ್ನೆಗಳನ್ನು ಕೇಳುತ್ತವೆ. ರಾಜಕಾರಣ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳೆರಡೂ ಮೂಲಭೂತವಾಗಿ ಅಧಿಕಾರ (ಅದರ ಹಂಚಿಕೆ, ಚಲಾವಣೆ, ಪರಿಣಾಮ ಇತ್ಯಾದಿ) ಕ್ಕೆ ಸಂಬಂಧಿಸಿದ ಪ್ರಶ್ನೆಗಳಲ್ಲಿ ಆಸಕ್ತಿ ಹೊಂದಿರುತ್ತವೆ. ಪ್ರಭುತ್ವವನ್ನು ರಾಜಕೀಯ ವಿಜ್ಞಾನವು ಸ್ಥೂಲ ಹಂತದ ಕಾರ್ಯನಿರ್ವಾಹಕವೆಂದೂ, ಅಂತಾರಾಷ್ಟ್ರೀಯ ಸಂಬಂಧಗಳ ಅಧ್ಯಯನ ಸೂಕ್ಷ್ಮ ಹಂತದ ಕಾರ್ಯನಿರ್ವಾಹಕವೆಂದೂ ಪರಿಭಾವಿಸುತ್ತವೆಯಾದರೂ ಎರಡೂ ಸಹ ಪ್ರಭುತ್ವದ ಸ್ವರೂಪ, ಪಾತ್ರ ಮತ್ತು ಚಟುವಟಿಕೆಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತವೆ. ಸಾಮಾಜಿಕ ಸಂಬಂಧಗಳಲ್ಲಿ ಘರ್ಷಣೆ ಹಾಗೂ ಸಹಕಾರಗಳ ನಡುವಿನ ಸಮತೋಲನದ ಕುರಿತಾದ ಪ್ರಶ್ನೆಗಳೂ ಸಹ ಎರಡೂ ಅಧ್ಯಯನ ಶಿಸ್ತುಗಳಿಗೆ ಪ್ರಮುಖ ಪ್ರಶ್ನೆಗಳಾಗಿವೆ. ನಮ್ಮ ಜಗತ್ತು ಪರಸ್ಪರಾವಲಂಬಿ ಜಗತ್ತಾಗಿ ಬೆಳೆಯುತ್ತಿರುವ ಕಾರಣದಿಂದಾಗಿ 'ದೇಶಿಯ' 'ಅಂತಾರಾಷ್ಟ್ರೀಯ' ವಿಷಯಗಳು ಒಂದರ ಮೇಲೊಂದು ಹಿಂದೆಂದಿಗಿಂತಲೂ ಅತಿಶಯವಾದ ಪರಿಣಾಮ ಉಂಟು ಮಾಡುತ್ತಿರುವುದರಿಂದ ಅಧ್ಯಯನ ಶಿಸ್ತುಗಳ ವಿಂಗಡಣೆಯ ಕಲ್ಪನೆಯು ವಿಶೇಷವಾಗಿ ಸಮಸ್ಯಾತ್ಮಕವಾಗುತ್ತಿದೆ. ಸಾಂಪ್ರದಾಯಿಕ ದೇಶಿಯ /ಅಂತಾರಾಷ್ಟ್ರೀಯ ವಿಂಗಡಣೆಗೆ ಜಾಗತೀಕರಣ, ಹವಾಮಾನ ಬದಲಾವಣೆ, ಬಹು ಹಂತದ ಆಡಳಿತ, ಭದ್ರತೆ, ಅಪರಾಧ ಇವೇ ಮುಂತಾದವು ಗಂಭೀರ ವಿಷಯಗಳಾಗಿರುವ ಕಾರಣ ಬಹುಶಃ ಅಧ್ಯಯನ ಅಥವಾ ಉಪ ಅಧ್ಯಯನ ಶಿಸ್ತುಗಳ ಅನಾವಶ್ಯಕ ವಿಭಜನೆಗಳನ್ನು ಅಲಕ್ಷಿಸಬೇಕು ಎಂದು ಅದು ಸೂಚಿಸುತ್ತದೆ (Hay(ಹೇ), ೨೦೦೨)).

**ಸಾರಾಂಶ**

- ಜನ ತಾವು ವಾಸಿಸುವ ಸ್ಥಳದಲ್ಲಿ ಕೆಲವು ಸಾಮಾನ್ಯ ನಿಯಮಗಳನ್ನು ರೂಪಿಸಿಕೊಳ್ಳುತ್ತಾರೆ, ರಕ್ಷಿಸಿಕೊಳ್ಳುತ್ತಾರೆ, ತಿದ್ದುಪಡಿ ಮಾಡಿಕೊಳ್ಳುತ್ತಾರೆ. ಮತ್ತು ಇವೆಲ್ಲದರ ಮೂಲಕ ಜನಗಳು ನಡೆಸುವ ಚಟುವಟಿಕೆಯೇ ರಾಜಕೀಯವಾಗಿದೆ. ಮೂಲತಃ ಇದೊಂದು ಸಾಮಾಜಿಕ ಚಟುವಟಿಕೆಯಾಗಿದ್ದು ಒಂದೆಡೆ ಇದು ವೈವಿಧ್ಯ–ಘರ್ಷಣೆಗಳ ಇರುವಿಕೆಯೊಂದಿಗೆ ಮತ್ತೊಂದೆಡೆ ಸಾಮೂಹಿಕವಾಗಿ ಮತ್ತು ಸಹಕಾರದ ಮೂಲಕ ಕ್ರಿಯಾಶೀಲವಾಗುವ ಸಂಕಲ್ಪದೊಂದಿಗೆ ಸಂಕೀರ್ಣವಾದ ಸಂಬಂಧವನ್ನು ಹೊಂದಿದೆ. ರಾಜಕೀಯವನ್ನು ಸಂಘರ್ಷಗಳ ನಿವಾರಣೆಯ ಹುಡುಕಾಟದಂತೆ ನೋಡುವುದು ಸೂಕ್ತವೇ ವಿನಾ ಸಂಘರ್ಷಗಳ ನಿವಾರಣೆಯಲ್ಲಿ ಸಾಧಿಸಿದ ಗೆಲುವು ಎಂಬಂತೆ ನೋಡುವುದು ಸೂಕ್ತವಲ್ಲ. ಏಕೆಂದರೆ ಎಲ್ಲ ಸಂಘರ್ಷಗಳೂ ಪರಿಹಾರವಾಗುವುದಿಲ್ಲ, ಪರಿಹಾರವಾಗುವಂತಹುದೂ ಅಲ್ಲ.
- ರಾಜಕೀಯವನ್ನು ವಿವಿಧ ಪರಂಪರೆಯ ವಿವಿಧ ಚಿಂತಕರು ವಿವಿಧ ರೀತಿಗಳಲ್ಲಿ ಅರ್ಥ ಮಾಡಿಕೊಂಡಿದ್ದಾರೆ. ರಾಜಕಾರಣವನ್ನು ಸರ್ಕಾರಿ ಆಡಳಿತದ ಒಂದು ಕಲೆಯಂತೆ ಅಥವಾ ಪ್ರಭುತ್ವಕ್ಕೆ ಸಂಬಂಧಿಸಿದ ವಿಷಯವೆಂಬಂತೆ ಕಂಡಿದ್ದಾರೆ; ಸಾರ್ವಜನಿಕ ವ್ಯವಹಾರಗಳ ನಿರ್ವಹಣೆಯಂತೆ ಕಂಡಿದ್ದಾರೆ; ವಾದ ಮತ್ತು ಒಪ್ಪಂದದ ಮೂಲಕ ಘರ್ಷಣೆಗೆ ಕಂಡುಕೊಂಡ ಪರಿಹಾರದಂತೆ ಕಂಡಿದ್ದಾರೆ; ಸಾಮಾಜಿಕ ಬದುಕಿನಲ್ಲಿ ಸಂಪನ್ಮೂಲಗಳ ಉತ್ಪಾದನೆ, ವಿತರಣೆ ಹಾಗೂ ಬಳಕೆಯಂತೆ ಕಂಡಿದ್ದಾರೆ.
- 'ರಾಜಕಾರಣ'ದ ಕ್ಷೇತ್ರದ ಬಗ್ಗೆಯೂ ಹಲವಾರು ಚರ್ಚೆಗಳಿವೆ. ಸಾಮಾಜಿಕ ಬದುಕಿನ ಸಮಗ್ರ ಸಂಘಟನೆಗೆ ಸಂಬಂಧಿಸಿದಂತೆ 'ಸಾರ್ವಜನಿಕ' ವಲಯದಲ್ಲಿ ಕ್ರಿಯಾಶೀಲವಾಗಿರುವ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಗೆ ಸಂಬಂಧಪಟ್ಟುದು ಎಂದು ಸಾಂಪ್ರದಾಯಿಕವಾಗಿ ಸಂಕುಚಿತ ದೃಷ್ಟಿಯಿಂದ ಪರಿಭಾವಿಸಲಾಗಿದೆ. ಆದಾಗ್ಯೂ ಅಧಿಕಾರ ಆಧಾರಿತ ಸಂಬಂಧ ರಚನೆಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಂಡಾಗ ರಾಜಕಾರಣವು 'ಖಾಸಗಿ' ವಲಯದಲ್ಲೂ ಕ್ರಿಯಾಶೀಲವಾಗಿರುತ್ತದೆ ಎಂದು ಕಾಣಬಹುದು.
- ರಾಜಕಾರಣವನ್ನು ಒಂದು ಶೈಕ್ಷಣಿಕ ವಿಷಯವನ್ನಾಗಿ ಅಧ್ಯಯನ ಮಾಡುವಲ್ಲಿ ಹಲವಾರು ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಇಂತಹ ಅಧ್ಯಯನ ಶಿಸ್ತುಗಳು ರಾಜಕೀಯ ತತ್ವಶಾಸ್ತ್ರವನ್ನು ಅಥವಾ ಪ್ರಮಾಣಕ ಸಿದ್ಧಾಂತಗಳ ವಿಶ್ಲೇಷಣೆಯನ್ನು, ನಿರ್ದಿಷ್ಟವಾಗಿ ಸಂಸ್ಥೆಗಳ ಹಾಗೂ ರಚನೆಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾಯೋಗಿಕ ಪರಂಪರೆಯನ್ನು, ವರ್ತನಾವಾದ ವಿಶ್ಲೇಷಣೆಯನ್ನು, ವೈಚಾರಿಕ ಆಯ್ಕೆ ಸಿದ್ಧಾಂತವನ್ನು, ತಥಾಕಥಿತ ಸಾಂಸ್ಥಿಕ ಅಧ್ಯಯನದ 'ನವ' ವಿಧಾನವನ್ನು ಮತ್ತು ವಿವಿಧ ಬಗೆಯ ವಿಮರ್ಶಾತ್ಮಕ ವಿಧಾನಗಳನ್ನು ಒಳಗೊಂಡಿದೆ.

- ಪರಿಕಲ್ಪನೆಗಳು, ಮಾದರಿಗಳು ಹಾಗೂ ಸಿದ್ಧಾಂತಗಳು ರಾಜಕೀಯ ವಿಶ್ಲೇಷಣೆಯ ಪರಿಕರಗಳಾಗಿವೆ. ಇವು ಜ್ಞಾನವೆಂಬ ಕಟ್ಟಡದ ಇಟ್ಟಿಗೆಗಳಾಗಿವೆ. ಆದಾಗ್ಯೂ, ಇವೆಲ್ಲ ಕೇವಲ ವಿಶ್ಲೇಷಣಾ ಪರಿಕರಗಳು ಅಷ್ಟೇ. ಇವು ಸುಧಾರಿತ ತಿಳಿವಳಿಕೆಗೆ ನೆರವಾಗುವುದಾದರೂ ಅವು ಯಾವ ರೂಪವಿಲ್ಲದ ಸಂಕೀರ್ಣ ವಾಸ್ತವವನ್ನು ವಿವರಿಸಲು ಪ್ರಯತ್ನಿಸುತ್ತವೋ ಅದರ ಸ್ವರೂಪದ್ದಾಗಿರುವುದಿಲ್ಲ, ಆ ವಾಸ್ತವಕ್ಕಿಂತಲೂ ಸ್ಪಷ್ಟವಾದ ಸುಸಂಬದ್ಧವಾದ ಸ್ವರೂಪದ್ದಾಗಿರುತ್ತದೆ. ಕೊನೆಯದಾಗಿ, ಎಲ್ಲಾ ರಾಜಕೀಯ, ಸಾಮಾಜಿಕ ಜಿಜ್ಞಾಸೆಗಳನ್ನೂ ಒಂದು ನಿರ್ದಿಷ್ಟ ಚೌಕಟ್ಟಿನೊಳಗೆ ಅಥವಾ ಸೈದ್ಧಾಂತಿಕ ರೂಢಮಾದರಿಯ ಒಳಗೆ ನಡೆಸಲಾಗುತ್ತದೆ.
- ರಾಜಕಾರಣದ ದೇಶಿಯ ಹಾಗೂ ಅಂತಾರಾಷ್ಟ್ರೀಯ ನೆಲೆಗಳ ನಡುವೆ ಸಾಂಪ್ರದಾಯಿಕವಾಗಿ ಒಂದು ಪ್ರತ್ಯೇಕತೆಯನ್ನು ಕಾಪಾಡಿಕೊಂಡು ಬರಲಾಗಿದೆ. ಇದು ರಾಜ್ಯದ ಒಳಗಡೆ ಏನು ನಡೆಯುತ್ತದೆ ಮತ್ತು ರಾಜ್ಯಗಳ ನಡುವಿನ ಸಂಬಂಧದಲ್ಲಿ ಏನೇನು ನಡೆಯುತ್ತದೆ ಎಂಬುದರ ವ್ಯತ್ಯಾಸವನ್ನು ಪ್ರತಿಬಿಂಬಿಸುತ್ತದೆ. ಈ ದೇಶಿಯ/ಅಂತಾರಾಷ್ಟ್ರೀಯ ವಿಂಗಡಣೆಯು ರಾಜಕೀಯ ವಿಜ್ಞಾನ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳ ನಡುವಿನ ಅಧ್ಯಯನಾತ್ಮಕ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುವಲ್ಲಿ ನೆರವಾಗಿದೆ. ಆದಾಗ್ಯೂ ಜಾಗತೀಕರಣ ಮತ್ತು ಪರಸ್ಪರಾವಲಂಬಿಯಾದ ಜಗತ್ತಿನ ಉದಯದಿಂದಾಗಿ ಈ ಪ್ರತ್ಯೇಕತೆಗಳ ಕಾರ್ಯಸಾಧ್ಯತೆಯ ವಿಷಯದಲ್ಲಿ ಸಂಶಯದ ಕಾರ್ಮೋಡ ಆವರಿಸಿದಂತಾಗಿದೆ.

**ಅನುವಾದ:**
**ಪರಿಶೀಲನೆ:**

★★★★★★

**ಪರಿಭಾಷೆಗಳು**

1. **ಘರ್ಷಣೆ:** ವೈರುದ್ಧ್ಯಕರ ಶಕ್ತಿಗಳ ನಡುವಿನ ವಿವಾದವಾಗಿದ್ದು ಇದು ವೈವಿಧ್ಯಮಯ ಅಭಿಪ್ರಾಯ, ಆದ್ಯತೆ, ಅಗತ್ಯ ಅಥವಾ ಆಸಕ್ತಿಗಳನ್ನು ಪ್ರತಿಬಿಂಬಿಸುತ್ತದೆ.

2.**ಸಹಕಾರ:** ಜೊತೆಗೂಡಿ ಕೆಲಸಮಾಡಿ ಸಾಮೂಹಿಕ ಕ್ರಿಯೆಯ ಮೂಲಕ ಗುರಿಗಳನ್ನು ಸಾಧಿಸುವುದು.

3. **ಪೊಲಿಸ್ (ಗ್ರೀಕ್):** ಸಾಂಪ್ರದಾಯಿಕವಾಗಿ ಸಾಮಾಜಿಕ ಸಂಘಟನೆಯ ಅತ್ಯಂತ ಉನ್ನತ ಅಥವಾ ಅಪೇಕ್ಷಣೀಯ ಸ್ವರೂಪ ಎಂದು ಪರಿಗಣಿಸಲಾದ ನಗರ-ರಾಜ್ಯ.

4. **ರಾಜ್ಯ ವ್ಯವಸ್ಥೆ:** ರಾಜಕೀಯ ಅಧಿಕಾರದ ಮೂಲಕ ಸಂಘಟಿಸಲಾದ ಒಂದು ಸಮಾಜ; ಅರಿಸ್ಟಾಟಲ್ ಪ್ರಕಾರ ಇದು ಎಲ್ಲರ ಹಿತಾಸಕ್ತಿಯ ಸಾಧನೆಗೆ ಹಲವರು ನಡೆಸುವ ಆಡಳಿತವಾಗಿದೆ.

5. **ರಾಜಕೀಯ ವಿರೋಧೀ ನಿಲುವು:** ಇದು ಔಪಚಾರಿಕ, ಸ್ಥಾಪಿತ ರಾಜಕೀಯ ಪ್ರಕ್ರಿಯೆ ಮೂಡಿಸುವ ಭ್ರಮನಿರಸನವಾಗಿದೆ. ಇದು ಪಾಲ್ಗೊಳ್ಳದೇ ಇರುವುದರಲ್ಲಿ, ವ್ಯವಸ್ಥೆಯ ವಿರೋಧೀ ಪಕ್ಷಗಳಿಗೆ ಬೆಂಬಲ ನೀಡುವುದರಲ್ಲಿ, ನೇರ ಕಾರ್ಯಾಚರಣೆಯಲ್ಲಿ ವ್ಯಕ್ತವಾಗುತ್ತದೆ.

6. **ಪ್ರಮಾಣಕ:** ಆದರ್ಶ ನಡತೆ ಮತ್ತು ಮೌಲ್ಯಗಳಿಗೆ ಸಂಬಂಧಿಸಿದಂತೆ ವಿಧಾಯಕಗಳು: ಅಂದರೆ 'ಏನಿದೆ' ಎಂಬುದಕ್ಕಿಂತಲೂ 'ಹೇಗೆ ಇರತಕ್ಕದ್ದು' ಎಂಬುದು ಇಲ್ಲಿ ಮುಖ್ಯವಾಗುತ್ತದೆ.

7. **ವಸ್ತುನಿಷ್ಠ:** ಸತ್ಯಗಳನ್ನು ಪರಿಗಣಿಸುವ ಮತ್ತು ಪ್ರತಿನಿಧಿಸುವಲ್ಲಿ ವೀಕ್ಷಕರ ವೈಯಕ್ತಿಕ ಭಾವನೆಗಳು ಅಥವಾ ಅಭಿಪ್ರಾಯಗಳಿಂದ ಪ್ರಭಾವಿತವಾಗದಿರುವುದು ಮತ್ತು ಸಮರ್ಥನಶಕ್ಯವಾದದು; ಅಂದರೆ ಭಾವನೆ, ಮೌಲ್ಯ ಅಥವಾ ಪಕ್ಷಪಾತದಿಂದ ಮುಕ್ತವಾದಂತಹದು.

8.**ಪ್ರಾಯೋಗಿಕ:** ವೀಕ್ಷಣೆ ಮತ್ತು ಪ್ರಯೋಗಗಳನ್ನು ಆಧರಿಸಿದೆ. ಕರಣೇಂದ್ರಿಯ ಜ್ಞಾನ ಮತ್ತು ಅನುಭವಗಳಿಂದ ಪ್ರಾಯೋಗಿಕ ಜ್ಞಾನವನ್ನು ಪಡೆಯಲಾಗುತ್ತದೆ.

9. **ಪ್ರತ್ಯಕ್ಷೈಕ ಪ್ರಮಾಣವಾದ:** ಸಮಾಜಕ್ಕೆ ಸಂಬಂಧಪಟ್ಟ ಸಂಶೋಧನೆ, ಹಾಗೆಯೇ, ಎಲ್ಲ ರೀತಿಯ ತಾತ್ವಿಕ ಜಿಜ್ಞಾಸೆಗಳೂ ಸಹ ಪ್ರಾಕೃತಿಕ ವಿಜ್ಞಾನಗಳ ವಿಧಾನಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿರತಕ್ಕದ್ದು ಎಂಬ ಸಿದ್ಧಾಂತ.

**10.ವರ್ತನಾವಾದ:** ಸಂಶೋಧನೆಗೆ ಪ್ರಮಾಣಿತ ದತ್ತಾಂಶವನ್ನು ಒದಗಿಸುವ ಮತ್ತು ಗಮನಿಸಬಹುದಾದ ವರ್ತನೆಯ ಆಧಾರದ ಮೇಲೆ ಸಾಮಾಜಿಕ ಸಿದ್ಧಾಂತಗಳನ್ನು ರೂಪಿಸತಕ್ಕದ್ದು ಎಂಬ ನಂಬಿಕೆ.

**11. ಪಕ್ಷಪಾತ:** ಮನುಷ್ಯನ ನಿರ್ಧಾರಗಳ ಮೇಲೆ ಪ್ರಭಾವ ಬೀರಬಲ್ಲ ಅನುಕಂಪ ಅಥವಾ ಪೂರ್ವಗ್ರಹ (ಎಷ್ಟೋ ಸಲ ಅಪ್ರಜ್ಞಾಪೂರ್ವಕವಾದುದು); ಪಕ್ಷಪಾತವು ವಿರೂಪವನ್ನು ಸೂಚಿಸುವಂತಹುದಾಗಿದೆ (ನೋಡಿ 'ರಾಜಕೀಯ ಪಕ್ಷಪಾತ' ಪುಟ. ೧೮೩).

**12.ಸಂಸ್ಥೆ:** ಔಪಚಾರಿಕ ಪಾತ್ರ, ಸ್ಥಾನಮಾನ ಹೊಂದಿರುವ ಸುಸ್ಥಿರವಾದ ಒಂದು ವ್ಯವಸ್ಥೆ. ವಿಶಾಲಾರ್ಥದಲ್ಲಿ 'ಆಟದ ನಿಯಮಗಳೆಂದು' ಪರಿಗಣಿಸಲಾಗುವ ನಿಯಮಿತವಾದ, ನಿರೀಕ್ಷಿತವಾದ ವರ್ತನೆಯನ್ನು ಖಾತರಿಪಡಿಸುವ ನಿಯಮಾವಳಿಗಳು.

**13. ಪ್ರತ್ಯಕ್ಷೈಕಪ್ರಮಾಣೋತ್ತರವಾದ (Post-positivism):** 'ವಸ್ತುನಿಷ್ಠ' ವಾಸ್ತವದ ಪರಿಕಲ್ಪನೆಯನ್ನು ಪ್ರಶ್ನಿಸುವ ಒಂದು ಜ್ಞಾನ ವಿಧಾನ. ಜನ ತಾವು ಬದುಕುತ್ತಿರುವ ಪ್ರಪಂಚವನ್ನು ಹೇಗೆ ಕಲ್ಪಿಸುತ್ತಾರೆ ಅಥವಾ ಹೇಗೆ 'ರೂಪಿಸುತ್ತಾರೆ' ಎಂಬುದನ್ನು ಮುಖ್ಯವಾಗಿ ಇದು ವಿವೇಚಿಸುತ್ತದೆ.

**14.ಸಂಕಥನ:** ಮುಖ್ಯವಾಗಿ ಸಂವಹನವನ್ನೊಳಗೊಳ್ಳುವ ಮನುಷ್ಯನ ಪರಸ್ಪರ ಕ್ರಿಯೆಯಾಗಿದ್ದು ಅದು ಅಧಿಕಾರ ಸಂಬಂಧಗಳನ್ನು ಬಯಲು ಮಾಡಬಹುದು ಅಥವಾ ವಿವರಿಸ ಬಹುದು.

**15.ನಿರಚನೆ:** ತಾತ್ವಿಕ ಅಥವಾ ಇತರೆ ಪಠ್ಯಗಳಲ್ಲಿನ ಕೊರತೆ ಹಾಗೂ/ಅಥವಾ ವಿರೋಧಾಭಾಸಗಳನ್ನು ಗಮನದಲ್ಲಿಟ್ಟುಕೊಂಡು ಮಾಡುವ ಸೂಕ್ಷ್ಮ ಓದು.

**16.ಮಾದರಿ:** ಪ್ರಾಯೋಗಿಕ ದತ್ತಾಂಶಗಳ ಸೈದ್ಧಾಂತಿಕ ಪ್ರಾತಿನಿಧ್ಯವಾಗಿದ್ದು ಗಮನಾರ್ಹ ಸಂಬಂಧಗಳು ಹಾಗೂ ಪರಸ್ಪರಕ್ರಿಯೆಗಳನ್ನು ಎತ್ತಿ ತೋರಿಸುವ ಮೂಲಕ ತಿಳಿವಳಿಕೆ ಹೆಚ್ಚಿಸುವುದು ಇದರ ಗುರಿಯಾಗಿದೆ.

**17. ಸಿದ್ಧಾಂತ:** ಪ್ರಾಯೋಗಿಕ ದತ್ತಾಂಶಗಳ ವ್ಯವಸ್ಥಿತ ವಿವರಣೆಯಾಗಿದ್ದು, ಇದನ್ನು ಸಾಮಾನ್ಯವಾಗಿ ವಿಶ್ವಾಸಾರ್ಹ ಜ್ಞಾನ (ಅನುಮಾನಿತ ಸಿದ್ಧಾಂತದಂತಲ್ಲದೆ) ಎಂದು ಕರೆಯಲಾಗುತ್ತದೆ.

**18. ರಾಷ್ಟ್ರದ ಎಲ್ಲೆಗಳಿಂದಾಚೆ (transnational):** ಘಟನೆಗಳಿಗೆ, ಜನರಿಗೆ, ಗುಂಪುಗಳಿಗೆ ಅಥವಾ ಸಂಘಟನೆಗಳಿಗೆ ಅನ್ವಯವಾಗುವ ಸಂರಚನೆ. ಇದು ರಾಷ್ಟ್ರೀಯ ಸರ್ಕಾರಗಳ ಅಥವಾ ರಾಜ್ಯ ಗಡಿಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

**ಪರಿಕಲ್ಪನೆಗಳು**

**ಅಧಿಕಾರ**

ಅಧಿಕಾರವನ್ನು ಸರಳವಾಗಿ 'ಕಾನೂನುಬದ್ಧವಾದ ಶಕ್ತಿ' ಎಂದು ಕರೆಯಬಹುದು. ಇಲ್ಲಿ ಶಕ್ತಿ ಎಂಬುದು ಅನ್ಯರ ವರ್ತನೆಯನ್ನು ಪ್ರಭಾವಿಸುವ *ಸಾಮರ್ಥ್ಯವಾದರೆ* ಅಧಿಕಾರವು ಆ ಪ್ರಭಾವವನ್ನು ಚಲಾಯಿಸಬಹುದಾದ ಒಂದು ಹಕ್ಕಾಗಿದೆ. ಆದ್ದರಿಂದ ಅಧಿಕಾರ ಎನ್ನುವುದು ವಿಧೇಯನಾಗಿರುವುದು ಅಂಗೀಕರಿಸಲ್ಪಟ್ಟ ಕರ್ತವ್ಯ ಎನ್ನುವುದರ ಮೇಲೆ ಆಧಾರಿತವಾಗಿದೆಯೇ ಹೊರತು ಯಾವುದೇ ರೀತಿಯ ಬೆದರಿಕೆ ಅಥವಾ ಕೈವಾಡಗಳ ಮೇಲೆ ಅಲ್ಲ. ಈ ಅರ್ಥದಲ್ಲಿ ಅಧಿಕಾರ ಎನ್ನುವುದು ಸಹಮತತೆ ಅಥವಾ ನ್ಯಾಯಬದ್ಧತೆಯ ಹೆಸರಿನಲ್ಲಿ ಶಕ್ತಿಯನ್ನು ಮರೆಮಾಚುವುದು. ವೆಬರ್ (Weber) (ನೋಡಿ ಪುಟ. ೮೨) ಈ ವಿಧೇಯತೆಯನ್ನು ಸಾಧಿಸಲು ಅನುಕೂಲವಾಗುವಂತೆ ಅಧಿಕಾರವನ್ನು ಮೂರು ಬಗೆಯಲ್ಲಿ ವಿಂಗಡಿಸುತ್ತಾನೆ: *ಸಾಂಪ್ರದಾಯಿಕ* – ಇದು ಇತಿಹಾಸದಲ್ಲಿ ತನ್ನ ಬೇರುಗಳನ್ನು ಹೊಂದಿರುತ್ತದೆ, *ವರ್ಚಸ್ಸು* – ಇದು ವ್ಯಕ್ತಿತ್ವದಿಂದ ಮೊಳಕೆಯೊಡೆಯುತ್ತದೆ ಮತ್ತು *ಕಾನೂನಾತ್ಮಕ, ವಿವೇಚನಾತ್ಮಕ* – ಇದು ವೈಯಕ್ತಿಕವಲ್ಲದ ನಿಯಮಾವಳಿಗಳನ್ನು ಆಧರಿಸಿದೆ.

**ಶಕ್ತಿ**

ವಿಶಾಲಾರ್ಥದಲ್ಲಿ ಶಕ್ತಿಯನ್ನು ಅಪೇಕ್ಷಿತ ಫಲಿತಾಂಶ ಸಾಧನೆಯ ಸಾಮರ್ಥ್ಯ ಎಂಬರ್ಥದಲ್ಲಿ ಬಳಸುತ್ತಾರೆ. ಕೆಲವೊಮ್ಮೆ ಏನನ್ನಾದರೂ ಮಾಡುವ 'ಸಾಮರ್ಥ್ಯ' ಎಂದೂ ಸಹ ಬಳಸಲಾಗುತ್ತದೆ. ಒಬ್ಬ ವ್ಯಕ್ತಿ ತನ್ನನ್ನು ತಾನು ಜೀವಂತವಾಗಿ ಇರಿಸಿಕೊಳ್ಳುವ ಸಾಮರ್ಥ್ಯದಿಂದ ಹಿಡಿದು ಒಂದು ಸರ್ಕಾರ ಆರ್ಥಿಕ ಬೆಳವಣಿಗೆ ಸಾಧಿಸುವ ಸಾಮರ್ಥ್ಯದವರೆಗೆ ಇದರ ಅರ್ಥವ್ಯಾಪ್ತಿ ಹರಡಿದೆ. ಆದಾಗ್ಯೂ, ರಾಜಕಾರಣದಲ್ಲಿ ಶಕ್ತಿಯನ್ನು ಒಂದು ಸಂಬಂಧದಂತೆ ಪರಿಭಾವಿಸಲಾಗಿದೆ; ಅಂದರೆ ಇತರರು ತಮ್ಮಿಚ್ಛೆಯಂತೆ ನಡೆಯಲಾರದಂತೆ ಅವರ ವರ್ತನೆಯನ್ನು ಪ್ರಭಾವಿಸುವ ಸಾಮರ್ಥ್ಯವಾಗಿದೆ. ಇದು 'ಜನಗಳ ಮೇಲೆ ಅಧಿಕಾರ' ಹೊಂದಿರುವುದನ್ನು ಸೂಚಿಸುತ್ತದೆ. ಇನ್ನೂ ಸಂಕುಚಿತವಾಗಿ, ಶಕ್ತಿ ಎನ್ನುವುದನ್ನು 'ಪ್ರಭಾವಿಸುವುದಕ್ಕೆ' ಬದಲಾಗಿ ಶಿಕ್ಷಿಸುವ ಅಥವಾ ಪುರಸ್ಕರಿಸುವ ಸಾಮರ್ಥ್ಯಕ್ಕೆ ಸಂಬಂಧಿಸಬಹುದು. ಇದನ್ನು ಒತ್ತಾಯ ಅಥವಾ ಕೈವಾಡ ಎಂದೂ ಸಹ ಹೇಳಬಹುದಾಗಿದೆ. (ನೋಡಿ ಅಧಿಕಾರದ 'ಮುಖಗಳು', ಪುಟ.೨ ಮತ್ತು ಜಾಗತಿಕ ಶಕ್ತಿಯ ಆಯಾಮಗಳು, ಪುಟ.428.)

**ನಾಗರಿಕ ಸಮಾಜ**

ಮೂಲತಃ ನಾಗರಿಕ ಸಮಾಜವನ್ನು ಒಂದು 'ರಾಜಕೀಯ ಸಮುದಾಯ' ವೆಂದು ಅರ್ಥೈಸಲಾಗಿತ್ತು. ಇದು ಪ್ರಭುತ್ವಕ್ಕಿಂತಲೂ ಭಿನ್ನವಾದುದು ಮತ್ತು ಸರ್ಕಾರದಿಂದ ಸ್ವಾಯತ್ತವಾಗಿರುವ, ವ್ಯಕ್ತಿಗಳು ತಮ್ಮ ಸ್ವಹಿತಾಸಕ್ತಿಯ ಸಾಧನೆಗೆ ಕ್ರಿಯಾಶೀಲರಾಗಿರುವ 'ಖಾಸಗಿ' ಎನ್ನಬಹುದಾದ ಸಂಸ್ಥೆಗಳನ್ನು ಗುರುತಿಸಲು ಈ ಪದವನ್ನು ಬಳಸಲಾಗುವುದು. ಹೀಗಾಗಿ ನಾಗರಿಕ ಸಮಾಜ ಎಂಬುದು ಸ್ವಾಯತ್ತ ಸಮುದಾಯಗಳ ಹಾಗೂ ಸಂಘಟನೆಗಳಿಗೆ ಸಂಬಂಧಪಟ್ಟುದಾಗಿದೆ. ವ್ಯಾಪಾರ ವಹಿವಾಟು, ಸ್ವಹಿತಾಸಕ್ತಿ ಗುಂಪುಗಳು, ಕ್ಲಬ್‌ಗಳು, ಕುಟುಂಬ ಇತ್ಯಾದಿ. ಸರ್ಕಾರೇತರ ಸಂಸ್ಥೆ(ಎನ್‌ಜಿಒ)ಗಳನ್ನು (ನೋಡಿ ಪುಟ. ೨೪೮) ಹಾಗೂ ರಾಷ್ಟ್ರದ ಎಲ್ಲೆಗಳನ್ನು ಮೀರಿ ಇರುವ ಸಾಮಾಜಿಕ ಚಳವಳಿ(ನೋಡಿ ಪುಟ ೨೬೦)ಗಳನ್ನು ಗುರುತಿಸಲು 'ಜಾಗತಿಕ ನಾಗರಿಕ ಸಮಾಜ' (ನೋಡಿ ಪುಟ. ೧೦೬) ಎಂಬ ಪದ ಬಳಸುವುದು ಇತ್ತೀಚೆಗೆ ಸಾಮಾನ್ಯವಾಗಿ ಹೋಗಿದೆ.

**ಒಮ್ಮತ**

ಒಮ್ಮತವೆಂಬುದು ಒಪ್ಪಂದ, ಒಂದು ಬಗೆಯ ಒಪ್ಪಂದ. ಇದೊಂದು ವ್ಯಾಪಕವಾದ ಒಪ್ಪಂದವಾಗಿರುತ್ತದೆ. ಮೊದಲಿಗೆ, ಇದರ ನಿಯಮಗಳು ವೈವಿಧ್ಯಮಯವಾದ ವ್ಯಕ್ತಿಗಳು ಹಾಗೂ ಗುಂಪುಗಳಿಗೆ ಒಪ್ಪಿತವಾಗಿರುತ್ತವೆ. ಎರಡನೆಯದಾಗಿ, ಇದು ಒಂದು ನಿಖರ ಅಥವಾ ನಿರ್ದಿಷ್ಟವಾದ ವಿಷಯದ ಮೇಲಿನ ಒಪ್ಪಂದವಲ್ಲ. ಬದಲಾಗಿ ಒಂದು ಮೂಲಭೂತ ಅಥವಾ ಆಧಾರಭೂತ ತತ್ವದ ಕುರಿತಾದ ಒಪ್ಪಂದವಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಒಪ್ಪಂದದಲ್ಲಿ ಮುಖ್ಯವಾದ ಅಥವಾ ವಿವರವಾದ ವಿಷಯಗಳಲ್ಲಿ ಅಸಮ್ಮತಿಗೂ ಆಸ್ಪದವಿರುತ್ತದೆ. *ಕಾರ್ಯವಿಧಾನಾತ್ಮಕ* ಒಪ್ಪಂದವೆಂಬುದು ಸಮಾಲೋಚನೆ, ರಾಜಿ ಸಂಧಾನದ ಪ್ರಕ್ರಿಯೆಯ ಮೂಲಕ ಒಂದು ನಿರ್ಧಾರಕ್ಕೆ ಬರುವ ಸಂಕಲ್ಪವಾಗಿದೆ. *ನಿಜವಾದ* ಒಮ್ಮತ ಎನ್ನುವುದು ವಿಶಾಲ ನೀತಿ ಉದ್ದೇಶಗಳ ಕುರಿತಾದ ಒಪ್ಪಂದವನ್ನು ಸೂಚಿಸುವ ಸೈದ್ಧಾಂತಿಕ ನೆಲೆಗಳ ಸಮನ್ವಯವಾಗಿರುತ್ತದೆ.

**ವಿಜ್ಞಾನ**

ವಿಜ್ಞಾನವು ಎನ್ನುವುದು ಪುನರಾವರ್ತನೀಯ ಪ್ರಯೋಗಗಳು, ವೀಕ್ಷಣೆ ಮತ್ತು ಒಂದು ಸಾಮಾನ್ಯ ಅನುಮಾನಿತ ಸಿದ್ಧಾಂತ(hypothesis) ದಿಂದ ಪ್ರಾರಂಭಗೊಂಡು ಒಂದು ನಿರ್ದಿಷ್ಟ, ತಾರ್ಕಿಕ ತೀರ್ಮಾನವನ್ನು ತಲುಪುವ ಸಾಧ್ಯತೆ (deduction)ಯ ಮುಖಾಂತರ ವಿದ್ಯಮಾನಗಳಿಗೆ ವಿಶ್ವಾಸನೀಯ ವಿವರಣೆಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿರುವ ಅಧ್ಯಯನ ಕ್ಷೇತ್ರವಾಗಿದೆ. 'ವೈಜ್ಞಾನಿಕ ವಿಧಾನ'ದಲ್ಲಿ ಅನುಮಾನಿತ ಸಿದ್ಧಾಂತಗಳನ್ನು ಲಭ್ಯವಿರುವ ಪುರಾವೆಗಳ

ಎದುರಿನಲ್ಲಿ ಪರೀಕ್ಷಿಸಲಾಗುತ್ತದೆ. ಹಾಗಾಗಿ ಇದನ್ನು ನಿಷ್ಪಕ್ಷಪಾತ ಮತ್ತು ವಸ್ತುನಿಷ್ಠ ಸತ್ಯವನ್ನು ಪ್ರಕಟಪಡಿಸುವ ಸಾಧನವೆಂಬಂತೆ ನೋಡಲಾಗಿದೆ. ಆದಾಗ್ಯೂ, ವಿಜ್ಞಾನವು ಅನುಮಾನಿತ ಸಿದ್ಧಾಂತಗಳನ್ನು ತಪ್ಪೆಂದು ಮಾತ್ರ ತೋರಿಸಬಹುದು ಏಕೆಂದರೆ ಭವಿಷ್ಯದ ಪ್ರಯೋಗಗಳು 'ವಾಸ್ತವಾಂಶ'ಗಳನ್ನು ತಪ್ಪೆಂದು ಸಾಧಿಸುವ ಸಾಧ್ಯತೆ ಇರುತ್ತದೆ ಎಂದು ಕಾರ್ಲ್ ಪಾಪರ್(Karl Popper) (1902–94) ಅಭಿಪ್ರಾಯ ಹೊಂದಿದ್ದರು.

**ರಾಚನಿಕವಾದ**

ರಾಚನಿಕವಾದ (Constructivism) (ಅಥವಾ ಸಾಮಾಜಿಕ ರಾಚನಿಕವಾದ) ನಮ್ಮ ತಿಳಿವಳಿಕೆಯನ್ನು ಮೀರಿದ ವಸ್ತುನಿಷ್ಠವಾದ ಸಾಮಾಜಿಕ ಅಥವಾ ರಾಜಕೀಯ ವಾಸ್ತವ ಇರಲು ಸಾಧ್ಯವಿಲ್ಲ ಎಂಬ ನಂಬಿಕೆಯನ್ನು ಆಧರಿಸಿದ ವಿಶ್ಲೇಷಣಾ ವಿಧಾನವಾಗಿದೆ. ಆದ್ದರಿಂದಲೇ ರಾಚನಿಕವಾದಿಗಳು ಸಮಾಜವನ್ನು 'ಬಾಹ್ಯವಾದ್ದು' ಎಂಬಂತೆ, ಅಂದರೆ ಭೌತಿಕ ವಸ್ತುಗಳನ್ನು ಒಳಗೊಂಡಿರುವ ಬಾಹ್ಯ ಪ್ರಪಂಚಕ್ಕೆ ಸಂಬಂಧಿಸಿದ್ದು ಎಂಬಂತೆ, ಭಾವಿಸುವುದಿಲ್ಲ. ಬದಲಾಗಿ ಅದು ಒಂದು ರೀತಿಯ ಅಂತರ್ ವ್ಯಕ್ತಿನಿಷ್ಠ (inter-subjective) ಅರಿವಾಗಿ ನಮ್ಮೊಳಗೆ ಮಾತ್ರ ಇರುತ್ತದೆ ಎಂಬುದಾಗಿ ಭಾವಿಸುತ್ತಾರೆ. ಅಂತಿಮವಾಗಿ ಹೇಳುವುದಾದರೆ ವ್ಯಕ್ತಿಗಳು ಅವರು ವ್ಯಕ್ತಿಗಳ ರೂಪದಲ್ಲಾಗಲಿ ಅಥವಾ ಸಾಮಾಜಿಕ ಸಮೂಹಗಳ ರೂಪದಲ್ಲಾಗಲಿ ಆ ರಚನೆಗಳಿಗೆ ಅನುಸಾರವಾಗಿ ಪ್ರಪಂಚವನ್ನು 'ರಚನೆ' ಮಾಡುತ್ತಾರೆ. ಜನ ತಮ್ಮ ನಂಬಿಕೆ ಹಾಗೂ ಗೃಹೀತಗಳನ್ನು ಎಲ್ಲರೊಂದಿಗೆ ವ್ಯಾಪಕವಾಗಿ ಹಂಚಿಕೊಂಡಾಗ, ಅದು ಒಂದು ಬಗೆಯ ಅಸ್ಮಿತೆಯನ್ನು ಹಾಗೆಯೇ ವಿಭಿನ್ನವಾದ ಆಸಕ್ತಿಗಳನ್ನು ಸೃಷ್ಟಿಸಿದಾಗ ಆ ನಂಬಿಕೆ ಹಾಗೂ ಗೃಹೀತಗಳು ಮುಖ್ಯವಾಗುತ್ತದೆ.

**ಆಧುನಿಕೋತ್ತರವಾದ**

ಸಾಮಾನ್ಯವಾಗಿ ಪಾಶ್ಚಾತ್ಯ ಕಲೆ, ವಾಸ್ತು ಹಾಗೂ ಒಟ್ಟಾರೆ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ನಡೆದ ಪ್ರಯೋಗಶೀಲ ಚಳವಳಿಯನ್ನು ವಿವರಿಸಲು ಮೊತ್ತ ಮೊದಲ ಸಲ ಆಧುನಿಕೋತ್ತರವಾದ ಎಂಬ ಪರಿಭಾಷೆಯನ್ನು ಬಳಸಲಾಯಿತು. ಸಾಮಾಜಿಕ ಮತ್ತು ರಾಜಕೀಯ ವಿಶ್ಲೇಷಣೆಯ ಒಂದು ಪರಿಕರವಾಗಿ ಒದಗಿ ಬಂದ ಆಧುನಿಕೋತ್ತರವಾದವು ಕೈಗಾರಿಕೀಕರಣ ಮತ್ತು ವರ್ಗಪ್ರಜ್ಞೆಯಿಂದ ರೂಪಿತವಾದ ಸಮಾಜಗಳು ಛಿದ್ರಗೊಂಡ ಬಹುತ್ವ ಸಾಂಸ್ಕೃತಿಕ ಸಿದ್ಧಾಂತದ 'ಮಾಹಿತಿ' ಸಮಾಜಗಳಾಗಿ ರೂಪಾಂತರಗೊಂಡವು ಎನ್ನುವುದನ್ನು ಎತ್ತಿ ತೋರಿಸುತ್ತದೆ. ಇಲ್ಲಿ ಉತ್ಪಾದಕರಾದ ವ್ಯಕ್ತಿಗಳು ಗ್ರಾಹಕರಾಗಿ ಪರಿವರ್ತಿತರಾಗುತ್ತಾರೆ, ವರ್ಗಪ್ರಜ್ಞೆ, ಧರ್ಮ ಹಾಗೂ ಜನಾಂಗೀಯ ನಿಷ್ಠೆಗಳಿಗಿಂತ ವ್ಯಕ್ತಿವಿಶಿಷ್ಟತೆ ಮುಖ್ಯವಾಗುತ್ತದೆ. ಲೋಕದಲ್ಲಿ ಖಚಿತತೆ ಎಂಬುದು ಇಲ್ಲ ಎಂದು ಆಧುನಿಕೋತ್ತರವಾದಿಗಳು ವಾದಿಸುತ್ತಾರೆ; ನಿರುಪಾಧಿಕ ಮತ್ತು ಸಾರ್ವತ್ರಿಕ ಸತ್ಯ ಎಂಬುವ

ಪರಿಕಲ್ಪನೆಗಳನ್ನು ಅವು ತೋರಿಕೆಯ ಅಹಮಿಕೆಯು ಎನ್ನುವ ಕಾರಣ ಅಂತಹ ವಿಚಾರಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕು ಎಂದು ವಾದಿಸುತ್ತಾರೆ.

**ಆದರ್ಶ ವಿಧ**

ಆದರ್ಶ ವಿಧ (ಶುದ್ಧ ವಿಧ) ಎಂಬುದು ಒಂದು ಮನೋನಿರ್ಮಿತಿಯಾಗಿದೆ. ಇದು ಒಂದು ತಾರ್ಕಿಕ ಅತಿರೇಕದ ಮೂಲಕ ಆಳವರಿಯಲಾಗದಷ್ಟು ಸಂಕೀರ್ಣಮಯವಾಗಿರುವ ವಾಸ್ತವದಿಂದ ಒಂದು ಅರ್ಥವನ್ನು ಹೊರತೆಗೆಯುವ ಪ್ರಯತ್ನವಾಗಿದೆ. ಆದರ್ಶ ವಿಧ ಎನ್ನುವುದನ್ನು ಮೊತ್ತ ಮೊದಲ ಸಲ ಅರ್ಥಶಾಸ್ತ್ರದಲ್ಲಿ ಬಳಸಲಾಯಿತು. ಉದಾಹರಣೆಗೆ, ಏಕಸ್ವಾಮ್ಯ(monopoly)ವಿಲ್ಲದ ಪೈಪೋಟಿ ಎನ್ನುವ ಪರಿಕಲ್ಪನೆಯಲ್ಲಿ. ಮ್ಯಾಕ್ಸ್ ವೆಬರ್‌ನ ಮೂಲಕ ಸಾಮಾಜಿಕ ವಿಜ್ಞಾನಗಳ ಕ್ಷೇತ್ರದಲ್ಲಿ ಬೆಂಬಲ ಪಡೆದ ಈ ಆದರ್ಶ ವಿಧ ಎಂಬ ಪರಿಕಲ್ಪನೆಯು ಒಂದು ವಿವರಣಾತ್ಮಕ ಪರಿಕರವಾಗಿದೆಯೇ ವಿನಾ ಸತ್ಯದ ಅಂದಾಜುಗಳಲ್ಲ. ಇದು ವಾಸ್ತವ ನೆಲ್ಲವನ್ನು ಸಂಪೂರ್ಣವಾಗಿ ವಿವರಿಸುವುದೂ ಇಲ್ಲ, ನೈತಿಕ ಆದರ್ಶವನ್ನು ನೀಡುವುದೂ ಇಲ್ಲ. ಅಧಿಕಾರ (ನೋಡಿ ಪುಟ. 4) ಹಾಗೂ ಅಧಿಕಾರಶಾಹಿಯ (ನೋಡಿ ಪುಟ. ೩೬೧) ವಿಧಗಳು ವೆಬರ್ ಪಂಥದ ಉದಾಹರಣೆಗಳಾಗಿವೆ.

**ರೂಢಮಾದರಿ**

ರೂಢಮಾದರಿ ಎಂಬುದು ಸಾಮಾನ್ಯ ಅರ್ಥದಲ್ಲಿ, ಒಂದು ನಿರ್ದಿಷ್ಟ ವಿದ್ಯಮಾನದ ಮುಖ್ಯ ಲಕ್ಷಣಗಳನ್ನು ವಿವರಿಸುವಂತಹ ಒಂದು ಮಾದರಿ ಅಥವಾ ಆದರ್ಶ ರೂಪವಾಗಿದೆ. ಆದಾಗ್ಯೂ, ಕುನ್ಹ್ (೧೯೬೨) ಬಳಸುವಂತೆ, ಇದು ಪರಸ್ಪರ ಸಂಬಂಧಿಯಾದ ಮೌಲ್ಯಗಳು, ಸಿದ್ಧಾಂತಗಳು ಹಾಗೂ ಗೃಹೀತಗಳನ್ನು ಒಳಗೊಂಡ ಒಂದು ಬೌದ್ಧಿಕ ಚೌಕಟ್ಟಿಗೆ ಸಂಬಂಧಿಸಿದ್ದಾಗಿದೆ. ಈ ಚೌಕಟ್ಟಿನೊಳಗೆ ಜ್ಞಾನದ ಹುಡುಕಾಟ ನಡೆಸಲಾಗುತ್ತದೆ. 'ಸಾಧಾರಣ' ವಿಜ್ಞಾನ ಈ ಸ್ಥಾಪಿತ ರೂಢಮಾದರಿಯೊಳಗೆ ನಡೆಸಲಾಗುತ್ತದೆಯಾದರೆ 'ಕ್ರಾಂತಿಕಾರಕ' ವಿಜ್ಞಾನ ಹಳೆಯ ರೂಢಮಾದರಿಯನ್ನು ಬದಲಾಯಿಸಿ ಹೊಸದನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. 'ಸತ್ಯ' ಮತ್ತು 'ಹುಸಿತನ' ಎಂಬುದು ಹಂಗಾಮಿ ತೀರ್ಮಾನಗಳಾಗಿರುತ್ತವೆ ಎಂಬುದು ಈ ಸಿದ್ಧಾಂತದ ಮೂಲಭೂತ ಸೂಚ್ಯಪರಿಣಾವಾಗಿರುತ್ತದೆ.

## ತತ್ವಜ್ಞಾನಿಗಳ ಬಗ್ಗೆ

### ನಿಕೋಲೊ ಮಾಕ್ಯವೆಲ್ಲಿ (1469–1527)

ಇಟಲಿಯ ರಾಜಕಾರಿಣಿ, ಲೇಖಕ. ಸಿವಿಲ್ ನ್ಯಾಯವಾದಿಯ ಮಗನಾದ ಮಾಕ್ಯವೆಲ್ಲಿ ತನ್ನ ಸಾರ್ವಜನಿಕ ಜೀವನದ ಜ್ಞಾನವನ್ನು ಕೆಲವೊಮ್ಮೆ ಅನಿಶ್ಚಿತವಾಗಿದ್ದ, ರಾಜಕೀಯವಾಗಿ ಅಸ್ಥಿರವಾಗಿದ್ದ ಫ್ಲಾರೆನ್ಸ್‌ನಲ್ಲಿ ಇದ್ದು ಪಡೆದುಕೊಂಡಿದ್ದ. ಎರಡನೆಯ ಚ್ಯಾನ್ಸೆಲರ್ (1498–1512) ಆಗಿ ಸೇವೆ ಸಲ್ಲಿಸುತ್ತಿದ್ದ ಅವನನ್ನು ಕರ್ತವ್ಯದ ಮೇರೆಗೆ ಫ್ರಾನ್ಸ್, ಜರ್ಮನಿ ಮತ್ತು ಇಟಲಿಯ ಎಲ್ಲೆಡೆಗಳಿಗೆ ಕಳುಹಿಸಲಾಗಿತ್ತು. ಸ್ವಲ್ಪಕಾಲ ಬಂಧನದಲ್ಲಿದ್ದು ಬಳಿಕ ಮೆಡಿಸಿ ವಂಶದ ಆಡಳಿತ ಮರುಸ್ಥಾಪನೆಯಾದ ಮೇಲೆ ಮಾಕ್ಯವೆಲ್ಲಿ ಸಾಹಿತ್ಯ ರಚನೆಯತ್ತ ಮುಖ ಮಾಡಿದ. 1532ರಲ್ಲಿ ಪ್ರಕಟವಾದ '*The Prince (ದಿ ಪ್ರಿನ್ಸ್)*' ಅವನ ಪ್ರಮುಖ ಕೃತಿಯಾಗಿದೆ. ಸಿಸಾರೆ ಬೋರ್ಜಿಯಾನ ರಾಜನೀತಿ ಕೌಶಲವನ್ನು ಮತ್ತು ಅವನ ಕಾಲದ ಅಧಿಕಾರದ ರಾಜಕಾರಣವನ್ನು ಹತ್ತಿರದಿಂದ ಕಂಡು ಈ ಕೃತಿಯನ್ನು ರಚಿಸಿದನು. ಸಂಯುಕ್ತ ಇಟಲಿಯ ಭವಿಷ್ಯದ ಯುವರಾಜನಿಗೆ ಒಂದು ಮಾರ್ಗಸೂಚಿಯಾಗಿ ಇದನ್ನು ರಚಿಸಲಾಯಿತು. ತರುವಾಯ '**ಮಾಕ್ಯವೆಲ್ಲಿಯನ್**' ಎಂಬ ವಿಶೇಷಣವು 'ಕುತಂತ್ರ', 'ಮೋಸಗಾರಿಕೆ' ಎನ್ನುವ ಅರ್ಥಗಳನ್ನು ಪಡೆದುಕೊಂಡಿತು.

### ಅರಿಸ್ಟಾಟಲ್ (ಕ್ರಿ.ಪೂ. 384–322)

ಗ್ರೀಕ್ ತತ್ವಜ್ಞಾನಿಯಾದ ಅರಿಸ್ಟಾಟಲ್ ಪ್ಲೇಟೋನ ಶಿಷ್ಯನಾಗಿದ್ದ (ನೋಡಿ ಪುಟ. 13), ಮತ್ತು ಯುವ ಅಲೆಕ್ಸಾಂಡರ್‌ನ ಗುರುವಾಗಿದ್ದ. ಅವನು ಕ್ರಿ. ಪೂ. 335ರಲ್ಲಿ ಅಥೆನ್ಸ್‌ನಲ್ಲಿ ತನ್ನದೇ ತತ್ವಶಾಸ್ತ್ರದ ಪಾಠಶಾಲೆಯನ್ನು ಪ್ರಾರಂಭಿಸಿದ್ದ. ಇದನ್ನು ಅವನು ಅತ್ತಿಂದಿತ್ತ ಹೆಜ್ಜೆ ಹಾಕುತ್ತಾ ಮಾತನಾಡುತ್ತಿದ್ದರಿಂದ ಈ ಪಾಠಶಾಲೆಯನ್ನು 'peripatetic school (ಪೆರಿಪಟೆಟಿಕ್ ಸ್ಕೂಲ್)' ಎಂದು ಕರೆಯುತ್ತಿದ್ದರು. ಇಂದು ಇವನಿಂದ ರಚಿತವಾದ 22 ಗ್ರಂಥಗಳು ಲಭ್ಯವಿದ್ದು ಇವು ತರ್ಕಶಾಸ್ತ್ರ, ಭೌತಶಾಸ್ತ್ರ, ತತ್ತ್ವಮೀಮಾಂಸೆ, ಖಗೋಳ ವಿಜ್ಞಾನ, ಹವಾಮಾನ ವಿಜ್ಞಾನ, ಜೀವಶಾಸ್ತ್ರ, ನೈತಿಕತೆ ಮತ್ತು ರಾಜಕಾರಣ ಇವೇ ಮುಂತಾದ ವಿಷಯಗಳ ಮೇಲೆ ಇವನು ಬರೆದಿಟ್ಟುಕೊಂಡಿದ್ದ ಉಪನ್ಯಾಸ ಟಿಪ್ಪಣಿಗಳ ರೂಪದಲ್ಲಿವೆ. ಮಧ್ಯಯುಗದಲ್ಲಿ ಅರಿಸ್ಟಾಟಲನ ಕೃತಿಗಳೇ ಇಸ್ಲಾಂ ತತ್ವಜ್ಞಾನದ ತಳಹದಿಯಾಯಿತು. ಮುಂದೆ ಕ್ರಿಶ್ಚಿಯನ್ ಧರ್ಮಶಾಸ್ತ್ರ ಇದನ್ನು ಅಳವಡಿಸಿಕೊಂಡಿತು. '*Politics (ಪಾಲಿಟಿಕ್ಸ್)*' ರಾಜಕೀಯದ ಕುರಿತಾದ ಅರಿಸ್ಟಾಟಲನ ಅತ್ಯಂತ ಪ್ರಸಿದ್ಧ ಕೃತಿಯಾಗಿದೆ. ನಗರ–ರಾಜ್ಯಗಳೇ ಒಳ್ಳೆಯತನ ಮತ್ತು ಸುಭಿಕ್ಷತೆಗಳ ಆಧಾರವಾಗಿದೆ ಎನ್ನುವ ಅರಿಸ್ಟಾಟಲ್ ಸ್ವಲ್ಪಜನಾಧಿಪತ್ಯಕ್ಕಿಂತ (oligarchy) ಪ್ರಜಾಪ್ರಭುತ್ವವೇ ಮೇಲು ಎಂದು ಈ ಕೃತಿಯಲ್ಲಿ ವಾದಿಸುತ್ತಾನೆ (ನೋಡಿ ಪುಟ. 267–9).

**ಹಾನಾ ಆರೆಂಟ್ (1906–75)**

ಜರ್ಮನ್ ರಾಜಕೀಯ ಸಿದ್ಧಾಂತಿ ಮತ್ತು ತತ್ವಶಾಸ್ತ್ರಜ್ಞೆ, ಈಕೆ ಮಧ್ಯಮವರ್ಗದ ಯಹೂದೀ ಕೌಟುಂಬಿಕ ಹಿನ್ನೆಲೆಯಲ್ಲಿ ಬೆಳೆದವಳು. ನಾಝೀವಾದದಿಂದ ತಪ್ಪಿಸಿಕೊಳ್ಳಲು ಈಕೆ 1933ರಲ್ಲಿ ಜರ್ಮನಿಯನ್ನು ತೊರೆದು ಕೊನೆಗೆ ಅಮೆರಿಕಾದಲ್ಲಿ ನೆಲೆಸಿದಳು. ಅಮೆರಿಕಾದಲ್ಲೇ ಈಕೆಯ ಮಹತ್ವದ ಕೃತಿಯು ಪ್ರಕಟಗೊಂಡಿದ್ದು. ಈಕೆಯ ವೈವಿಧ್ಯಮಯವಾದ, ಅತಿರೇಕದ ಬರವಣಿಗೆ ಹೈಡಿಗರ್ (Heidegger) (1889–1976) ಮತ್ತು ಜಾಸ್ಪರ್ಸ್ (Jaspers) (1883–1969) ಅಸ್ತಿತ್ವವಾದದಿಂದ ಪ್ರಭಾವಗೊಂಡಿದ್ದವು. ಅಸ್ತಿತ್ವವಾದವನ್ನು ಆಕೆ 'ಎಲ್ಲೆಕಟ್ಟುಗಳಿಲ್ಲದೆ ಚಿಂತನೆ ನಡೆಸುವುದು' ಎಂದು ವರ್ಣಿಸುತ್ತಾಳೆ. '*The Origins of Totalitarianism (ದಿ ಆರಿಜಿನ್ ಆಫ್ ಟೋಟಾಲಿಟೇರಿಯನಿಸಂ)*' (1951) ಈಕೆಯ ಪ್ರಮುಖ ಬರವಣಿಗೆಯಾಗಿದೆ. ಇದರಲ್ಲಿ ಹಾನಾ ಆರೆಂಟ್ ನಾಝೀ ಜರ್ಮನಿ ಮತ್ತು ಸ್ಟಾಲಿನ್ ರಷ್ಯಾಗಳ ನಡುವಿನ ಸಾಮ್ಯವನ್ನು ಗುರುತಿಸುತ್ತಾಳೆ. *The Human Condition (ದಿ ಹ್ಯೂಮನ್ ಕಂಡೀಷನ್)* (1958), *On Revolution (ಆನ್ ರೆವಲ್ಯೂಷನ್)* (1963), *Eichmann in Jerusalem (ಐಕ್ಮನ್ ಇನ್ ಜೆರುಸಲೇಮ್)* (1963) ಈಕೆಯ ಪ್ರಮುಖ ತಾತ್ವಿಕ ಕೃತಿಗಳಾಗಿವೆ. 'ಕೆಡುಕಿನ ನಿಸ್ಸಾರತೆ(banality of evil)'ಯನ್ನು ಒತ್ತಿ ಹೇಳುವ ಆಕೆಯ ಕೊನೆಯ ಕೃತಿ ವಿವಾದಾತ್ಮಕ ಕೃತಿಯಾಗಿದೆ. ಏಕೆಂದರೆ ಇದು ಐಕ್ಮನ್‌ನನ್ನು ತೀವ್ರ ಹುಚ್ಚುಹಿಡಿದ ಸಿದ್ಧಾಂತಾನುಯಾಯಿಯ ಬದಲಾಗಿ ಓರ್ವ ನಾಝಿ ಕಾರ್ಯಕರ್ತನಂತೆ ಬಿಂಬಿಸುತ್ತದೆ.

**ಪ್ಲೇಟೋ (ಕ್ರಿ.ಪೂ. 427–347)**

ಗ್ರೀಕ್ ತತ್ವಜ್ಞಾನಿಯಾದ ಪ್ಲೇಟೋ ಶ್ರೀಮಂತ ಮನೆತನದಲ್ಲಿ ಜನಿಸಿದವನು. ಈತ ತನ್ನ ನೈತಿಕ ಹಾಗೂ ತಾತ್ವಿಕ ಸಂವಾದಗಳಲ್ಲಿ ಮುಖ್ಯ ಪಾತ್ರಧಾರಿಯಾಗಿದ್ದ ಸಾಕ್ರಟೀಸನ ಅನುಯಾಯಿಯಾದ. ಕ್ರಿ.ಪೂ. 399ರಲ್ಲಿ ಸಾಕ್ರಟೀಸ್ ತೀರಿಕೊಂಡ ಮೇಲೆ ಅಥೆನ್ಸ್‌ನ ಹೊಸ ಆಡಳಿತ ವರ್ಗಗಳಿಗೆ ತರಬೇತಿ ನೀಡಲು ತನ್ನದೇ ಆದ ಅಕಾಡೆಮಿ ಸ್ಥಾಪಿಸಿದ. ಭೌತಿಕ ಜಗತ್ತು ಅಮೂರ್ತವೂ ನಿರಂತರವೂ ಆದ 'ವಿಚಾರ'ಗಳ ಒಂದು ಅಪೂರ್ಣ ನಕಲು ಎಂದು ಬೋಧಿಸಿದ. '(*The Republic(ದಿ ರಿಪಬ್ಲಿಕ್)*' ಮತ್ತು '*The Laws (ದಿ ಲಾಸ್)*' ಪುಸ್ತಕಗಳಲ್ಲಿ ಇವನ ರಾಜಕೀಯ ತತ್ವವಿಚಾರಗಳನ್ನು ಕಾಣಬಹುದು. ಇದರಲ್ಲಿ ನ್ಯಾಯ ಸಿದ್ಧಾಂತದ ಪರಿಭಾಷೆಯಲ್ಲಿ ಒಂದು ಆದರ್ಶಮಯ ಪ್ರಭುತ್ವವನ್ನು ವಿವರಿಸುವ ಪ್ರಯತ್ನ ಮಾಡಿದ್ದಾನೆ. ಎರಡೂ ಕೃತಿಗಳು ಅಧಿಕಾರಕ್ಕೆ ವಿಧೇಯತೆ ಬಯಸುವ ಗ್ರಂಥಗಳಾಗಿದ್ದು ಈ ಕೃತಿಗಳು ವ್ಯಕ್ತಿಸ್ವಾತಂತ್ರ್ಯಕ್ಕೆ ಹೆಚ್ಚಿನ ಗಮನ ನೀಡುವುದಿಲ್ಲ. ಅಧಿಕಾರವು ಸುಶಿಕ್ಷಿತ ಉಚ್ಚ ವರ್ಗಗಳಿಗೆ ಸೇರಿದ್ದ ತತ್ವಜ್ಞಾನಿಗಳಾದ ಅರಸುಗಳ ಕೈಲಿ ಇರತಕ್ಕದ್ದು ಎಂದು ಪ್ರತಿಪಾದಿಸುತ್ತದೆ. ಆದ್ದರಿಂದ ಇವನು ಪ್ರಜಾಪ್ರಭುತ್ವದ ಕಟುವಾದ

ಟೀಕಾಗಾರನಾಗಿದ್ದ. ಪ್ಲೇಟೋನ ಕೃತಿಗಳು ಇಡೀ ಯುರೋಪಿಯನ್ ಸಂಸ್ಕೃತಿಯ ಮೇಲೆ, ನಿರ್ದಿಷ್ಟವಾಗಿ ಕ್ರೈಸ್ತದರ್ಮದ ಮೇಲೆ ವ್ಯಾಪಕ ಪ್ರಭಾವ ಉಂಟು ಮಾಡಿದೆ.

**ಚರ್ಚೆಗಾಗಿ ಕೆಲವು ಪ್ರಶ್ನೆಗಳು**

- ರಾಜಕಾರಣ ಮೂಲಭೂತವಾಗಿ ಸಾಮಾಜಿಕವಾದುದು ಎನ್ನುವುದಾದಲ್ಲಿ ಎಲ್ಲ ಸಾಮಾಜಿಕ ಚಟುವಟಿಕೆಗಳನ್ನೂ ಅದೇಕೆ ರಾಜಕಾರಣ ಎನ್ನಲಾಗದು?
- ರಾಜಕಾರಣವನ್ನು ಒಂದು ಕಣವೆಂದು ಕರೆಯಬೇಕೇ ಅಥವಾ ಪ್ರಕ್ರಿಯೆ ಎಂದು ಕರೆಯಬೇಕೇ?
- ಅಧಿಕಾರವನ್ನು ಅದೇಕೆ ರಾಜಕಾರಣವನ್ನು ವಿವರಿಸುವ ಪ್ರಮುಖ ಲಕ್ಷಣವನ್ನಾಗಿ ಪರಿಗಣಿಸಲಾಗುತ್ತದೆ?
- ಯಾವ ಆಧಾರಗಳ ಮೇಲೆ ರಾಜಕಾರಣವನ್ನು ಸಮರ್ಥಿಸಿಕೊಳ್ಳಬಹುದು?
- ರಾಜಕಾರಣ ಅನಿವಾರ್ಯವೇ? ರಾಜಕಾರಣಕ್ಕೆ ಒಂದು ಅಂತ್ಯ ಹಾಡಲು ಸಾಧ್ಯವೇ?
- ರಾಜಕಾರಣದ ಅಧ್ಯಯನಕ್ಕೆ ಮುಖ್ಯವಾಹಿನಿಯ ಹಾಗೂ ವಿಮರ್ಶಾತ್ಮಕ ವಿಧಾನಗಳು ಹೇಗೆ ಭಿನ್ನವಾಗುತ್ತವೆ?
- ರಾಜಕೀಯ ವಿಜ್ಞಾನದ ಕಲ್ಪನೆಯು ಅದೇಕೆ ಅಷ್ಟು ಆಕರ್ಷಕವೆನಿಸುತ್ತದೆ?
- ರಾಜಕಾರಣವನ್ನು ವಸ್ತುನಿಷ್ಠವಾಗಿ ಪೂರ್ವಗ್ರಹವಿಲ್ಲದಂತೆ ಅಧ್ಯಯಿಸಲು ಸಾಧ್ಯವೇ?
- ದೇಶಿಯ ಹಾಗೂ ಅಂತಾರಾಷ್ಟ್ರೀಯ ರಾಜಕಾರಣದ ನೆಲೆಗಳ ನಡುವಿನ ಭೇದವನ್ನು ಇನ್ನು ಮುಂದೆಯೂ ಉಳಿಸಿಕೊಳ್ಳುವುದು ಸಾಧುವೇ?

## Further Reading

Hay, C., (ed.), *New Directions in Political Science:Responding to the Challenge of an Independent World* (2010).
ಹೇ, ಸಿ., (ಸಂ.), ನ್ಯೂ ಡೈರೆಕ್ಷನ್ಸ್ ಇನ್ ಪೊಲಿಟಿಕಲ್ ಸೈನ್ಸ್: ರೆಸ್ಪಾಂಡಿಂಗ್ ಟು ದಿ ಚಾಲೆಂಜ್ ಆಫ್ ಆನ್ ಇಂಡಿಪೆಂಡೆಂಟ್ ವರ್ಲ್ಡ್ (2010). ರಾಜಕಾರಣ ಮತ್ತು ವಿಭಿನ್ನ ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ಜಾಗತಿಕ ಪರಸ್ಪರಾವಲಂಬನೆಯ ಸ್ವರೂಪ, ವ್ಯಾಪ್ತಿ ಮತ್ತು ಸೂಚ್ಯ ಪರಿಣಾಮಕಗಳ ಕುರಿತಾದ ಚಿಂತನಾಮಾಲೆ.

Leftwich, A. ( ed.), *What is Politics? The Activity and Its Study* (2004).
ಲೆಫ್ಟ್‌ವಿಚ್, ಎ. (ಸಂ.), ವಾಟ್ ಈಸ್ ಪಾಲಿಟಿಕ್ಸ್? ದಿ ಆಕ್ಟಿವಿಟಿ ಅಂಡ್ ಇಟ್ಸ್ ಸ್ಟಡಿ (2004). ರಾಜಕಾರಣದ ವಿಭಿನ್ನ ಪರಿಕಲ್ಪನೆಗಳು ಹಾಗೂ ಪರಸ್ಪರ ವೈರುಧ್ಯಕರ ಅಧ್ಯಯನ ಶಿಸ್ತುಗಳ ದೃಷ್ಟಿಕೋನಗಳನ್ನು ಪರಿಶೀಲಿಸುವ ಪ್ರಬಂಧಗಳ ಒಂದು ಉಪಯುಕ್ತ ಸಂಗ್ರಹ.

Marsh, D. and G. Stoker (eds), *Theory and Methods in Political Science,* 3rd edn (2010).
ಮಾರ್ಷ್, ಡಿ. ಮತ್ತು ಜಿ. ಸ್ಟೋಕರ್ (ಸಂ.), ಥಿಯರಿ ಅಂಡ್ ಮೆಥೆಡ್ಸ್ ಇನ್ ಪೊಲಿಟಿಕಲ್ ಸೈನ್ಸ್, ತನೇ ಆವೃತ್ತಿ (2010). ರಾಜಕೀಯ ವಿಜ್ಞಾನದ ಅಧ್ಯಯನ ಶಾಖೆಗಳ ಸ್ವರೂಪ ಮತ್ತು ವ್ಯಾಪ್ತಿಯ ಸುಲಭ ಲಭ್ಯವಾದ, ಸುಸಜ್ಜಿತವಾದ ಮತ್ತು ವ್ಯಾಪಕವಾದ ಶೋಧನೆ.

Savigny, H. and L. Marsden, *Doing Political Science and International Relations: Theories in Action* (2011 ).
ಸ್ಯಾವಿನಿ, ಎಚ್. ಮತ್ತು ಎಲ್. ಮಾರ್ಸ್‌ಡೆನ್, ಡೂಯಿಂಗ್ ಪೊಲಿಟಿಕಲ್ ಸೈನ್ಸ್ ಅಂಡ್ ಇಂಟರ್‌ನ್ಯಾಷನಲ್ ರಿಲೇಷನ್ಸ್: ಥಿಯರೀಸ್ ಇನ್ ಆಕ್ಷನ್ (2011). ಪ್ರಕರಣಗಳನ್ನು (case studies) ಬಳಸುವುದರ ಮೂಲಕ ವಿವಿಧ ಸಿದ್ಧಾಂತಗಳು ಹಾಗೂ ವಿಧಾನಗಳನ್ನು ಪರಿಶೀಲಿಸುವ ರಾಜಕೀಯ ವಿಜ್ಞಾನದ ಒಂದು ಪ್ರವೇಶಿಕೆ.

Source: Heywood, A. (2013). Chapter 1: What is Politics?.
In Politics (4th ed., pp. 2-26). Palgrave Macmillan.